ಕುವೆಂಪು ಕಾದಂಬರಿಗಳಲ್ಲಿ ಸ್ತ್ರೀ ಪಾತ್ರ

ಕನ್ನಡ ಎಂ.ಫಿಲ್ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ

ಸಂಶೋಧಕರು
ಅಂಬಿಕಾದೇವಿ. ಎಸ್

ಮಾರ್ಗದರ್ಶಕರು
ಡಾ|| ಡಿ.ಕೆ. ರಾಜೇಂದ್ರ

ಕರ್ನಾಟಕ ಸಂಘ (ರಿ), ಮಂಡ್ಯ
ಎಂ.ಎಲ್ ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ)
೨೦೦೭–೦೮

ಕುವೆಂಪು ಕಾದಂಬರಿಗಳಲ್ಲಿ ಸ್ತ್ರೀ ಪಾತ್ರ

ಕನ್ನಡ ಎಂ.ಫಿಲ್ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ

ಸಂಶೋಧಕರು
ಅಂಬಿಕಾದೇವಿ. ಎಸ್

ಮಾರ್ಗದರ್ಶಕರು
ಡಾ|| ಡಿ.ಕೆ. ರಾಜೇಂದ್ರ

ಕರ್ನಾಟಕ ಸಂಘ (ರಿ), ಮಂಡ್ಯ
ಎಂ.ಎಲ್ ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ)
೨೦೦೭–೦೮

ಪ್ರಮಾಣ ಪತ್ರ

ಅಂಬಿಕಾದೇವಿ. ಎಸ್ ಅವರು ಕನ್ನಡ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ "ಕುವೆಂಪು ಕಾದಂಬರಿಗಳಲ್ಲಿ ಸ್ತ್ರೀ ಪಾತ್ರ" ಎಂಬ ನಿಬಂಧ ಮೂಲ ಸಂಶೋಧನಾ ಕೃತಿಯಾಗಿದೆ. ಇವರು ನನ್ನ ಮಾರ್ಗದರ್ಶನದಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ. ಎಲ್ ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ಈ ಸಂಶೋಧನಾ ಕಾರ್ಯವನ್ನು ಕೈಗೊಂಡಿದ್ದಾರೆ. ಇದು ಇಡಿಯಾಗಿ, ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: 12/09/08

ಮಾರ್ಗದರ್ಶಕರು
ಡಾ|| ಡಿ.ಕೆ. ರಾಜೇಂದ್ರ
ನಂ. ೪೮, 'ವಂದನ',
ಮಾರುತಿ ದೇವಸ್ಥಾನದ ರಸ್ತೆ
ಸರಸ್ವತಿಪುರಂ, ಮೈಸೂರು ೫೭೦೦೦೯

ಕುವೆಂಪು ಕಾದಂಬರಿಗಳಲ್ಲಿ ಸ್ತ್ರೀ ಪಾತ್ರ

ಪರಿವಿಡಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ.

ಆಧುನಿಕ ಕನ್ನಡ ಸಾಹಿತ್ಯ ಜಗತ್ತಿನ ಶ್ರೇಷ್ಠ ಕವಿ ಕುವೆಂಪು. ಅವರು ಕೈ ಹಾಕದ ಸಾಹಿತ್ಯ ಪ್ರಕಾರವೇ ಇಲ್ಲ. ಮಲೆನಾಡಿನ ಪ್ರಕೃತಿ ಕವಿ ಎಂದೇ ಪ್ರಸಿದ್ಧರಾದವರು. ಇವರ ಸೊಗಸಾದ ಸುಂದರ ಎರಡು ಪ್ರಸಿದ್ಧ ಕೃತಿಗಳೇ ಕಾನೂರು ಸುಬ್ಬಮ್ಮ ಹೆಗ್ಗಡತಿ ಮತ್ತು ಮಲೆಗಳಲ್ಲಿ ಮದುಮಗಳು. ಕುವೆಂಪು ತಮ್ಮ ಕೃತಿಗಳಲ್ಲಿ ಮಲೆನಾಡಿನ ಪ್ರಕೃತಿ ಮತ್ತು ಸಂಸ್ಕೃತಿಯ ಚಿತ್ರಣವನ್ನು ಬಹಳ ಸೊಗಸಾಗಿ ಮೂಡಿಸಿದ್ದಾರೆ. ಈ ಎರಡೂ ಕೃತಿಗಳು ಬೃಹತ್ತು ಮತ್ತು ಮಹತ್ತಿನಿಂದ ಕೂಡಿವೆ.

ಈ ಕೃತಿಗಳು ಹೆಸರೇ ಸೂಚಿಸುವಂತೆ ಸ್ತ್ರೀ ಪಾತ್ರವನ್ನು ಮುಖ್ಯ ವಸ್ತುವಾಗಿಸಿಕೊಂಡಿವೆ. ಅದರಿಂದಲೇ ಅಧ್ಯಯನ ಯೋಗ್ಯವಾಗಿವೆ. ಇಲ್ಲಿ ಅಸಂಖ್ಯಾತ ಪಾತ್ರಗಳಿದ್ದರೂ ಸಹ ಸ್ತ್ರೀಯರ ಪಾತ್ರಗಳಿಗೆ ಮುಖ್ಯವಾದ ಒತ್ತನ್ನು ನೀಡಿದ್ದಾರೆ. ಸಾಮಾಜಿಕ ಮತ್ತು ಪ್ರಾದೇಶಿಕ ನೆಲೆಗಟ್ಟಿನ ದೃಷ್ಟಿಯಿಂದ ಸ್ತ್ರೀಯರಿಗೆ ಉತ್ತಮ ಸ್ಥಾನ–ಮಾನಗಳನ್ನು ನೀಡಿದ್ದಾರೆ.

೧೨ನೆಯ ಶತಮಾನವೊಂದನ್ನು ಹೊರತು ಪಡಿಸಿದರೆ ಸ್ತ್ರೀಯರಿಗೆ ಸಾಮಾಜಿಕವಾಗಿ ದೊರೆತಂತಹ ಸ್ಥಾನಗಳು ಅಷ್ಟಕ್ಕಷ್ಟೆ ಎನ್ನಬಹುದು. ಹಿಂದೂ ಶಾಸ್ತ್ರ ಗ್ರಂಥವಾದ ಮನುಸ್ಮೃತಿಯನ್ನು ಬರೆದ ಮನುವು 'ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಃ' ಎಂದು ಹೇಳಿ ಸ್ತ್ರೀ ಕೇವಲ ಪೂಜಿಸಲ್ಪಡುವವಳು ಎಂದು ಅವಳನ್ನು ಗರ್ಭಗುಡಿಗೆ ಸೀಮಿತಗೊಳಿಸಿದ್ದು ಪರೋಕ್ಷವಾಗಿ ಆಕೆ ಸ್ವಾತಂತ್ರಕ್ಕೆ ಯೋಗ್ಯಳಲ್ಲ ಎಂದು 'ನಃ ಸ್ತ್ರೀ ಸ್ವಾತಂತ್ರ್ಯಂ ಅರ್ಹತಿ' ಎಂದು ಹೇಳಿದನು. ಹೀಗೆ ಹೆಣ್ಣು ಪ್ರಾಚೀನ ಕಾಲದಿಂದಲೂ ಶೋಷಣೆಗೆ ಒಳಾಗಾಗುತ್ತಲೇ ಬಂದಳು. ಅಷ್ಟೇ ಅಲ್ಲದೆ ಹೆಣ್ಣನ್ನು ಶೃಂಗಾರ ವರ್ಣನೆಗೆ ಮಾತ್ರ ಸೀಮಿತಗೊಳಿಸಿಕೊಂಡರು. ಅವಳಿಗೆ ಯಾವುದೇ ಮಹತ್ವವಾದ ಪಾತ್ರವನ್ನು ನೀಡಲೇ ಇಲ್ಲ ಎನ್ನಬಹುದು.

ಕನ್ನಡ ಸಾಹಿತ್ಯ ಚರಿತ್ರೆಯನ್ನು ಪುನರ್ ಅವಲೋಕನ ಮಾಡಿದರೆ ಹತ್ತನೆಯ ಶತಮಾನದಲ್ಲಿ ರಚಿತವಾದ ಕೃತಿಗಳನ್ನು ಗಮನಿಸಿದಾಗ ಅಲ್ಲಿಯೂ ಸ್ತ್ರೀ ಕೇವಲ ಪೋಷಕ ಪಾತ್ರವಾಗಿ ಕಾಣಿಸುತ್ತಾಳೆಯೇ ಹೊರತು ಪುರುಷನ ಸಮಾನವಾದ ಪಾತ್ರವನ್ನು ಅವಳಿಗೆ ನೀಡಲೇ ಇಲ್ಲ. ಪಂಪ, ರನ್ನ, ಪೊನ್ನರಂತಹ ಮಹಾಕವಿಗಳ ಕಾವ್ಯಗಳಲ್ಲಿಯೂ ಸ್ತ್ರೀಯನ್ನು

ಶೃಂಗಾರಕಕ್ಷೆ ಸೀಮಿತವಾಗಿರಿಸಿ, ಅವಳಿಗೆ ಯಾವ ವ್ಯಕ್ತಿತ್ವವಿಲ್ಲದೆ ಪುರುಷ ಹೇಳಿದ್ದಕ್ಕೆಲ್ಲಾ ತಲೆಯಾಡಿಸಿಕೊಂಡು ಹೋಗುವಂತಹ ಪಾತ್ರಗಳನ್ನೇ ನೋಡುತ್ತೇವೆ. ಇದು ಆ ಕಾಲದಲ್ಲಿ ಸ್ತ್ರೀಯರಿಗೆ ಸಿಗದ ಸ್ವಾತಂತ್ರ್ಯವನ್ನು ಸೂಚಿಸುತ್ತದೆ. ಅಲ್ಲದೆ ಅಂದಿನ ಕೃತಿಗಳು ಪುರುಷ ಕೇಂದ್ರಿತವಾಗಿಯೇ ಇವೆ.

೧೨ನೆಯ ಶತಮಾನದಲ್ಲಿ ಮಾತ್ರ ಸ್ತ್ರೀ-ಪುರುಷನ ಹೆಗಲೆಣೆಯಾಗಿ ಎಲ್ಲಾ ರೀತಿಯಲ್ಲಿಯೂ, ಸಾಮಾಜಿಕವಾಗಿ, ಆರ್ಥಿಕವಾಗಿ, ಅಧ್ಯಾತ್ಮಿಕವಾಗಿ ಮತ್ತು ಸಾಹಿತ್ಯಿಕವಾಗಿಯೂ ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಿದ್ದಳು. ಬಹುಶಃ ಜಗತ್ತಿನ ಯಾವುದೇ ಸಾಹಿತ್ಯದಲ್ಲಿಯೂ ಇಂತಹ ಸ್ವಾತಂತ್ರ್ಯವನ್ನು ಕಾಣಲು ಸಾಧ್ಯವಿಲ್ಲ ಎನ್ನಬಹುದು. ಆದ್ದರಿಂದಲೇ ಸ್ತ್ರೀಯರಿಂದ ಉತ್ಕೃಷ್ಟ ಸಾಹಿತ್ಯ ಮೂಡಿಬರಲು ಸಾಧ್ಯವಾಯಿತು. ಆ ನಂತರ ಸ್ತ್ರೀಯರ ಬದುಕು ಮೊದಲಿನಂತೆಯೇ ಆದದ್ದು ವಿಷಾಧನೀಯ ಅಲ್ಲೊಂದು ಇಲ್ಲೊಂದು ಸ್ತ್ರೀ ಪಾತ್ರಗಳು ಕಂಡು ಬಂದರೂ ಅವು ಅಷ್ಟು ಪ್ರಮುಖವಾಗಿ ಮೂಡಿ ಬರಲಿಲ್ಲ.

ಆಧುನಿಕ ಕನ್ನಡ ಸಾಹಿತ್ಯವನ್ನು ಗಮನಿಸಿದಾಗ ಹೊಸಗನ್ನಡದ ಪಂಥಗಳಾದ ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ ಬಂಡಾಯ ಪಂಥಗಳಲ್ಲಿ ಅವಲೋಕಿಸಿದರೆ ನವೋದಯದ ಕೃತಿಗಳಲ್ಲಿ ಅಂದರೆ ಕುವೆಂಪು, ಕಾರಂತ, ಮಾಸ್ತಿ ಮುಂತಾದವರ ಸಾಹಿತ್ಯದಲ್ಲಿ ಸ್ತ್ರೀ ಗೌರವಯುತವಾದ ಮತ್ತು ಪುರುಷನಿಗೆ ಸಮಾನವಾಗಿ ಚಿತ್ರಿತಳಾಗಿದ್ದಾಳೆ. ಅವಳ ಭಾವನೆಗಳಿಗೆ ಅವಳ ಪಾತ್ರಕ್ಕೆ ಆದರ್ಶಮಯವಾದ ಚೌಕಟ್ಟನ್ನು, ಆಯಾಮವನ್ನು ನೀಡಿದ್ದಾರೆ. ಆದರೆ ಪ್ರಗತಿಶೀಲ ಮತ್ತು ನವ್ಯ ಸಾಹಿತ್ಯಗಳಲ್ಲಿ ಸ್ತ್ರೀ ಕೇವಲ ಭೋಗದ ವಸ್ತುವಾಗಿ ಕಾಣಿಸಿದ್ದು, ನವ್ಯದಲ್ಲಂತೂ ಅವಳಿಗೆ ಯಾವ ಉತ್ತಮ ಸ್ಥಾನ, ಮಹತ್ವ ಮತ್ತು ವ್ಯಕ್ತಿತ್ವಗಳೇ ಇಲ್ಲ. ಒಂದು ರೀತಿಯಲ್ಲಿ ಅಶ್ಲೀಲತೆಯಿಂದಲೇ ಚಿತ್ರಿಸಲ್ಪಟ್ಟಿದ್ದಾಳೆ. ದಲಿತ ಮತ್ತು ಬಂಡಾಯ ಸಾಹಿತ್ಯ ಶೋಷಿತ ಪುರುಷರ ಪರವಾದ ಪ್ರತಿಭಟನೆಯೇ ಹೊರತು ಅತಿ ಶೋಷಿತರಾದ ಸ್ತ್ರೀ ಪರವಾದ ಕಾಳಜಿಯಿಲ್ಲ.

ಈ ಎಲ್ಲಾ ಹಿನ್ನೆಲೆಯನ್ನಿಟ್ಟು ಸ್ತ್ರೀ ಪಾತ್ರವನ್ನು ನೋಡಿದಾಗ ನಮಗೆ ನವೋದಯದ ಕವಿ ಕುವೆಂಪು ಮುಖ್ಯರೆನಿಸುತ್ತಾರೆ. ಇವರು ಸ್ತ್ರೀಗೆ ನೀಡಿರುವಷ್ಟು ಸ್ಥಾನವನ್ನು ಮತ್ತ್ಯಾವುದೇ ಲೇಖಕರು ನೀಡಿಲ್ಲವೆನ್ನಬಹುದು. ಈ ನೆಲೆಯಿಂದಲೇ ಕುವೆಂಪು ಅವರ ಕೃತಿಗಳು ಅಧ್ಯಯನ ಯೋಗ್ಯವೆನಿಸಿವೆ. ನವೋದಯ ಸಾಹಿತ್ಯವು ಆ ಕಾಲದ ಆದರ್ಶ, ಕನಸುಗಾರಿಕೆ ಮತ್ತು ವಾಸ್ತವತೆಯನ್ನು ಒಳಗೊಂಡು ರಚನೆಯಾದ ಸಾಹಿತ್ಯವಾಗಿದ್ದು, ಮಲೆಗಳಲ್ಲಿ ಮದುಮಗಳು ಮತ್ತು ಕಾನೂರು ಸುಬ್ಬಮ್ಮ ಹೆಗ್ಗಡತಿ ಕೃತಿಗಳು ನವೋದಯದ ಕೃತಿಗಳಾಗಿರುವುದರಿಂದ ಅವು ಎಲ್ಲ ದೃಷ್ಟಿಯಿಂದಲೂ ವಿಶಿಷ್ಟವಾದ ಮಹತ್ವವನ್ನು ಪಡೆದುಕೊಂಡಿವೆ.

ಕುವೆಂಪು ಅವರು ತಮ್ಮ ಮಹಾಕಾವ್ಯದಲ್ಲಿ ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿಯನ್ನು ಸಾಧಿಸಿರುವಂತೆಯೇ ಸ್ತ್ರೀ-ಪುರುಷರ ನಡುವಿನ ಸಮಾನತೆಯ ತತ್ವವನ್ನು ತಂದಿದ್ದಾರೆ. 'ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹತ್‌ವ್ಯೂಹ ರಚನೆಯೊಳ್' ಎಂದು ಪಾಪಿಯನ್ನೂ ಉದ್ಧಾರ ಮಾಡಿರುವುದಲ್ಲದೆ. ಸ್ತ್ರೀಯರಿಗೆ ಉತ್ತಮ ಸ್ಥಾನಮಾನಗಳೂ ದೊರೆತಿವೆ. ಅಲ್ಲದೆ ಸ್ತ್ರೀಯರನ್ನು ಪೂಜನೀಯ ನೆಲೆಗೇರಿಸಿದ್ದಾರೆ. ಆದ್ದರಿಂದಲೇ ೨೧ನೆಯ ಶತಮಾನದಲ್ಲಿ ವಿಶಿಷ್ಟತೆಯನ್ನು ಮೆರೆದ ಕವಿಯೆನಿಸಿದ್ದಾರೆ.

ಕಾದಂಬರಿ ಅಂಗೈಯಲ್ಲಿನ ರಂಗಭೂಮಿ ಎಂದು ಹೇಳಿರುವಂತೆಯೇ ಅವರ ಕಾದಂಬರಿಗಳಲ್ಲಿ ಮಲೆನಾಡಿನ ಬದುಕಿನ ಅನಾವರಣ, ಸಾಂಸ್ಕೃತಿಕ ದೃಷ್ಟಿ, ಸಮಾಜದ ಪುನರ್‌ಸೃಷ್ಟಿ ಮತ್ತು ವಾಸ್ತವಿಕತೆಯ ಅನಾವರಣವನ್ನು ಕಾಣಬಹುದು. ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಲೇಖಕನಾದವನು ಎಂತಹ ಮಹತ್ವ ಪಾತ್ರ ವಹಿಸಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡು ಸಾಹಿತ್ಯ ಕೃಷಿಮಾಡಿದ್ದಾರೆ. 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಶೀರ್ಷಿಕೆಗಳೇ ಸ್ತ್ರೀ ಸಂಬಂಧಿ ನೆಲೆಯಿಂದ ಕೂಡಿರುವಂತಹವು. ಹೆಗ್ಗಡತಿ ಕೃತಿಯು ಆದರ್ಶ ಪಾತ್ರಗಳನ್ನೊಳಗೊಂಡಿರುವುದಲ್ಲದೆ ಆದರ್ಶ ಬದುಕಿನ ಅನಾವರಣವನ್ನು ಮಾಡುತ್ತದೆ. ಬದುಕಿನ ಏಳು-ಬೀಳಿನಲ್ಲಿ ಮಹಿಳೆ ಎಷ್ಟು ಮುಖ್ಯ ಪಾತ್ರವಾಗಿದ್ದಾಳೆ ಎಂಬುದನ್ನು ವಿವರವಾಗಿ ತಿಳಿಸಿಕೊಡುವ ಕೃತಿ.

'ಮಲೆಗಳಲ್ಲಿ ಮದುಮಗಳು' ಮಲೆನಾಡಿನ ಪರಿಸರದಲ್ಲಿರುವ ಆ ಸಂಸ್ಕೃತಿಯನ್ನು ಅಳವಡಿಸಿಕೊಂಡಿರುವ ಮಹಿಳೆಯರ ಬದುಕಿನ ಸುತ್ತ ನಡೆಯುವ ಘಟನೆಗಳಾಗಿವೆ. ಇದು ಸ್ತ್ರೀಯರನ್ನೇ ಮುಖ್ಯ ದೃಷ್ಟಿಕೋನದಿಂದ ನೋಡುವ ಕೃತಿ. ಹಾಗೆಯೇ ಹೆಸರೇ ಹೇಳುವಂತೆ ಮುಖ್ಯ ಪಾತ್ರವಹಿಸುವವಳೇ ಹೆಣ್ಣು. ಇಲ್ಲಿ ಬರುವ ಸನ್ನಿವೇಶ, ರಚನೆ, ಪರಿಸರ, ಪರಿಣಾಮ, ಸ್ತ್ರೀ ಮನಸ್ಸಿನ ಭಾವನೆಗಳು, ಪ್ರಕೃತಿ, ಮಳೆ, ಸ್ವಾರ್ಥ ಎಲ್ಲವನ್ನು ಈ ಕೃತಿಯು ಅದ್ಭುತವಾಗಿ ಸೆರೆ ಹಿಡಿದಿರುವುದರಿಂದಲೇ ಇದು ಅಧ್ಯಯನ ಯೋಗ್ಯವಾಗಿದೆ. ಅಲ್ಲದೆ ಇದೊಂದು ಮಲೆನಾಡಿನಂತಹ ಸುಂದರ ಪರಿಸರದಲ್ಲಿ ಮೂಡಿ ಬರುವ ಸ್ತ್ರೀಯರ ಚಿತ್ರಣ.

ಕನ್ನಡದ ಎರಡು ಬೃಹತ್ ಕಾದಂಬರಿಗಳಾದ ಮಲೆಗಳಲ್ಲಿ ಮದುಮಗಳು ಸಮಾಜದ ಕೆಳವರ್ಗದ ಸ್ತ್ರೀಯರ ಚಿತ್ರಣ ಮತ್ತು ಅವರ ಸಂಸ್ಕೃತಿಯನ್ನು ಬಿಂಬಿಸಿದರೆ, ಕಾನೂರು ಸುಬ್ಬಮ್ಮ ಹೆಗ್ಗಡತಿ ಮೇಲುವರ್ಗದ ಸ್ತ್ರೀಯರ ಜೀವನ ವಿಧಾನ, ನೋವು-ನಲಿವುಗಳ ಚಿತ್ರಣವನ್ನು ಬಿಂಬಿಸುತ್ತದೆ.

ಕುವೆಂಪು ಅವರ ಕೃತಿಗಳು ಗಾತ್ರದಲ್ಲಷ್ಟೇ ಅಲ್ಲದೆ ಸತ್ವದ ದೃಷ್ಟಿಯಿಂದಲೂ ಮಹತ್ವದ ಪಾತ್ರವನ್ನು ವಹಿಸುತ್ತದೆ. ಹೊಸ ಬದುಕನ್ನೇ ತೆರೆದಿಡುತ್ತಾ ಹೊಸ ಪ್ರಪಂಚಕ್ಕೆ ಕಾಲಿರಿಸಿದಂತಹ ಅನುಭವವನ್ನುಂಟು ಮಾಡುತ್ತವೆ.

ಕುವೆಂಪು ಕಾದಂಬರಿಗಳನ್ನು ಕುರಿತು ಅವು ಪ್ರಕಟಗೊಂಡಂದಿನಿಂದ ಹಿಡಿದು ಇಲ್ಲಿಯವೆರೆಗೂ ವಿಮರ್ಶೆ ಬರುತ್ತಲೇ ಇದೆ. ಈಗಲೂ ಚರ್ಚೆಗೆ ಒಳಗಾಗುತ್ತಿರುವ ಕೃತಿಗಳು. ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಎಲ್ಲಾ ಕಾಲಘಟ್ಟಗಳಲ್ಲಿಯೂ ಈ ಕೃತಿಗಳು ಚರ್ಚೆಗೆ ಒಳಪಟ್ಟಿವೆ. ವಿಮರ್ಶಕರೊಬ್ಬರು ಹೇಳುವಂತೆ, ಅಚ್ಚರಿ ಎಂದರೆ ಇಲ್ಲಿಯವರೆಗೆ ಕುವೆಂಪು ಕಾದಂಬರಿಗಳನ್ನು ಕುರಿತು ಕನ್ನಡದಲ್ಲಿ ಎರಡೂವರೆ ಸಾವಿರ ಪುಟಗಳಷ್ಟು ವಿಮರ್ಶೆ ಪ್ರಕಟಗೊಂಡಿದೆ! ಸಾವಧಾನವಾಗಿ, ಪ್ರಯತ್ನ ಪೂರ್ವಕವಾಗಿ ಶೋಧಿಸಿದರೆ ಇದು ಇನ್ನೂ ಹೆಚ್ಚಾಗಬಹುದಾಗಿದೆ ಎನ್ನುತ್ತಾರೆ. ಆದ್ದರಿಂದ ಇವರ ಅಭಿಪ್ರಾಯವನ್ನು ಸಮರ್ಥಿಸಿದರೆ ಎರಡು ಮಹಾಕಾದಂಬರಿಗಳ ಬಗ್ಗೆ ಚರ್ಚೆಗಳಾಗುವುದು ಸಹಜವೆನಿಸುತ್ತದೆ.

ಕುವೆಂಪು ಕಾದಂಬರಿಗಳು ಹೀಗೆ ಕಾಲದಿಂದ ಕಾಲಕ್ಕೆ ಚರ್ಚೆಗೆ ಗ್ರಾಸವಾಗಿದ್ದರೂ ತನ್ನ ಮಹತ್ವವನ್ನೇ ಹೆಚ್ಚಿಸಿಕೊಂಡಿವೆಯೇ ಹೊರತು ಕಡಿಮೆಯಾಗಿಲ್ಲ. ಮಹಾನ್ ಲೇಖಕರ ಕೃತಿಗಳ ವಿಮರ್ಶೆ ಎಲ್ಲಾ ಕಾಲದಲ್ಲಿಯೂ ಇರುವಂತಹದ್ದು.

ಹಾಗೆಯೇ ಇಷ್ಟೆಲ್ಲಾ ವಿಮರ್ಶೆಗಳು ಬಂದಿದ್ದರೂ ಈ ಕಾದಂಬರಿಗಳನ್ನೇ ಆಯ್ಕೆ ಮಾಡಿಕೊಂಡ ಉದ್ದೇಶ, ನೋಯುವ ಹಲ್ಲಿಗೆ ನಾಲಗೆ ಮತ್ತೆ ಮತ್ತೆ ಹೊರಳುವಂತೆ ಈ ಕೃತಿಗಳಲ್ಲಿ ಬರುವ ಸ್ತ್ರೀ ಪಾತ್ರಗಳ ಆಳವಾದ ಅಧ್ಯಯನ ನಡೆಸುವುದಾಗಿದೆ. ಅಲ್ಲದೆ ತೌಲನಿಕವಾಗಿ ಎರಡೂ ಕಾದಂಬರಿಗಳ ಸ್ತ್ರೀ ಪಾತ್ರಗಳನ್ನು ನೋಡುವುದಾಗಿದೆ. ಇಲ್ಲಿ ಬಳಕೆಯಾಗಿರುವ ಭಾಷೆ, ಕಾದಂಬರಿಯ ಆಶಯ ಅಭಿವ್ಯಕ್ತಿಯನ್ನು ಕುರಿತು ಚಿಂತಿಸುವುದಾಗಿದೆ.

ಅಧ್ಯಾಯ – ೨

ಕಾದಂಬರಿಕಾರರ ಪರಿಚಯ – ಕುವೆಂಪು

ಕನ್ನಡ ಸಾರಸ್ವತ ಲೋಕದ ಮಹಾನ್ ಕವಿ, ರಸಋಷಿ ಕುವೆಂಪು ನವೋದಯದ ಪಂಥದಲ್ಲಿ ಎಲ್ಲಾ ಸಾಹಿತ್ಯ ಪ್ರಕಾರದಲ್ಲಿಯೂ ಸಾಹಿತ್ಯ ಕೃಷಿ ನಡೆಸಿದ್ದಾರೆ, ಅಂದರೆ ಮಕ್ಕಳ ಸಾಹಿತ್ಯದಿಂದ ಹಿಡಿದು ಮಹಾಕಾವ್ಯದವರೆಗೂ ನಡೆಸಿರುವ ಅವರ ಸಾಹಿತ್ಯದ ಕೃಷಿ ಅದ್ಭುತವಾದುದು, ಚಿರಂತನವಾದುದು, ಉತ್ಕೃಷ್ಟವಾದುದು. ಕವಿಯಾಗಿ, ನಾಟಕಕಾರರಾಗಿ, ವಿಮರ್ಶಕರಾಗಿ ಅವರು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿರುವ ಸೇವೆ ಮಹತ್ವವಾದುದಾಗಿದೆ. ಕನ್ನಡಕ್ಕಾಗಿ ಬಾಳಿದ, ಬದುಕಿದ ಕವಿ ವಿಶ್ವಮಾನವ ಸಂದೇಶವನ್ನು ಜಗತ್ತಿಗೆ ಸಾರಿದ ಕವಿ ಕುವೆಂಪು. ವರಕವಿ ದ.ರಾ.ಬೇಂದ್ರೆಯವರು ಹೇಳುವ 'ಯುಗದ ಕವಿ, ಜಗದ ಕವಿಗೆ, ಶ್ರೀ ರಾಮಾಯಣ ದರ್ಶನಂದಿಂದಲೇ ಕೈಮುಗಿದ ಕವಿಗೆ ಮಣಿಯದವರು ಯಾರು?' ಎಂಬ ಮಾತು ಉತ್ಪ್ರೇಕ್ಷೆ ಎನಿಸುವುದಿಲ್ಲ, ಏಕೆಂದರೆ ಯುಗದ ವಾಣಿಯನ್ನು ತಮ್ಮ ಕಾವ್ಯದಲ್ಲಿ ಪೂರ್ಣಪ್ರಮಾಣದಲ್ಲಿ ತಂದವರು ಕುವೆಂಪು.

ಕುವೆಂಪು ಅವರು ೨೯–೧೨–೧೯೦೪ರಲ್ಲಿ ಶಿವಮೊಗ್ಗ ಜಿಲ್ಲೆಯ ಕುಪ್ಪಳ್ಳಿಯಲ್ಲಿ ಜನಿಸಿದರು, ಇವರ ತಂದೆ ವೆಂಕಟಪ್ಪಗೌಡ, ತಾಯಿ ಸೀತಮ್ಮ. ಇವರು ತಮ್ಮ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣವನ್ನು ತೀರ್ಥಹಳ್ಳಿಯಲ್ಲಿ ಪಡೆದು ಮುಂದಿನ ಶಿಕ್ಷಣವನ್ನೆಲ್ಲಾ ಮೈಸೂರಿನಲ್ಲಿ ಪಡೆದರು. ೧೯೨೦ ರಿಂದ ೧೯೨೩ ರವರೆಗೆ ಕುವೆಂಪು ತಮ್ಮ ಪ್ರೌಢಶಿಕ್ಷಣವನ್ನು ಮೈಸೂರಿನ ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ ಅಭ್ಯಸಿಸಿ ೧೯೨೪ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜಿನಲ್ಲಿ ಎಂಟ್ರೆನ್ಸ್ ಪರೀಕ್ಷೆ ಮುಗಿಸಿ, ೧೯೨೭ರಲ್ಲಿ ಬಿ.ಎ. ಆನರ್ಸ್ ಮಾಡಿ ನಂತರ ೧೯೨೯ರಲ್ಲಿ ಎಂ.ಎ. ಪದವೀಧರರಾದರು. ವಿದ್ಯಾಭ್ಯಾಸ ಮಾಡುತ್ತಿರುವಾಗಲೇ ಶ್ರೀ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ ಮತ್ತು ಅರವಿಂದರ ವಿಚಾರಧಾರೆಗೆ ಆಕರ್ಷಿತರಾದರು.

ಕುವೆಂಪು ಎಂ.ಎ. ಪದವೀಧರರಾದ ವರ್ಷವೇ ತಾವು ಓದಿದ ಮಹಾರಾಜ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ವೃತ್ತಿ ಆರಂಭಿಸಿದರು. ನಂತರ ಉಪಪ್ರಾಧ್ಯಾಪಕರಾಗಿ ಬಡ್ತಿ ಪಡೆದು ಬೆಂಗಳೂರಿನಲ್ಲೂ ೧೯೩೬–೪೬ರವರೆಗೆ ಸೇವೆ ಸಲ್ಲಿಸಿದರು. ನಂತರ ಮೈಸೂರಿಗೆ ಹಿಂದಿರುಗಿ, ಪ್ರಾಧ್ಯಾಪಕರು ಹಾಗೂ ಇಲಾಖೆಯ ಮುಖ್ಯಸ್ಥರಾಗಿಯೂ ಕೆಲಸ ನಿರ್ವಹಿಸಿದರು. ೧೯೩೩ ರಲ್ಲಿಯೇ ೧೯ನೇಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕವಿ ಸಮ್ಮೇಳನದ

ಅಧ್ಯಕ್ಷರಾಗಿದ್ದರು. ೧೯೫೫ರಲ್ಲಿ ಮಹಾರಾಜ ಕಾಲೇಜಿನ ಪ್ರಾಂಶುಪಾಲರಾಗಿ ನಂತರ ೧೯೫೬ ರಿಂದ ೧೯೬೦ರವರೆಗೆ ಮೈಸೂರಿನ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಶ್ರೇಷ್ಠ ಸೇವೆಯನ್ನು ಸಲ್ಲಿಸಿ ನಿವೃತ್ತರಾದರು. ಕುವೆಂಪು ಅವರು ಕುಲಪತಿಗಳಾಗಿದ್ದಾಗ ಮೈಸೂರಿನಲ್ಲಿ ಮಹತ್ವಪೂರ್ಣವೆನಿಸಿದ ದೈತ್ಯ ಯೋಜನೆಗಳಿಗೆ ಅಡಿಪಾಯ ಹಾಕಿದ್ದಲ್ಲದೇ ಅವುಗಳಿಗೆ ಒಂದು ಮೂರ್ತ ಸ್ವರೂಪವನ್ನು ನೀಡಿದರು.

ಕುವೆಂಪು ಅವರಿಗೆ ರಾಷ್ಟ್ರಮಟ್ಟದ ಖ್ಯಾತಿಯನ್ನು ತಂದುಕೊಟ್ಟಿದ್ದು ಅವರ ಶ್ರೇಷ್ಠ ಸಾಹಿತ್ಯದ ರಚನೆಗಳು. ಅವರು ತಮ್ಮ ಶಾಲಾ ಕಾಲೇಜು ದಿನಗಳಲ್ಲೇ ವಿಶೇಷವಾದ ಸಾಹಿತ್ಯ ಪ್ರತಿಭೆಯನ್ನು ಹೊಂದಿದ್ದರು. ಆದರೆ ಪ್ರಾರಂಭದಲ್ಲಿ ಕುವೆಂಪು ಆಕರ್ಷಿತರಾಗಿದದ್ದು ಇಂಗ್ಲೀಷ್ ಸಾಹಿತ್ಯದೆಡೆಗೆ. ಅವರು ಶೆಲ್ಲಿ, ಕೀಟ್ಸ್, ವರ್ಡ್ಸ್‌ವರ್ತ್, ಟಾಲ್‌ಸ್ಟಾಯ್ ಮುಂತಾದ ಹೆಸರಾಂತ ಆಂಗ್ಲ ಲೇಖಕರ ಬರಹಗಳಿಂದ ಆಕರ್ಷಿತರಾಗಿದ್ದರು. ಪ್ರೌಢಶಿಕ್ಷಣದ ಕೊನೆಯ ವರ್ಷದ ಹೊತ್ತಿಗೆ, ಅವರು ನೂರಾರು ಕವನಗಳನ್ನು ಇಂಗ್ಲೀಷಿನಲ್ಲಿ ರಚಿಸಿದ್ದು ಸ್ನೇಹಿತರ ಹಾಗೂ ಗುರುಗಳ ಗಮನ ಸೆಳೆದಿದ್ದರು ಗೆಳೆಯರ ಒತ್ತಾಯಕ್ಕೆ ಮಣಿದ ಅವರು "ದಿ ಬಿಗಿನರ್ಸ್ ಮ್ಯೂಸ್" ಎಂದು ಆಂಗ್ಲ ಭಾಷೆಯಲ್ಲಿ ಕವನ ಸಂಕಲನವನ್ನೂ ಪ್ರಕಟಿಸಿದರು. ಇದು ಅವರು ಪ್ರಕಟಿಸಿದ ಮೊತ್ತ ಮೊದಲ ಕೃತಿಯಾಗಿದ್ದು, ಆಗ ಅವರಿಗೆ ಕೇವಲ ೧೮ ವರ್ಷ.

ಕುವೆಂಪು ಅವರ ಸಾಹಿತ್ಯ ಕೃಷಿ ಅತ್ಯಮೂಲ್ಯವಾದದ್ದು ಹಾಗೂ ಅಗಾಧವಾದದ್ದು, ಕನ್ನಡ ಭಾಷೆಯ ಎಲ್ಲಾ ಪ್ರಕಾರಗಳಲ್ಲಿ ೭೫ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ ಪಾಶ್ಚಿಮಾತ್ಯ ಸಾಹಿತ್ಯಕ್ಕೆ ಸವಾಲೆಂಬುವಂತೆ ಹೊಸಗನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರು, ಭಾವಗೀತೆ, ಸಾನೆಟ್, ಕಥನಕವನ, ಗ್ರಂಥ, ಖಂಡಕಾವ್ಯ, ಮಹಾಕಾವ್ಯ, ನಾಟಕ, ಕಾದಂಬರಿ, ಸಾಹಿತ್ಯವಿಮರ್ಶೆ, ಕಾವ್ಯಮೀಮಾಂಸೆ, ವಿಚಾರಸಾಹಿತ್ಯ ಇತ್ಯಾದಿ ಕುರಿತಂತೆ ಅವರು ಹೇರಳವಾಗಿ ಬರೆದಿದ್ದಾರೆ.

ಕುವೆಂಪು ಅವರ ಮೊತ್ತಮೊದಲ ಕವನಸಂಕಲನ 'ಕೊಳಲು' ಇದು ೧೯೩೦ರಲ್ಲಿ ಪ್ರಕಟವಾಯಿತು. ಅವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಕನ್ನಡದ ಮೊದಲ ಮಹಾ ಕಾದಂಬರಿ ಇದು ೧೯೩೬ರಲ್ಲಿ ರಚಿತವಾಯಿತು. ಮತ್ತೊಂದು ಮಹಾ ಕಾದಂಬರಿ 'ಮಲೆಗಳಲ್ಲಿ ಮದುಮಗಳು' ಮಲೆನಾಡಿನ ಸಂಸ್ಕೃತಿ ಮತ್ತು ನಾಗರಿಕತೆಗಳನ್ನು, ಸಾಂಸ್ಕೃತಿಕ ಜೀವನವನ್ನು ಅದ್ಭುತವಾಗಿ ಸೆರೆ ಹಿಡಿದಿರುವ ಕಾದಂಬರಿಯಾಗಿದೆ. ಇದು ೧೯೬೭ರಲ್ಲಿ ರಚಿತವಾಗಿದೆ. ಅವರ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವು ಆಧುನಿಕ ಕನ್ನಡದ ಮೊಟ್ಟ ಮೊದಲ

ಮಹಾಕಾವ್ಯವಾಗಿದೆ. 'ರಾಮಾಯಣ ದರ್ಶನಂ'ನಲ್ಲಿ ಅವರು ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿ ಈ ಮೂರು ಪರಿಕಲ್ಪನೆಗಳನ್ನು ಸಮರ್ಥವಾಗಿ ಅಳವಡಿಸಿಕೊಂಡಿದ್ದಾರೆ. ಅಷ್ಟೇ ಅಲ್ಲದೇ ದಲಿತೋದ್ಧಾರ, ಸಮಾನತೆ, ಮುಂತಾದ ಯುಗದ ಎಲ್ಲಾ ಪರಿಕಲ್ಪನೆಗಳನ್ನು ತಮ್ಮ ಒಂದೇ ಕೃತಿಯಲ್ಲಿ ಅಡಕಗೊಳಿಸಿ, ಈ ಕಾವ್ಯದ ಮೂಲಕ ಒಂದು ವಿಶಿಷ್ಟವಾದ ಕಾಣಿಕೆಯನ್ನು ನೀಡಿದ್ದಾರೆ. ಹಾಗೆಯೇ ಅವರ 'ಚಿತ್ರಾಂಗದ' ಕನ್ನಡದ ಮೊತ್ತಮೊದಲ ಖಂಡಕಾವ್ಯವಾಗಿದೆ.

ಕುವೆಂಪು ಪ್ರಕೃತಿ ಕವಿ, ಕಾಡಿನ ಕವಿ, ಅವರ ಎಲ್ಲಾ ಕವನಗಳಲ್ಲಿ ಪ್ರಕೃತಿ ಒಂದಲ್ಲಾ ಒಂದು ರೀತಿಯಲ್ಲಿ ವಿಶಿಷ್ಟವಾದ ಪಾತ್ರವನ್ನು ವಹಿಸಿದೆ. ಅವರಿಗೆ ಪ್ರಕೃತಿಯ ಒಂದು ವಸ್ತುವೂ ಜಡವಲ್ಲ ಜೀವಂತವಾದವುಗಳು. 'ತೆಗೆ ಜಡವೆಂಬುದು ಬರಿ ಸುಳ್ಳು' ಎಂದು ಹೇಳಿದ್ದಾರೆ. ಕುವೆಂಪು ಅವರ ಪ್ರಮುಖ ಕವನ ಸಂಕಲನಗಳೆಂದರೆ : ನವಿಲು, ಕೃತ್ತಿಕೆ, ಕೋಗಿಲೆ ಮತ್ತು ಸೋವಿಯತ್ ರಷ್ಯಾ, ಕಲಾಸುಂದರಿ, ಪಕ್ಷಿಕಾಶಿ, ಪಾಂಚಜನ್ಯ, ಪ್ರೇಮಕಾಶ್ಮೀರ, ಮಂತ್ರಾಕ್ಷತೆ, ಪ್ರೇತಕ್ಯೂ, ಅನಿಕೇತನ, ಅನುತ್ತರ, ಇಕ್ಷುಗಂಗೋತ್ರಿ ಅಗ್ನಿಹಂತ, ಕುಟೀಚಕ, ಕೊಳಲು, ಷೋಡಶಿ, ಚಂದ್ರಮಂಚಕೆ ಬಾ ಚಕೋರಿ, ಜೇನಾಗುವ, ಶ್ರೀ ಸ್ವಾತಂತ್ರೋದಯ ಮಹಾ ಪ್ರಗಾಥ, ಬಾಪೂಜಿಗೆ ಬಾಷ್ಪಾಂಜಲಿ, ಕಿಂಕಿಣಿ ಮೊದಲಾದವು ಇವರ ಶ್ರೇಷ್ಠ ಕವನ ಸಂಕಲನಗಳಾಗಿವೆ. ಕುವೆಂಪು ಅವರ ಕವನಗಳಲ್ಲಿ ಆಧ್ಯಾತ್ಮ ಮತ್ತು ಪ್ರಕೃತಿ ಎರಡರ ಸಮ್ಮಿಲನವನ್ನು ಕಾಣಬಹುದು. ಪ್ರಕೃತಿಯನ್ನು ದೇವರೆಂದು ಪೂಜಿಸಿದ ಕವಿ, ಸೂರ್ಯೋದಯ-ಚಂದ್ರೋದಯ ದೇವರ ದಯೇ ಕಾಣೋ ಎಂದು ಹಾಡಿದವರು. ಹಾಗೆಯೇ ಮೊಟ್ಟಮೊದಲ ಬಂಡಾಯ ಕವಿಯೂ ಆಗಿದ್ದಾರೆ. ವೈದಿಕ ಸಂಸ್ಕೃತಿಯನ್ನು ಪ್ರಶ್ನಿಸಿ, ಪ್ರತಿಭಟನೆ ನಡೆಸಿ ಕಾವ್ಯರಚನೆ ಮಾಡಿದ್ದಾರೆ. 'ಏನ್ನ ಕೃತಿ ಕಲೆಯಲ್ಲ' ಎಂದು ಹೇಳಿ ಒಬ್ಬ ಸಾಂಸ್ಕೃತಿಕ ನಾಯಕನಾಗಿಯೂ ಕೆಲಸ ಮಾಡಿದ್ದಾರೆ.

ಕುವೆಂಪು ಅವರು ೧೨ ನಾಟಕವನ್ನು ರಚಿಸಿದ್ದಾರೆ. ಅವುಗಳಲ್ಲಿ ಕೆಲವು ಪೌರಾಣಿಕ ವಸ್ತುಗಳನ್ನು ಆಧರಿಸಿದ್ದರೆ, ಮತ್ತೆ ಕೆಲವು ಐತಿಹಾಸಿಕ ವಸ್ತುಗಳನ್ನು ಆಧರಿಸಿವೆ. ಐತಿಹಾಸಿಕ ವಸ್ತುವನ್ನಾಧರಿಸಿದ ನಾಟಕಗಳೆಂದರೆ : 'ಸ್ಮಶಾನ ಕುರುಕ್ಷೇತ್ರ, ಯಮನ ಸೋಲು, ಬೆರಳ್‌ಗೆ ಕೊರಳ್, ಶೂದ್ರತಪಸ್ವಿ, ವಾಲ್ಮೀಕಿಯ ಭಾಗ್ಯ, ಚಂದ್ರಹಾಸ', ಚಾರಿತ್ರಿಕ ನಾಟಕಗಳೆಂದರೆ : ಬಲಿದಾನ, ಮಹಾರಾತ್ರಿ, ರಕ್ತಾಕ್ಷಿ ಮತ್ತು ಬಿರುಗಾಳಿ, ಶೇಕ್ಸ್‌ಪಿಯರ್‌ನ Hamlet ಮತ್ತು Tempest ನಾಟಕಗಳ ಪ್ರಭಾವಕ್ಕೊಳಗಾಗಿ ರಚಿಸಿದ ನಾಟಕಗಳಾಗಿವೆ.

'ಜಲಗಾರ' ನಾಟಕದಲ್ಲಿ ಸಾಮಾಜಿಕ ಸಮಸ್ಯೆಯನ್ನು ಕುರಿತು ವಿಮರ್ಶಿಸಿದ್ದಾರೆ ಮತ್ತು ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾರೆ. ದುಡಿಯುವ ಮಾರ್ಗ ಮೊಟ್ಟಮೊದಲಿಗೆ ಕಾಣಿಸಿಕೊಂಡದ್ದು ಕುವೆಂಪು ಅವರ ಕೃತಿಗಳಲ್ಲಿ ಅದರಲ್ಲಿಯೂ ಶೂದ್ರನನ್ನು ಮೊಟ್ಟಮೊದಲು ನಾಯಕನಾಗಿ ಮಾಡಿದವರು ಕುವೆಂಪು. ಕುವೆಂಪು ಅವರ ಶಿಶು ಸಾಹಿತ್ಯವು ಗಮನಾರ್ಹವಾದುದು. 'ನನ್ನ ಗೋಪಾಲ, ನನ್ನ ಮನೆ, ಬೊಮ್ಮನಹಳ್ಳಿಯ ಕಿಂದರಿ ಜೋಗಿ, ಮರಿವಿಜ್ಞಾನಿ, ಮೇಘಪುರ, ಮೋಡಣ್ಣನ ತಮ್ಮ' ಇವು ಇವರ ಉತ್ತಮ ಶಿಶು ಸಾಹಿತ್ಯಗಳಾಗಿವೆ. ಇದರಲ್ಲಿ 'ಬೊಮ್ಮನಹಳ್ಳಿಯ ಕಿಂದರಿ ಜೋಗಿ'ಯು ಬ್ರ್ಯಾನಿಂಗ್ ಕವಿಯ The Pide Piper of Hamelin ಎಂಬ ಕವಿತೆಯ ಭಾವಾನುವಾದವಾಗಿದೆ. ಇವರು ಕೆಲವು ಕೃತಿಗಳನ್ನು ಅನುವಾದಗಳನ್ನು ಮಾಡಿದ್ದಾರೆ. ಅವುಗಳಲ್ಲಿ ಮುಖ್ಯವಾದವು ಗುರುವಿನೊಡನೆ ದೇವರೆಡೆಗೆ, ಜನಪ್ರಿಯ ವಾಲ್ಮೀಕಿ ರಾಮಾಯಣ, ವೇದಾಂತ, ಜೀವನ ಚರಿತ್ರೆಗಳೆಂದರೆ ಶ್ರೀರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದ, ಹೀಗೆ ಕುವೆಂಪು ಎಲ್ಲಾ ಬಗೆಯ ಸಾಹಿತ್ಯದಲ್ಲಿ ಕೈಯಾಡಿಸಿ ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ದರ್ಶನವನ್ನು ನೀಡಿದ್ದಾರೆ.

ಇವರ ಮೇಲೆ ಪ್ರಭಾವ ಬೀರಿದ ಪ್ರಮುಖ ವ್ಯಕ್ತಿಗಳೆಂದರೆ, ಬುದ್ಧ, ಗಾಂಧೀಜಿ, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಶ್ರೀ ಅರವಿಂದರು ಮೊದಲಾದವರು.

ಹೀಗೆ ಕುವೆಂಪು ಅವರದು ದೈತ್ಯ ಪ್ರತಿಭೆ, ಅತ್ಯುತ್ತಮ ಪ್ರಕೃತಿ ಗೀತೆಗಳನ್ನು ರಚಿಸಿ ಕನ್ನಡದ ವರ್ಡ್ಸ್‌ವರ್ತ್ ಎಂದೇ ಖ್ಯಾತರಾದವರು. ಜಿ.ಎಸ್.ಶಿವರುದ್ರಪ್ಪನವರು ಕುವೆಂಪು ಬಗ್ಗೆ ಹೇಳಿದ ಮಾತುಗಳು ನಿಜಕ್ಕೂ ಗಮನಾರ್ಹವಾಗಿದೆ. "ಹಲವು ಶತಮಾನಗಳಿಗೆ ಒಮ್ಮೆ ಮಾತ್ರ ಸಂಭವಿಸಬಹುದಾದ ಪ್ರತಿಭಾ ವಿಶೇಷ ಕುವೆಂಪು ಅವರದು". ಯಾವುದೇ ನಿರ್ದಿಷ್ಟ ಮತ, ಧಾರ್ಮಿಕ ಪಂಥಗಳಿಗಾಗಲಿ ತತ್ವ ಪ್ರಣಾಳಿಗಾಗಲೀ ಬದ್ಧವಾಗದ ಅವರ ಅನಿಕೇತನ ಪ್ರಜ್ಞೆಯು ಮನುಷ್ಯನ ಅಸ್ತಿತ್ವದ ಅನೇಕ ಸ್ತರಗಳನ್ನು ಶೋಧನೆಗೆ ಒಳಪಡಿಸುವುದರ ಮೂಲಕ ಗ್ರಹಿಸಿ ಅಭಿವ್ಯಕ್ತಪಡಿಸಿರುವ ಅನುಭವ ಪ್ರಪಂಚದ ಹರವು ಹಾಗೂ ವಿಸ್ತಾರಗಳು ಬೆರಗುಗೊಳಿಸುವಂತಿವೆ. ಜಾಗತಿಕ ಸಾಹಿತ್ಯ ಪರಂಪರೆಯ ಪ್ರಜ್ಞೆಯಿಂದ ರಚಿತವಾದ ಅವರ ಸಾಹಿತ್ಯವು ಜಗತ್ತಿನ ಶ್ರೇಷ್ಠವಾದ ಸಾಹಿತ್ಯಗಳ ಜತೆಗೆ ಸರಿಸಮನಾಗಿ ನಿಲ್ಲುವ ಸತ್ವವನ್ನು ಪಡೆದುಕೊಂಡಿದೆ. ಕುವೆಂಪು ಯಾವ ಧರ್ಮವನ್ನು ವಿರೋಧಿಸಲಿಲ್ಲ. ಅಲ್ಲಿನ ಸಂಪ್ರದಾಯ ಮೌಢ್ಯವನ್ನು ವಿರೋಧಿಸಿದರು. ಹಾಗೆಯೇ ನೂರು ಮತದ ಹೊಟ್ಟ ತೂರಿ ಎಲ್ಲ ಸತ್ವದೆಲ್ಲೆ ಮೀರಿ ಎಂದು ಸಾರಿದವರು.

ಒಂದರ್ಥದಲ್ಲಿ ಕುವೆಂಪು ಅವರ ಸಾಹಿತ್ಯವು, ೨೦ನೇ ಶತಮಾನದ ಸಂವೇದನೆಗಳ, ವಿಚಾರಗಳ, ಆಲೋಚನೆಗಳ ಪ್ರತಿನಿಧಿಯೂ, ವ್ಯಾಖ್ಯಾನವೂ ಎಂದರೆ ತಪ್ಪಲ್ಲ. ಈ ದೃಷ್ಟಿಯಿಂದ ಕುವೆಂಪು ಅವರದು ಯುಗ ನಿರ್ಮಾಪಕ ಸತ್ವಉಳ್ಳ ವ್ಯಕ್ತಿತ್ವ ಎಂದು ಹೇಳಬಹುದು "

– ಜಿ.ಎಸ್.ಎಸ್.

"ಋಷಿ ಸದೃಶ ವ್ಯಕ್ತಿತ್ವ ಆಧ್ಯಾತ್ಮಿಕ ಚಿಂತನೆಯ ದೈತ್ಯಪ್ರತಿಭೆಯ ಕವಿ ಕುವೆಂಪು ಧರ್ಮದಲ್ಲಿ ಸಮಾಜದಲ್ಲಿ ಎಲ್ಲದರಲ್ಲಿಯೂ ಆಧ್ಯಾತ್ಮಿಕಕ್ಕೆ ತುಡಿಯುವ ಜೀವ. ಈ ನಾಡಿನ ಪುಣ್ಯ".

– ಡಾ॥ ಎಂ.ಎಂ. ಕಲ್ಬುರ್ಗಿ.

ಹೀಗೆ ಕನ್ನಡ ಸಾಹಿತ್ಯಕ್ಕೆ ಅನನ್ಯವಾದ ಸೇವೆಯನ್ನು ಸಲ್ಲಿಸಿದ ಕವಿ ಕುವೆಂಪು ನಿಧನರಾಗಿದ್ದು ೧೦-೧೦-೧೯೯೪ ರಲ್ಲಿ. ಕುವೆಂಪು ೨೦ನೇ ಶತಮಾನದ ಕನ್ನಡದ ಹಾಗೂ ಭಾರತೀಯ ಕವಿಗಳಲ್ಲೇ ಮೇರು ಕವಿಯಾಗಿದ್ದಾರೆ.

ಅಧ್ಯಾಯ – ೩

ಕಾನೂರು ಹೆಗ್ಗಡತಿ ಕಾದಂಬರಿಯಲ್ಲಿ ಬರುವ ಸ್ತ್ರೀ–ಪಾತ್ರಗಳು

ಅ. ಸೀತೆ

ಆ. ಸುಬ್ಬಮ್ಮ

ಇ. ಗಂಗೆ

ಈ. ನಾಗಮ್ಮ

ಉ. ಗೌರಮ್ಮ

ಊ. ಲಕ್ಷ್ಮಿ

ಅ. **<u>ಸೀತೆ</u>** : – ಕಾನೂರು ಹೆಗ್ಗಡತಿಯ ಮುಖ್ಯ ಪಾತ್ರ ಸೀತೆಯದು. ಮುತ್ತಳ್ಳಿ ಶಾಮಯ್ಯಗೌಡರ ಮುದ್ದಿನ ಮಗಳು. ಇವಳ ಜೀವನದಲ್ಲಿ ನಡೆಯುವುದೆಲ್ಲವೂ ಅಸಾಮಾನ್ಯವಾದ ಘಟನೆಗಳೆ ಆಗಿವೆ. ರಾಮಾಯಣದಲ್ಲಿ ಬರುವ ಸೀತೆಯು ಪ್ರೀತಿಸಿದ ಪತಿಯೊಡನೆ ವನವಾಸ ಅನುಭವಿಸಿದರೆ, ಇಲ್ಲಿನ ಸೀತೆಯು ತನ್ನ ಪ್ರೀತಿಯನ್ನು ಪಡೆಯಲು ವನವಾಸ ಅನುಭವಿಸುತ್ತಾಳೆ. ತಾನು ಪ್ರೀತಿಸಿದ ಹೂವಯ್ಯನಿಂದ ಹಲವಾರು ವಿಷಯಗಳನ್ನು ತಿಳಿದುಕೊಂಡು ಸುಶಿಕ್ಷಿತೆಯಾಗುತ್ತಾಳೆ. ಈಕೆ ಒಂದು ಬಗೆಯ ಮುಗ್ಧ ಜೀವಿ. ಧೈರ್ಯವಂತೆಯಾದರೂ ಮನಸ್ಸಿನಲ್ಲಿರುವುದನ್ನೂ ಯಾರಿಗೂ ಹೇಳದೆ ಒಳಗೆ ಕೊರಗುತ್ತಾಳೆ. ಇವಳದು ಒಂದು ರೀತಿಯ ಆದರ್ಶವಾದ ಪಾತ್ರ ಪ್ರೀತಿಸಿದವನಿಗಾಗಿ ಪ್ರಾಣವನ್ನು ಕೊಡಲು ಸಿದ್ಧ. ಆದರೆ ಇವಳಗರಿವಿಲ್ಲದೆಯೆ ಇವಳ ಬದುಕು ವಿಚಿತ್ರವಾದ ತಿರುವುಗಳನ್ನು ಪಡೆದುಕೊಳ್ಳುತ್ತಾ ಹೋಗುತ್ತದೆ. ಬುಧ್ಧಿವಂತಳಾದರೂ ಕೂಡ ಪ್ರೀತಿಸಿದವನ ಮುಂದೆ ತನ್ನ ಪ್ರೀತಿಯನ್ನು ವ್ಯಕ್ತಪಡಿಸಲಾರದೆ ಸೋಲುತ್ತಾಳೆ.

'ಹೂವಯ್ಯ ಭಾವನನ್ನೇ ಮದುವೆಯಾಗುತ್ತೇನೆ' ಎಂದು ಗೋಡೆಯ ಮೇಲೆ ಬರೆದಿದ್ದ ಸೀತೆ ಅವನ ಮುಂದೆ ಹೇಳಲಾಗದೆ ಒದ್ದಾಡುತ್ತಾಳೆ. ಮುತ್ತಳ್ಳಿ ಗೌಡರು ಮತ್ತು ಗೌರಮ್ಮನ ಪ್ರೀತಿಯ ಮಗಳಾದರೂ, ಚಿನ್ನಯ್ಯನಂಥ ಚಿನ್ನದ ಅಣ್ಣನಿಗೆ ತಂಗಿಯಾಗಿದ್ದು, ಲಕ್ಷ್ಮಿಯ ಅಕ್ಕರೆಯ ಅಕ್ಕನಾದರೂ ಇವಳ ಬಾಳಿನಲ್ಲಿ ಸುಖ, ಶಾಂತಿ, ನೆಮ್ಮದಿ ಎಂಬುದಿಲ್ಲ. ಈ ಕಾದಂಬರಿಯ ಪ್ರಾರಂಭದ ನಂತರದ ಒಂದೆರಡು ಭಾಗವನ್ನು ಬಿಟ್ಟರೆ ಇವಳ ಜೀವನದ ಮುಕ್ಕಾಲು ಪಾಲು ಕತ್ತಲೆಯೆ ತುಂಬಿರುತ್ತದೆ.

ಈ ಕಾದಂಬರಿಯಲ್ಲಿ ಸೀತೆ ಮನೆಯ ಸಿಂಗಪ್ಪಗೌಡರಿಗೂ ಮತ್ತು ಕಾನೂರಿನ ಚಂದ್ರಯ್ಯಗೌಡರಿಗೂ ದ್ವೇಷ ಏರ್ಪಡಲು ಸೀತೆಯ ಪಾತ್ರ ಪರೋಕ್ಷವಾಗಿ ಕಾರಣವಾಗುತ್ತದೆ. ಪ್ರೀತಿಸಿದವನನ್ನು ಕೈ ಹಿಡಿಯಲಾಗದ ಸೀತೆ ಮನಸ್ಸಿಲ್ಲದಿದ್ದರೂ ಕೃಷ್ಣಪ್ಪನನ್ನು ಮದುವೆ ಮಾಡಿಕೊಳ್ಳುವುದರಲ್ಲಿರುತ್ತಾಳೆ. ಅಂದರೆ ಸೀತೆ ಮನಸ್ಸಿನಲ್ಲಿ ಹೂವಯ್ಯನ ಬಗ್ಗೆ ಬೆಟ್ಟದಷ್ಟು ಆಸೆಯಿಟ್ಟುಕೊಂಡಿದ್ದರೂ ಸಂಪ್ರದಾಯಬದ್ಧವಾದ ಮನಸ್ಸು ಅದನ್ನು ಹೇಳಲು ಆಗುವುದಿಲ್ಲ. ಇದಕ್ಕೆ ಕಾರಣ ಅವಳ ಮನಸ್ಸಿನ ದೃಢತೆಯ ಕೊರತೆ.

ಸೀತೆ ಪುರೋಹಿತ ವೆಂಕಪ್ಪಯ್ಯನ ಕುತಂತ್ರದಿಂದ ಹೂವಯ್ಯನನ್ನು ಮದುವೆಯಾಗಬೇಕಾಗಿದ್ದವಳು ರಾಮಯ್ಯನೊಡನೆ ಒಲ್ಲದ ಅಲ್ಲದ ಮದುವೆಯಾಗುತ್ತಾಳೆ. ಅವಳ ಬಾಳು ದುರಂತವಾಗುವುದಕ್ಕೆ ವೆಂಕಪ್ಪಯ್ಯನೇ ಕಾರಣಕರ್ತನಾಗುತ್ತಾನೆ. ಅಂದರೆ ಅವಳು ರಾಮಯ್ಯನನ್ನು ವಿವಾಹವಾದರೂ, ಹೂವಯ್ಯನ ವ್ಯಾಮೋಹದಿಂದ ಹೊರಬರಲಾರದೆ ಮಾನಸಿಕ ರೋಗಿಯಾಗಿ ಕೃಶಳಾಗುತ್ತಾ ಮಂತ್ರ-ತಂತ್ರದಿಂದ ಬರೆಯಂಥ ಶಿಕ್ಷೆಗೆ ಗುರಿಯಾಗುತ್ತಾಳೆ. ನೇರವಾಗಿ ಯಾವುದನ್ನು ವಿರೋಧಿಸದೆ ಪರಿಸ್ಥಿತಿಯ, ಸಂದರ್ಭದ ಕೈಗೊಂಬೆಯಾಗಿ ನರಳುತ್ತಾಳೆ.

ಕಾದಂಬರಿಕಾರರು ಈ ಪಾತ್ರದಲ್ಲಿ ಮನೋವೈಜ್ಞಾನಿಕ ಹಿನ್ನೆಲೆಯನ್ನು ತಂದಿದ್ದಾರೆ. ಅಂದರೆ ಸೀತೆಗೆ ಬೀಳುವ ಕನಸುಗಳು, ಅವೇ ಮುಂದೆ ಅವಳ ಜೀವನದಲ್ಲಾಗುವ ಘಟನೆಗಳಿಗೆ ಸಾಕ್ಷಿಯಾಗಿವೆ. ಅದರಿಂದಲೇ ಅವಳು ಜನರ ದೃಷ್ಟಿಯಲ್ಲಿ ಭೂತ ಹಿಡಿದುಕೊಂಡಿರುವವಳಾದರೆ, ವಾಸ್ತವವಾಗಿ ಮಾನಸಿಕ ರೋಗಿ, ಆ ರೋಗವೇ ಅವಳು ಜ್ವರದಿಂದ ನರಳುವುದು, ಮೂರ್ಛೆ ಹೋಗುವುದು, ಮದುವೆ ದಿನ ತಾಳಿ ಕಟ್ಟುವಾಗಲೂ ಮೈಮೇಲೆ ಪ್ರಜ್ಞೆಯಿಲ್ಲದಂತೆ ವರ್ತಿಸಲು ಕಾರಣವಾಗುತ್ತದೆ. ಸೂತ್ರದ ಗೊಂಬೆಯಂತೆ ಚಿತ್ರಿತವಾಗಿದ್ದಾಳೆ.

ಸೀತೆಯ ಪಾತ್ರ ಎಷ್ಟು ಮುಖ್ಯವಾಗುತ್ತದೆಂದರೆ ಸೀತೆ ಹೂವಯ್ಯನೊಬ್ಬನನ್ನು ಪ್ರೀತಿಸುವುದು, ಆರಾಧಿಸುವುದು, ಆದರೆ ಸೀತೆಗಾಗಿ ಆಸೆಪಡುವವರು ಹಲವಾರು ಮಂದಿ. "ಮುತ್ತಳ್ಳಿ ಶ್ಯಾಮಯ್ಯಗೌಡರ ಮನೆಯ ಜಗಲಿಯಲ್ಲಿ ಪ್ರಕಾಶಮಾನವಾಗಿ ಉರಿಯುತ್ತಿದ್ದ ಲ್ಯಾಂಪಿನ ಬೆಳಕಿಗೆ ಮೋಹಿತವಾಗಿ ನಾಲ್ಕಾರು ದೀಪದ ಹುಳುಗಳು ಹಾರಾಡುತ್ತಿದ್ದವು ಎಂಬಲ್ಲಿ ಸೀತೆಗಾಗಿ ಕಾಯುತ್ತಿದ್ದ ಹೂವಯ್ಯ, ರಾಮಯ್ಯ, ಕೃಷ್ಣಪ್ಪರ ಮನದಾಸೆಗಳು ವ್ಯಕ್ತವಾಗಿವೆ. ಈ ಸಂದರ್ಭ ಗಮನಿಸಿದಾಗ ಸೀತೆಯಿಂದಾಗಿ ಕೆಲವರ ಬದುಕಿನಲ್ಲಿ ಏನೆಲ್ಲಾ ಬದಲಾವಣೆಗಳು ತಿರುವುಗಳನ್ನು ಪಡೆದುಕೊಳ್ಳುವಂತಾಗುತ್ತವೆ.

ಹೂವಯ್ಯನನ್ನು ಚಿಕ್ಕಂದಿನಿಂದಲೂ ಪ್ರೀತಿಸಿ, ಚಿಕ್ಕವರಾಗಿರುವಾಗಲೇ ಗಂಡ-ಹೆಂಡತಿಯ ಆಟವನ್ನು ಆಡಿದ್ದರು. ಆದರೆ ಸೀತೆಗೆ ದೊಡ್ಡವಳಾದ ಮೇಲೆ ಆ ಆಟ ಆಟವಾಗಿಯೇ ಉಳಿಯುತ್ತದೆ. ನಿಜಕ್ಕೂ ಆಕೆಯು ದುರದೃಷ್ಟವಂತೆ, ಅವಳು ಹೂವಯ್ಯನಿಗೆ ಬರೆದ ಪ್ರೇಮಪತ್ರವು ಬೇರೆಯವರ ಕುತಂತ್ರದಿಂದ ಅವನಿಗೆ ತಲುಪದೆ. ಬಲಿಪಶುವಾಗುತ್ತಾಳೆ. ಒಂದೆಡೆ ಧೈರ್ಯವಂತೆಯಾದರೆ ಮತ್ತೊಂದೆಡೆ ಭಾವನೆಗಳನ್ನು ಹೇಳಲಾಗದ ಸಾಧುಜೀವಿಯಾಗಿದ್ದಾಳೆ. ಕಾದಂಬರಿಯ ಹತ್ತೊಂಬತ್ತನೆಯ ಅಧ್ಯಾಯದಲ್ಲಿ ಸೀತೆಯ ತಂಗಿ ಲಕ್ಷ್ಮಿಯಾಡುವ ಗೊಂಬೆಯಾಟ ಹೆಣ್ಣುಗೊಂಬೆ ಸರಿಯಾಗಿ ಕೂರದಿರುವ ಚಿತ್ರವು ಸೀತೆಯ ಬಾಳಿನ ಮುಂದಿನ ಹೆಜ್ಜೆಯನ್ನು ಸೂಚ್ಯವಾಗಿ ತಿಳಿಸಿದೆ. ಅದಕ್ಕಾಗಿಯೇ ಆಕೆಯ ಪಾತ್ರ ತಾನು ಬಯಸಿದ್ದನ್ನು ಪಡೆಯಲಾಗದ, ಬೇರೆಯವರ ಬಯಕೆಗಳಿಗೆ ಕುತಂತ್ರಗಳಿಗೆ ಬಲಿಯಾಗುವಂತದ್ದು.

ಒಟ್ಟಾರೆಯಾಗಿ ಸೀತೆ ತಾನು ಬಯಸ್ಸಿದ್ದನ್ನು ಪಡೆಯಲಾಗದಿದ್ದರೂ ಸಹ ಒಬ್ಬ ವಿಶಿಷ್ಟ ವ್ಯಕ್ತಿಯಾಗಿ ಕಾದಂಬರಿಯುದ್ದಕ್ಕೂ ನಿಲ್ಲುತ್ತಾಳೆ. ಸುಸಂಸ್ಕೃತವಾದಂತಹ ಸ್ತ್ರೀಯಾಗಿದ್ದಾಳೆ. ಕುತಂತ್ರದಿಂದ ರಾಮಯ್ಯನೊಡನೆ ವಿವಾಹವಾದರೂ ಆತನೊಂದಿಗೆ ಒಂದು ಘಳಿಗೆಯೂ ಪತ್ನಿಯಾಗಿರದೆ, ಅವನು ಕಟ್ಟಿದ ತಾಳಿಗೂ ಬೆಲೆ ಕೊಡದೆ, ಕಾನೂರಿನಿಂದ ರಾತ್ರೋರಾತ್ರಿ ಕೆಳ ಕಾನೂರಿಗೆ ಹೋಗಿ ಹೂವಯ್ಯನಲ್ಲಿ ಆಶ್ರಯ ಪಡೆದು, ಮಾಂಗಲ್ಯ ಕಿತ್ತೆಸೆದು, ಅಂದಿನ ಸಮಾಜ ಮಾಡಬಾರದ, ಮಾಡಲಾರದಂಥ ಕೆಲಸವನ್ನು ಮಾಡುತ್ತಾ, ಸ್ವತಂತ್ರಳಾಗುತ್ತಾಳೆ. ಅಂದರೆ ಕಾದಂಬರಿಯ ಅರ್ಧ ಭಾಗದಿಂದ ರೋಗಿಯಾಗಿಯೇ ಇದ್ದ ಈಕೆ ಕೊನೆಗೆ ಸ್ವತಂತ್ರ ವ್ಯಕ್ತಿತ್ವವನ್ನು ಪಡೆಯುತ್ತಾಳೆ.

ಸ್ಪರ್ಶಮಣಿಯಿಂದ ಕಬ್ಬಿಣವೂ ಚಿನ್ನವಾಗುವಂತೆ, ಹೂವಯ್ಯನ ಸತ್ಸಂಗದಿಂದ ವಿಚಾರವಂತೆಯಾಗಿ, ಅವನನ್ನು ಮದುವೆಯಾಗದಿದ್ದರೂ ಅವನಲ್ಲಿ ಶಿಷ್ಯೆಯಾಗಿ ನಿಂತು ತನ್ನ ಬಾಳನ್ನು ಜ್ಯೋತಿಯಂತೆ ಬೆಳಗಿಸಿಕೊಳ್ಳುತ್ತಾಳೆ. ಹಾಗೆಯೇ ಕಾದಂಬರಿಯ ನಾಯಕನ ಸರಿಸಮಾನವಾಗಿ ಅಂತಹ ಭಾವುಕನ ಮಟ್ಟಕ್ಕೆ ನಿಲ್ಲುವಂತಹ ಪಾತ್ರ ಇವಳದು. ಮುಗ್ಧೆಯಾದರೂ ಛಲವಂತೆ, ಧೈರ್ಯವಂತೆ, ಅಶ್ಲೀಲತೆಯ ಸೋಂಕಿಲ್ಲದ ಆದರ್ಶಮಯವಾದ ಪ್ರೇಮಮಯಿಯ, ತ್ಯಾಗಮಯಿಯ ಪಾತ್ರ. ಕಾಲದ ದೃಷ್ಠಿಯಿಂದ ನೋಡಿದಾಗ ಮಹತ್ತರವಾದ ಅಚ್ಚರಿಯನ್ನು ತರುವಂತಹ ವ್ಯಕ್ತಿತ್ವವಾಗಿ ಕಾದಂಬರಿಯುದ್ದಕ್ಕೂ ಚಲನಶೀಲವಾದ ಅಂತೆಯೇ ಬೂದಿ ಮುಚ್ಚಿದ ಕೆಂಡದಂತಿದ್ದರೂ, ಕಾದಂಬರಿಯಲ್ಲಿ ಬರುವ ಸ್ತ್ರೀ ಪಾತ್ರಗಳಲ್ಲೆಲ್ಲ ಸ್ವಲ್ಪಮಟ್ಟಿಗೆ ಸ್ವತಂತ್ರ ವ್ಯಕ್ತಿತ್ವವನ್ನು ಕಾಣುವುದು ಸೀತೆಯಲ್ಲೆ. ಆದರೆ ಅದು ಸಾಮಾಜಿಕ ಕಟ್ಟುಪಾಡಿಗೆ ಸಿಕ್ಕಿ ಅವಳ ವ್ಯಕ್ತಿತ್ವ ಎಡೆ ಎತ್ತುವುದಿಲ್ಲ.

೨. **ಸುಬ್ಬಮ್ಮ** : ಕಾದಂಬರಿಯಲ್ಲಿ ಬಹು ಮುಖ್ಯವಾದಂತಹ ಮತ್ತು ನಾಯಕನ ಸರಿಸಮಾನವಾಗಿ ಕಾಣಿಸಿಕೊಳ್ಳುವ ಪಾತ್ರ. ಅತ್ಯಂತ ಬಡಕುಟುಂಬವಾದ ನೆಲ್ಲುಹಳ್ಳಿಯ ಪೆದ್ದೇಗೌಡರ ಮಗಳೇ ಸುಬ್ಬಮ್ಮ. ಈ ಬಡತನವೇ ಇವಳು ವಯಸ್ಸಾದಂತಹ ಕಾನೂರಿನ ಚಂದ್ರಯ್ಯಗೌಡರಿಗೆ ಮೂರನೆ ಹೆಂಡತಿಯಾಗಲು ಕಾರಣವಾಗುವುದು. ಅತ್ಯಂತ ಕಿರಿಯ ವಯಸ್ಸಿನ ಈಕೆ ಬಡತನದಲ್ಲಿ ನೊಂದು ಬೆಂದು ಕಾನೂರಿಗೆ ಸೊಸೆಯಾದರೂ ಹೊಸ ಬದುಕಿಗೆ ಹೊಂದಿಕೊಳ್ಳಲು ಚಡಪಡಿಸುತ್ತಾಳೆ. ಒಂದು ರೀತಿಯ ಅಸಂಸ್ಕೃತ ಕುಟುಂಬದಿಂದ ಬಂದು ಅಸಂಸ್ಕೃತವಾಗಿಯೇ ವರ್ತಿಸುವ ಗುಣ ಈಕೆಯದು.

ಸುಬ್ಬಮ್ಮ ಒಂದು ಬಗೆಯಲ್ಲಿ ದುರಂತ ನಾಯಕಿಯೇ, ಮದುವೆಯಾದ ಪ್ರಾರಂಭದಲ್ಲಿ ಎಲ್ಲರೊಡನೆ ದ್ವೇಷ ಬೆಳೆಸಿಕೊಂಡು, ಯಾರಿಗೂ ಹೊಂದಿಕೊಂಡು ಹೋಗದೆ, ಪುಟ್ಟಮ್ಮ ಮತ್ತು ವಾಸುವಿನ ಜೊತೆ ಮಲತಾಯಿ ಹೇಗಿರುತ್ತಾಳೆಯೋ ಹಾಗೆಯೇ ಇದ್ದು. ಜಗಳ ಮಾಡುತ್ತಿರುತ್ತಾಳೆ. ಅಂದರೆ ಅವಳಿಗೆ ಮನೆಮಂದಿಯೆಲ್ಲಾ ತನ್ನ ಮಾತಿಗೆ ಬೆಲೆ ಕೊಡಬೇಕು. ತನ್ನ ತಾಳಕ್ಕೆ ತಕ್ಕ ಹಾಗೆ ಕುಣಿಯಬೇಕು ಎಂಬ ದುರಾಸೆಯ ಮನೋಭಾವದ ಹೆಣ್ಣು ಕಾದಂಬರಿಯ ಆರಂಭದಿಂದಲೂ ಕಾಣಿಸಿಕೊಳ್ಳುವ ಅಲ್ಲಲ್ಲಿ ಕಣ್ಮರೆಯಾಗುವ ಪಾತ್ರ.

ಇವಳು ಒಂದು ರೀತಿಯ ಕುಸಂಸ್ಕೃತಿಯ ಹೆಣ್ಣಾದರೂ ಮುಗ್ದೆ. ಸಂಪ್ರದಾಯದ ಒಳಗೆ ಅದ್ದಿ, ಅದನ್ನು ಅನುಸರಿಸಲಾರದೆ, ಬಿಡಲಾಗದೆ, ಕಣ್ಣಿಗೆ ಪಟ್ಟಿಕಟ್ಟಿದ ಕುದುರೆಯಂತೆ, ಕೇವಲ ಚಂದ್ರಯ್ಯಗೌಡರ ಕಾಮದಾಹಕ್ಕೆ ಬಲಿಯಾಗುತ್ತಾಳೆಯೇ ಹೊರತು ಅವರ ನಿಜವಾದ ಪ್ರೀತಿಗೆ ಒಡತಿಯಾಗುವುದೇ ಇಲ್ಲ. ಇವಳದು ಎಂತಹ ಕುಸಂಸ್ಕೃತಿಯೆಂದರೆ ಮುದುಕನಾದರೂ ಚಂದ್ರಯ್ಯಗೌಡರನ್ನು ಮದುವೆಯಾಗುವುದು ಕಾನೂರಿನ ಹೆಗ್ಗಡತಿಯಾಗುವ ಅಧಿಕಾರದ ಆಸೆಯಿಂದ, ಚಿಕ್ಕ ವಯಸ್ಸಿನ ಹೆಂಡತಿಯಾದ್ದರಿಂದ ಗಂಡನ ಸಂಶಯಕ್ಕೆ ಕಾರಣಳಾಗುತ್ತಾಳೆ. ಅವಳು ಯಾವಾಗಲು ಸಿಡುಕಲು, ಬೇರೆಯವರ ಮೇಲೆ ಹರಿಹಾಯಲು ಕಾರಣ ಗಂಡನಿಂದ ಆಕೆಗೆ ದೊರಕದ ತೃಪ್ತಿ. ಕಾದಂಬರಿಕಾರರೇ ಚಿತ್ರಿಸುವಂತೆ, ದಾರಿದ್ರ್ಯದಲ್ಲಿ ಹುಟ್ಟಿ ಬೆಳೆದು, ಅಸಂಸ್ಕೃತರಿಂದ ಪೋಷಿತವಾಗಿ, ಅವರ ನಡೆ-ನುಡಿ ಆಚಾರ ವ್ಯವಹಾರ ಶೀಲಗಳನ್ನು ಕಲಿತ ಸುಬ್ಬಮ್ಮನಲ್ಲಿ ಸುಸಂಸ್ಕೃತ ಸ್ತ್ರೀ ಸಹಜವಾದ ಔದಾರ್ಯ, ಗಾಂಭೀರ್ಯ ನಯವಿನಯ ಸಂಯಮ ಸಂಚಲನಗಳು ಒಂದಿನಿತೂ ಇರಲಿಲ್ಲ. .... ಅವಕಾಶ ಸಿಕ್ಕದೆ ಸುಪ್ತವಾಗಿದ್ದ ಅಹಂಕಾರ, ಛಲ, ದರ್ಪ, ಸ್ವಾರ್ಥ, ದುರಭಿಮಾನ ಮೊದಲಾದ ಕಾಡು ಭಾವಗಳು ಆಕೆ ಕಾನೂರಿಗೆ ಹೆಗ್ಗಡತಿಯಾದ ಕೂಡಲೆ ಭಯಾನಕವಾಗಿ ಹೆಡೆಯೆತ್ತಿ ನಿಂತವು. ಆಕೆ ಎಲ್ಲರಲ್ಲಿಯೂ ಹುಕುಂ ಚಲಾಯಿಸತೊಡಗಿದ್ದಳು - ಇವೇ ಇವಳ ಗುಣ ಸ್ವಭಾವಗಳು.

ಸುಬ್ಬಮ್ಮ ಕ್ರಮೇಣ ಹೀಗೆ ಇರದೆ ರಾಮಯ್ಯ – ಹೂವಯ್ಯರ ಆಗಮನದಿಂದ ಬಹಳಷ್ಟು ಬದಲಾದಳು. ಆದರೆ ಅವಳ ಈ ಬದಲಾವಣೆಯು ಗಂಡನ ಸಂಶಯಕ್ಕೆಡೆಯಾಗಿ ದೈಹಿಕ ಶಿಕ್ಷೆಗೆ ಗುರಿಯಾಗುತ್ತಾಳೆ. ತಲೆಮಾರುಗಳಿಂದ ಒಂದಾಗಿದ್ದ ಮನೆ ಪಾಲಾಗಲು ಇವಳು ನೇರವಾಗಿ ಕಾರಣಳಲ್ಲದಿದ್ದರೂ ಸಹ ಹೂವಯ್ಯನ ಮೇಲಿದ್ದ ಗೌಡರ ಅನುಮಾನವೇ ಇದಕ್ಕೆ ಕಾರಣವಾಗುತ್ತದೆ. ಗೌಡರ ಹುಚ್ಚುತನಕ್ಕೆ ಸುಬ್ಬಮ್ಮ ಬಲಿಪಶುವಾಗುತ್ತಾಳೆ. ಆದರೂ ಆ ಪಶುತನವನ್ನು ವಿರೋಧಿಸುವ ಆಕೆಯ ಧೈರ್ಯ ಮೆಚ್ಚುವಂತಹದ್ದು, ಅದಕ್ಕಾಗಿಯೇ ಅವಳು ರಾತ್ರೋರಾತ್ರಿ ಹೂವಯ್ಯನಿದ್ದ ಕೆಳಕಾನೂರಿಗೆ ಓಡಿ ಹೋಗುತ್ತಾಳೆ. ಅಂದರೆ ಸುಬ್ಬಮ್ಮ ಗಂಡನ ಹುಚ್ಚುತನಕ್ಕೆ ಬಲಿಯಾಗುತ್ತಾಳೆ.

ಹೂವಯ್ಯನ ಪ್ರಭಾವದಿಂದ ಸುಸಂಸ್ಕೃತಳಾಗುವ ಪ್ರಯತ್ನದಲ್ಲಿದ್ದ ಸುಬ್ಬಮ್ಮ ಮತ್ತೆ ಕುಸಂಸ್ಕೃತಿಗೆ ಹಿಂತಿರುಗ ಬೇಕಾಗುತ್ತದೆ ಅದೂ ಗಂಡನ ವಕ್ರ ದೃಷ್ಟಿಯಿಂದಾಗಿ, ಸುಬ್ಬಮ್ಮನ ಪಾತ್ರ ಒಂದು ಬಗೆಯ ಗಟ್ಟಿತನದ ಪಾತ್ರವಾಗಿ, ಎಷ್ಟೇ ನೋವುಗಳಿದ್ದರೂ ಸಹಾ ಅದನ್ನೆದುರಿಸಿ ಬದುಕುವ ಆತ್ಮವಿಶ್ವಾಸವನ್ನು ಹೊಂದುವ ಪಾತ್ರವಾಗಿದೆ. ಹಾಗೆಯೇ ಕೆಲವೊಮ್ಮೆ ಅತ್ಯಂತ ಮುಗ್ಧೆಯಾಗುತ್ತಾಳೆ. ವೇಶ್ಯೆಯಾದ ಗಂಗೆಯ ಮಾತನ್ನು ನಂಬುತ್ತಾಳೆ ಮತ್ತು ಇವಳ ಯೌವ್ವನವನ್ನು ನೋಡಿ ಕಾಮಿಯಾದ ಸೇರೆಗಾರರ ಸ್ವಭಾವ ತಿಳಿದು ಅವನ ಜೊತೆ ಹೋಗಲು ಹೆದರುತ್ತಾಳೆ.

ಇವಳ ಧೈರ್ಯವಂತಿಕೆಗೆ ಮತ್ತೊಂದು ನಿದರ್ಶನವೆಂದರೆ, ನೆಲ್ಲುಹಳ್ಳಿಗೆ ಮರಳಿ ಬಂದಾಗ ತಂದೆ–ತಾಯಿಯರ ಜೊತೆ ದುಡಿದು ನೆಮ್ಮದಿಯಾಗಿದ್ದರೂ ಸಹ ತವರು ಮನೆಯಲ್ಲಿ ಹೆಚ್ಚು ಕಾಲ ಇರಬಾರದೆಂದು, ತನ್ನ ಒಡವೆ ಅನ್ಯರ ಪಾಲಾಗುತ್ತದೆಂದು ಅದನ್ನು ರಕ್ಷಿಸಲು ಒಡವೆಯನ್ನು ಕಾನೂರಿನಿಂದ ತಂದು ಹೂವಯ್ಯನಲ್ಲಿ ರಕ್ಷಿಸಲು ಕೊಡುತ್ತಾಳೆ. ಈಕೆ ಯಾವುದಕ್ಕೂ ಹೆದರದ ಕೆಚ್ಚೆದೆಯ ಮಹಿಳೆಯಾಗಿ ಚಿತ್ರಿಸಲ್ಪಟ್ಟಿದ್ದಾಳೆ.

ಕಾದಂಬರಿಯ ಉದ್ದಕ್ಕೂ ಒಂದಲ್ಲ ಒಂದು ಬದಲಾವಣೆಗೆ ಇವಳ ಪಾತ್ರ ಕಾರಣವಾದರೂ, ಗಂಡ ರೋಗಿಷ್ಟನಾಗಿದ್ದಾಗ ಅವನ ಸೇವೆ ಮಾಡುತ್ತಾಳೆ. ಅವನಿಂದ ಎಷ್ಟೇ ಹಿಂಸೆ ಅನುಭವಿಸಿದ್ದರೂ, ಸೇವೆಯಲ್ಲಿ ಕೊರತೆ ಮಾಡುವುದಿಲ್ಲ. ಆದರ್ಶ ಪತ್ನಿಯಾಗಿಯೇ ಇದ್ದು, ಗಂಡ ಸತ್ತನಂತರ ಹೆಗ್ಗಡತಿಯಾಗಿ ಕಾನೂರು ಮನೆತನದ ಒಡತಿಯಾಗಿ ಯಾವ ಪುರುಷನಿಗೂ ಕಡಿಮೆಯಿಲ್ಲದ ಹಾಗೆ ಗದ್ದೆ, ಮನೆಗಳಲ್ಲಿ ದುಡಿಯುತ್ತಾಳೆ, ಗಂಡಸರು ಕೂಡ ಒಬ್ಬರನ್ನೊಬ್ಬರು ಮೂದಲಿಸುವಾಗ "ಅಯ್ಯೋ ಕೈಲಾಗದಿದ್ದವನೆ, ಕಾನೂರಿಗೆ ಹೋಗಿ ಸುಬ್ಬಮ್ಮ

ಹೆಗ್ಗಡತಿಯ ಕಾರುಬಾರನ್ನಾದರೂ ನೋಡಿ ಕಲಿತುಕೊಂಡು ಬಾ ನಡಿ!" ಎನ್ನುತ್ತಿದ್ದರು. ಇಂತಹ ಗಟ್ಟಿಗಿತ್ತಿಯಾದ, ಘಟವಾಣಿಯಾದ ಸುಬ್ಬಮ್ಮ ಅದುವರೆಗೂ ಶೀಲವಂತೆಯಾಗಿದ್ದವಳು ಸೇರೆಗಾರ ರಂಗಪ್ಪನ ಕುಟಿಲತನದಿಂದ ಅವನ ಜೊತೆ ಅನೈತಿಕ ಸಂಬಂಧದಲ್ಲಿ ತೊಡಗುತ್ತಾಳೆ. ಒಂಟಿ ಹೆಣ್ಣು, ಅದರಲ್ಲಿಯೂ ವಯಸ್ಸಿಗೆ ಬಂದಂತಹ ಒಂಟಿ ಹೆಣ್ಣು ಸುರಕ್ಷಿತವಾಗಿರಲು ಸಾಧ್ಯವಿಲ್ಲ ಎಂಬುದಕ್ಕೆ ಈಕೆಯ ಪಾತ್ರವೇ ಉತ್ತಮ ಉದಾಹರಣೆ. "ಕನ್ನಡ ಸಾಹಿತ್ಯದಲ್ಲಿ ಸುಬ್ಬಮ್ಮನಂಥ ದುರಂತನಾಯಕಿ ಮತ್ತೊಬ್ಬಳು ಕಾಣಸಿಗುವುದಿಲ್ಲ. ತನ್ನ ತಪ್ಪಿಲ್ಲದಿದ್ದರೂ ಬಾಳನುದ್ದಕ್ಕೂ ಸಂಕಷ್ಟಗಳನ್ನೆದುರಿಸಬೇಕಾಯಿತು".– ಬಸವರಾಜಕಟ್ಟೀಮನಿ.

ಕಾದಂಬರಿಯ ಶೀರ್ಷಿಕೆಯೇ ಹೆಗ್ಗಡತಿಯಾಗಿರುವುದರಿಂದ, ಹೆಗ್ಗಡತಿಗಿರಬೇಕಾದ ಸಕಲ ಗುಣಗಳೂ ಈಕೆಗಿದ್ದರೂ, ಗಂಡನಿರುವವರೆಗೆ ಎಷ್ಟೇ ಒರಟಾಗಿಯೂ, ಕುಸಂಸ್ಕೃತಳಾಗಿಯೂ ಇದ್ದರು ಕೂಡ ಮಾನವಂತೆಯಾಗಿದ್ದು ನಿಭಾಯಿಸುತ್ತಾಳೆ. ಆದರೆ ಅವಳ ಕೈಮೀರಿ, ಸೇರೆಗಾರನ ಹದ್ದಿನ ಕಣ್ಣಿನಿಂದ ಅವಳು ತಪ್ಪಿಸಿಕೊಳ್ಳಲಾಗುವುದಿಲ್ಲ. ಅವನ ಪಶುವರ್ತನೆಯಿಂದ ಕೆಟ್ಟ ಸಂಬಂಧದಿಂದ ದುರಂತಮಯವಾದ ಸಾವನ್ನು ಹೊಂದುತ್ತಾಳೆ. ಲೇಖಕರೇ ಹೇಳುವಂತೆ ಅಸಂಸ್ಕೃತಿಯಿಂದ ಸಂಸ್ಕೃತಿಯ ಕಡೆಗೆ ಚಲಿಸುವುದು ಸುಲಭವಲ್ಲ. ಕಠಿಣ ಪ್ರಯತ್ನದಿಂದ ಮಾತ್ರವೇ ಸಾಧ್ಯ. ಆದರೆ ಕುಸಂಸ್ಕೃತಿಯೊಳಕ್ಕೆ ಜಾರಿಹೋಗುವುದು ಸುಲಭ. ಅದಕ್ಕೆ ಸಾಕ್ಷಿ ಇವಳ ಪಾತ್ರ.

ಇಲ್ಲಿನ ಸೀತೆಯ ಪಾತ್ರ ಮುಗ್ಧ ಭಾವ ಜೀವಿಯಾದ ಆದರ್ಶ ಮತ್ತು ಸುಸಂಸ್ಕೃತಿಯದ್ದಾದರೆ, ಕಾದಂಬರಿಯ ಕೇಂದ್ರ ಪಾತ್ರವಾದ ಸುಬ್ಬಮ್ಮನದು ವ್ಯವಹಾರ ಚತುರೆ ಮತ್ತು ವಾಸ್ತವಕ್ಕೆ ಹೆಚ್ಚು ಒತ್ತು ಕೊಡುವ ಕುಸಂಸ್ಕೃತಿಯ ಪಾತ್ರವಾಗಿದೆ.

ಚಂದ್ರಯ್ಯಗೌಡರಂತ ಕಾಮುಕ ಗಂಡನಿಂದಲೂ, ಸೇರೆಗಾರ ರಂಗಪ್ಪನಂಥ ಲಂಪಟ ಪಶುವಿನಿಂದಲೂ ಮತ್ತು ವೇಶ್ಯೆಯಾದ ಗಂಗೆಯ ಕುತಂತ್ರದಿಂದಲೂ ಗಂಡನ ಮರಣದ ನಂತರ ಇವಳು ಹೆಗ್ಗಡೆತನದ ಅಧಿಕಾರ, ತನ್ನ ಪರಿಸ್ಥಿತಿಯ ವಿರುದ್ಧವಾದ ಹೋರಾಟದಲ್ಲಿ ಈಕೆ ಗಳಿಸಿದ ವಿಜಯ ಇದೇ ಇವಳ ಮರಣದ ದುರಂತ ಅಂತ್ಯ. ಅವಳ ವಿಜಯವೇ ಮನತಟ್ಟುವಂತಹದ್ದು. ಸುಬ್ಬಮ್ಮನು ಅತ್ಯಂತ ಹೀನಾಯವಾಗಿ ದುರ್ಮರಣ ಹೊಂದುತ್ತಾಳೆ. ಸುಬ್ಬಮ್ಮ ತನ್ನ ಅಕ್ರಮ ಸಂಬಂಧದಿಂದ ಗರ್ಭಧರಿಸಿ ಅದು ಯಾರಿಗೂ ಗೊತ್ತಾಗಬಾರದೆಂದು ಮನೆತನದ ಮರ್ಯಾದೆ ಉಳಿಸಲು ಹೋಗಿ ತನ್ನೆಲ್ಲಾ ಒಡವೆಯನ್ನು ಮದ್ದಿಗಾಗಿ ಗಂಗೆ ಮತ್ತು ಸೇರೆಗಾರರ ಬಾಯಿಗೆ ಹಾಕುತ್ತಾಳೆ. ಅವಳ ಮದ್ದಿನಿಂದ ಮನೆತನದ ಮರ್ಯಾದೆಯನ್ನೇ ಹಾಳುಮಾಡಿ ಮಗ ರಾಮಯ್ಯನು ಆತ್ಮಹತ್ಯೆ ಮಾಡಿಕೊಳ್ಳಲು ಕಾರಣಕರ್ತೆಯಾಗುತ್ತಾಳೆ.

ಅಂದಿನ ಸಮಾಜದಲ್ಲಿ ಅಲ್ಲಿನ ಪರಿಸರದಲ್ಲಿ ಸುಬ್ಬಮ್ಮನ ಅಸಂಸ್ಕೃತಿ, ಮುಗ್ಧತೆ, ಅಸಹಾಯಕತೆಗಳೇ ಆಕೆಯನ್ನು ಹಾಳು ಮಾಡಿದವು. ಜೊತೆಗೆ ಆಕೆ, ಎಷ್ಟು ದರ್ಪದಿಂದ ಕಾನೂರನ್ನೇ ಆಳಿದಳೋ ಅಷ್ಟೆ ಹಾಳು ಮಾಡಿದಳು. ಒಟ್ಟಿನಲ್ಲಿ ಓದುಗರ ಕರುಣೆ, ಅನುಕಂಪಗಳಿಗೆ ಪಾತ್ರವಾಗುವ ಪಾತ್ರ. ನೆಲ್ಲುಹಳ್ಳಿಯಲ್ಲಿ ಜನರಿಂದ ಸುಬ್ಬಿ ಎಂದು ಕರೆಯಿಸಿಕೊಳ್ಳುತ್ತಿದ್ದವಳು, ಚಂದ್ರಯ್ಯಗೌಡರ ಕೃಪೆಯಿಂದ ಕಾನೂರು ಸುಬ್ಬಮ್ಮ ಹೆಗ್ಗಡತಿಯಾಗಿದ್ದರು ಅದನ್ನು ಉಳಿಸಿಕೊಳ್ಳುವ ಅರ್ಹತೆಯನ್ನು ಹೊಂದದ ಪಾತ್ರ.

೩. **ನಾಗಮ್ಮ** : ಕಾನೂರು ಹೆಗ್ಗಡತಿಯ ನಾಯಕನಾದ ಹೂವಯ್ಯನ ತಾಯಿಯ ಪಾತ್ರ. ಹೂವಯ್ಯನ ಮೇಲೆ ಜೀವನನ್ನೇ ಇಟ್ಟುಕೊಂಡಿದ್ದ ಮಹಾಮಾತೆ. ಮಗನಿಗಾಗಿ ಏನು ಮಾಡಲು ಸಿದ್ಧರಾಗುತ್ತಾರೆ. ಕಾದಂಬರಿಯಲ್ಲಿ ಈಕೆ ಗಂಡನನ್ನು ಕಳೆದುಕೊಂಡು ವಿಧವೆಯಾಗಿರುತ್ತಾರೆ. ತನ್ನ ಸ್ಥಿತಿಗೆ ಮೈದುನ ಚಂದ್ರಯ್ಯನೇ ಕಾರಣ ಎಂದು ದೂಷಿಸುತ್ತಾರೆ. ಹಾಗೆ ನೋಡಿದರೆ ನಿಜವಾದ ಹೆಗ್ಗಡತಿ ನಾಗಮ್ಮನೇ ಆಗಬೇಕಿತ್ತು. ಆದರೂ ಈಕೆ ಮಗನ ಏಳಿಗೆಯಲ್ಲೇ ಸುಖ ಕಾಣುತ್ತಾಳೆ. ಇವಳಿಗೂ ಸ್ತ್ರೀ ಸಹಜವಾದ ಮತ್ಸರ, ಕೋಪ ಎಲ್ಲಾ ಗುಣಗಳೂ ಇರುತ್ತವೆ. ಆದರೂ ಈಕೆ ಚಂದ್ರಯ್ಯಗೌಡರ ಮಕ್ಕಳನ್ನು ಚೆನ್ನಾಗಿ, ಪ್ರೀತಿಯಿಂದಲೇ ನೋಡಿಕೊಳ್ಳುತ್ತಾಳೆ. ಆದರೆ ಸುಬ್ಬಮ್ಮನನ್ನು ನೋಡಿದಾಗ ಮಾತ್ರ ಮತ್ಸರ ಹೆಡೆ ಎತ್ತುತ್ತದೆ. ಸಣ್ಣ ಪುಟ್ಟ ಕಾರಣಗಳಿಗೂ ನಾಗಮ್ಮ ಮತ್ತು ಸುಬ್ಬಮ್ಮ ಜಗಳಮಾಡುತ್ತಾರೆ. ಸುಬ್ಬಮ್ಮ ಹೇಳುವ 'ಗಂಡನ್ನ ಕಳಕೊಂಡ ಮುಂಡೇರ ಹಣೇಬರವೇ ಹಿಂಗೆ, ಅವರ ಕಣ್ಣು ಇಂಗೇ ಹೋಗಲಿ, ಸುಳ್ಳು ಹೇಳೋದು' ಎಂದು ಬಯ್ಯುವುದು ಇದಕ್ಕೆ ಸಂಸ್ಕೃತಿಯ ನಾಗಮ್ಮ ಮೌನವಾಗಿರದೆ, ಬಾಯಿಗೆ ಬಂದಂಗೆ ಬಯ್ತಿಯೇ? ದಿಂಡೆ ಬಸವಿ? ಎನ್ನುವುದು ಸ್ತ್ರೀ ಸಹಜ ಕೋಪವನ್ನು ಎತ್ತಿ ಹಿಡಿದಿದೆ. ಅಂದರೆ ಸುಸಂಸ್ಕೃತಳಾದ ನಾಗಮ್ಮ ಕುಸಂಸ್ಕೃತಳಾದ ಸುಬ್ಬಮ್ಮನ ಜೊತೆ ಹೊಂದಿಕೊಳ್ಳಲಾಗುವುದಿಲ್ಲ. ಚಂದ್ರಯ್ಯಗೌಡರಿಗೆ ಅನಾದರವಾದರೂ ಸಹ ನಾಗಮ್ಮನಿಗೆ ಚಂದ್ರಯ್ಯನ ಮಕ್ಕಳ ಮೇಲೆ ಅಪಾರ ಮಮತೆ. ಇದು ಆಕೆಯ ವಾತ್ಸಲ್ಯಮಯ ಮಾತೃ ಹೃದಯಕ್ಕೆ ಸಾಕ್ಷಿಯಾಗಿದೆ. ಈ ಅನಾದರದಿಂದಲೇ ಮಗನು ಪಾಲು ತೆಗೆದುಕೊಳ್ಳಲಿ ಎಂದು ಒತ್ತಾಯಿಸುತ್ತಾರೆ. ಪಾಲಾದ ಮೇಲೆ ಇರುವ ಆಸ್ತಿಯನ್ನು ಮಗನೊಡನೆ ಸೇರಿ ಜೋಪಾನ ಮಾಡಿ ಸ್ವತಃ ತಾವೇ ಹೋಗಿ ಗದ್ದೆಯಲ್ಲಿ ಕೆಲಸ ಮಾಡುತ್ತಾಳೆ. ಸುಬ್ಬಮ್ಮ ಮನೆಯಲ್ಲಿದ್ದುದನ್ನು ಕಂಡು ಅಸೂಯೆ ಪಟ್ಟರೂ ತಕ್ಷಣ ಮಗನ ಸಂತೋಷದಲ್ಲಿ ಭಾಗಿಯಾಗುತ್ತಿದ್ದರು.

ಎಷ್ಟೇ ಕೋಪ ದ್ವೇಷಗಳಿದ್ದರೂ ನಾಗಮ್ಮ ಮಗನಿಗೆ ಆದರ್ಶವಾದ ತಾಯಿಯಾಗಿದ್ದರು. ಚಿಕ್ಕವರಿರುವಾಗಲೇ ಗಂಡನನ್ನು ಕಳೆದುಕೊಂಡ ಈಕೆಗೆ ಮಗನೆಂದರೆ ಅಪಾರ ಪ್ರೀತಿ, ಆತ ಬೇಟೆಗೆ ಹೋದರೂ ದೇವರಿಗೆ ಹರಕೆ ಮುಡಿಪು ಎಲ್ಲವನ್ನು ಕಟ್ಟಿ ತೃಪ್ತಿ ಪಡುತ್ತಿದ್ದರು. ಹೂವಯ್ಯನಿಗೆ ಪಾಲಿನಲ್ಲಿ ಮೋಸ ಮಾಡಿದಾಗ ನಾಗಮ್ಮ ಮಾತ್ರ ಕೋಪದಿಂದಲೇ ಸಾಲ ಹೊರಿಸಿದವರನ್ನೆ ಬಯ್ಯುತ್ತಾ, 'ಯಾರು ಹೇಳ್ದೋರು ಆ ಸಾಲ ಎಲ್ಲಾ ನಿನ್ನ ಓದೋಕೆ ಆಯ್ತು ಅಂತಾ? ಅವರ ಹೆಂಡಿರು ಮಕ್ಕಳಿಗೆ ಜರತಾರಿ ಸೀರೆಯೇನು? .... ಇವನ್ನೆಲ್ಲಾ ಮಾಡ್ಸಿ ಪೆಟ್ಟಿಗೆಗೆ ತುಂಬಿದ್ರ ಸಾಲ ಆಗ್ದೆ ಬಿಡ್ತದೇನು?' ಎಂದು ಬಯ್ದರೂ ಕೂಡ ಮಗನ ಮಾತನ್ನು ಕೇಳಿ ಅವನಲ್ಲಿಯೇ ನಿಧಿಯನ್ನು ಕಾಣುತ್ತಾರೆ.

ಇವರ ಪಾತ್ರದಲ್ಲಿ ಈಕೆಗೆ ತಿಳಿದೋ ತಿಳಿಯದೆಯೋ ಮತ್ಸರ ಹೆಡೆಯಾಡುತ್ತದೆ ಪಾಲಾದ ನಂತರವೂ ಚಂದ್ರಯ್ಯನಿಗೆ ಎದೆ ಚುಚ್ಚುವಂತಾಗಲಿ ಎಂದೇ ವಾಸುವಿಗೆ ಊಟ ಬಡಿಸುತ್ತಾರೆ. ಆರಂಭದಲ್ಲಿ ಸುಬ್ಬಮ್ಮನೊಡನೆ ಜಗಳಾ ಮಾಡುತ್ತಿದ್ದ ಈಕೆಯೇ ಸುಬ್ಬಮ್ಮನ ಜೊತೆ ಹೊಂದಿಕೊಂಡು ಹೋಗಿ ಹಿರಿಯಳಾದ ತನ್ನ ಗುಣಕ್ಕೆ ತಕ್ಕ ಹಾಗೆ ನಡೆದುಕೊಳ್ಳುತ್ತಾರೆ.

ಈಕೆಯು ಸಂಪ್ರದಾಯಬದ್ಧಳಾದ ಮನೆತನದವರಾದರೂ ಸಹ ಅನೇಕ ದೇವರುಗಳಿಗೆ ಹರಕೆ, ಮುಡಿಪು ಕಟ್ಟಿದರೂ ಸಹ ಮಗನ ಮಾತಿಗೆ ಹೆಚ್ಚಿನ ಬೆಲೆ ಕೊಡುತ್ತಿರುತ್ತಾಳೇ. ಅಲ್ಲದೆ ಮಗನಿಗೆ ಸೀತೆ ಸಿಗದಿದ್ದಾಗ ಹೋಗಲಿ ಬಿಡು ಅವರ ಹೆಣ್ಣು ನಮಗ್ಯಾಕೆ .... ನಿನಗೇನು ಹೆಣ್ಣಿಗೆ ಬರವೇ ಎಂದು ಸಮಾಧಾನ ಮಾಡುತ್ತಿದ್ದರು. ಆ ಹೆಣ್ಣಿಲ್ಲದಿದ್ದರೆ ಈ ಹೆಣ್ಣು? ಎಂದು ಹೇಳುತ್ತಾರೆ.

ಆದರ್ಶಮಾತೆ ಮಮತೆಯ ಮೂರ್ತಿ ಸಂಪ್ರದಾಯಬದ್ಧ ಸ್ವಾಭಿಮಾನಿಯಾಗಿ ಈಕೆಯ ಪಾತ್ರ ಬಂದಿದೆ. ಪುಟ್ಟಮ್ಮನ ಮದುವೆಗೆ ಕರೆಯದಿದ್ದಾಗ, ತನ್ನ ಅಸಮಾಧಾನದಿಂದ 'ಬಿಳೀ ಕಾಗದದ ಮೇಲೆ ಕರೀ ಗೀಟು ಗೀಚಿ ಗೀಚಿ ಕೊಟ್ಟು ಬಿಟ್ಟರೆ ಕರೆ ಬಂದ ಹಾಂಗಾಯ್ತೇನು?' ಎಂದು ಪುಟ್ಟಮ್ಮನ ಮೇಲೆ ಪ್ರೀತಿಯಿದ್ದರೂ ಮದುವೆಗೆ ಹೋಗುವುದಿಲ್ಲ. ಆದರೂ ಮಾತೃ ಸಹಜವಾದ ಪ್ರೀತಿಯಿಂದ ಮದುವೆಯ ದಿಬ್ಬಣ ತಮ್ಮ ಊರಿನ ಮೂಲಕವೇ ಹೋಗುತ್ತದೆಂದು, ಚಪ್ಪರ ಮತ್ತು ಪಾನಕವನ್ನು ಸಿದ್ಧಪಡಿಸಿರುತ್ತಾರೆ. ಆದರೆ ಅದು ಬರದಿದ್ದಾಗ ನಿರಾಶೆಯಿಂದ ನೊಂದುಕೊಳ್ಳುತ್ತಾರೆ.

ಈ ಕಾದಂಬರಿಯ ಮುಕ್ಕಾಲು ಪಾಲು ಕಾಣಿಸಿಕೊಳ್ಳುವ ಪಾತ್ರ ಹಾಗೆಯೇ ಚಂದ್ರಯ್ಯಗೌಡರಿಂದ ಇವರಿಗೆ ನಾನಾ ವಿದಧ ತೊಂದರೆಯಿದ್ದರೂ ಸುಬ್ಬಮ್ಮ ಕೆಳಕಾನೂರಿಗೆ ರಾತ್ರೋರಾತ್ರಿ ಓಡಿ ಬಂದಾಗ ಹಳೆ ದ್ವೇಷವನ್ನೂ ಮರೆತು ಅವಳಿಗೆ ಆಶ್ರಯ ನೀಡಿ ಸಮಾಧಾನ ಮಾಡುತ್ತಾರೆ. ಇಷ್ಟೆಲ್ಲಾ ಒಳ್ಳೆಯ ಗುಣಗಳಿದ್ದ ನಾಗಮ್ಮನಿಗೆ ಇದ್ದ ಒಂದೇ ಒಂದು ಯೋಚನೆಯೆಂದರೆ ಮಗನು ಮದುವೆಯಾಗದೆ ಇದ್ದದ್ದು.

ನಾಗಮ್ಮನಿಗೆ ತಾನು ಅಷ್ಟೊಂದು ಪ್ರೀತಿಸುವ ಮಗ ಸನ್ಯಾಸಿಯಾಗಿಯೇ ಇದ್ದು ಬಿಡುತ್ತಾನೆ ಎಂಬ ಯೋಚನೆಯಲ್ಲಿಯೇ ಕೊರಗುತ್ತಾರೆ. ಆ ಯೋಚನೆಯಲ್ಲಿಯೇ ಕೊರಗಿ ರೋಗ ಬಂದು, ಸಾಯುವ ಕೊನೆ ಗಳಿಗೆಯಲ್ಲಿಯೂ ಮಗನ ಜೊತೆ "ನೀನು ಮದುವೆ ಮಾಡಿಕೊಳ್ತೀನಿ ಅಂತ ಮಾತು ಕೊಟ್ಟಿದ್ರೆ ಯತೆಯಿಲ್ಲದೆ ಸಾಯ್ತಿದ್ದೆ" ಎಂದು ಹೇಳುತ್ತಾ, ಅವರಿದ್ದಿದ್ರೆ ನಿನಗೆ ಮದುವೆಯಾಗ್ತಿತ್ತು ಎಂದು ಅಳುತ್ತಾರೆ. ಮಾತು ಪಡೆದೇ ಪ್ರಾಣ ಬಿಡುತ್ತಾರೆ.

ಒಟ್ಟಾರೆಯಾಗಿ ಕಾನೂರಿನಲ್ಲಿ ಹೆಗ್ಗಡತಿಯಾಗಿ, ಅತ್ತಿಗೆಯಾಗಿ, ತಾಯಿಯಾದ ಈಕೆ ಅತ್ತೆಯಾಗಲು ಆಸೆಪಟ್ಟರೂ ಆಗಲಿಲ್ಲ. ಅದಕ್ಕಾಗಿಯೇ ಮಗನನ್ನು ಎಷ್ಟೆಲ್ಲಾ ಒತ್ತಾಯಿಸಿದರು ಪ್ರಯೋಜನವಾಗಲಿಲ್ಲ. ನಿಷ್ಕಲ್ಮಶವಾದ ಪ್ರೀತಿ ಈಕೆಯದು.

ಸ್ತ್ರೀ ಸಹಜವಾದ ಪ್ರೀತಿ, ಪ್ರೇಮ, ಅಸೂಯೆ ಎಲ್ಲವನ್ನು ಹೊಂದಿದ್ದರೂ ಆದರ್ಶ ತಾಯಿಯಾಗಿದ್ದರೂ ಕೂಡ, ಅಜ್ಜಿಯಾಗುವ ಕನಸಿನಲ್ಲಿಯೇ ಅಂತ್ಯ ಕಂಡ ಜೀವ ಇವರದು, ಇವರ ಕನಸು ಕನಸಾಗಿಯೇ ಉಳಿಯುತ್ತದೆ. ಮಗನ ಉತ್ತಮ ಯಶಸ್ಸಿನಲ್ಲಿ ತನ್ನ ಬಾಳನ್ನು ಸಾರ್ಥಕಪಡಿಸಿಕೊಂಡ ಪಾತ್ರ.

೪. <u>ಗಂಗೆ</u> : ಈಕೆ ಕಾನೂರು ಹೆಗ್ಗಡತಿ ಕೃತಿಯಲ್ಲಿ ಬರುವ ವೇಶ್ಯೆಯ ಪಾತ್ರ. ಚಂದ್ರಯ್ಯಗೌಡರೇ ಅಲ್ಲದೆ ಇವಳು ಅನೇಕರ ಜೊತೆ ಸಂಬಂಧ ಹೊಂದಿದ್ದಳು. ಕಾನೂರು ಮನೆತನ ಹಾಳಾಗಲು, ಸುಬ್ಬಮ್ಮನು ಅವನತಿ ಹೊಂದಲು ಗಂಗೆಯು ನೇರವಾಗಿಯೇ ಕಾರಣಳಾಗುತ್ತಾಳೆ. ಕುತಂತ್ರಿಯಾದ ಸೇರೆಗಾರ ರಂಗಪ್ಪಶೆಟ್ಟಿ ಘಟ್ಟದ ಕೆಳಗಿಂದ ತಂದ ಹೆಣ್ಣಾಳು, ಅವನ ಪ್ರೇಯಸಿ ಕೂಡ. ಇವಳದು ಕಾದಂಬರಿಯಲ್ಲಿ ಅಲ್ಲಲ್ಲಿ ಕಾಣಿಸಿಕೊಳ್ಳುವ ಪಾತ್ರ. ಮುಗ್ಧೆಯಾದ ಸುಬ್ಬಮ್ಮನ ಸ್ನೇಹವನ್ನು ಮಾಡಿಕೊಂಡು ಅವಳಿಗೆ ದ್ರೋಹ ಮಾಡುತ್ತಾಳೆ.

ಗಂಗೆ ತುಂಬಾ ಬಡವಿ, ಕೃಷ್ಣಯ್ಯನನ್ನು ಪ್ರೀತಿಸುತ್ತಿದ್ದಳು, ಆದರೇ ಅದೇ ಊರಿನ ವಯಸ್ಸಾದ ನಾಲ್ಕೈದು ಮದುವೆಯಾಗಿದ್ದ ಸಾಹುಕಾರನನ್ನು ಅನಿವಾರ್ಯ ಕಾರಣಗಳಿಗಾಗಿ ಮದುವೆಯಾಗುತ್ತಾಳೆ. ಆದರೂ ತನ್ನ ಹಿಂದಿನ ಪ್ರಣಯವನ್ನೇ ಮುಂದುವರೆಸಿ ಗಂಡನಿಗೆ ಸಿಕ್ಕಿ ಬೀಳುತ್ತಾಳೆ. ಪ್ರಿಯಕರ ಗಂಡ ಇಬ್ಬರಿಂದಲೂ ದೂರವಾಗಿ, ಸೇರೆಗಾರ ರಂಗಪ್ಪನ ಜೊತೆ ಕಾನೂರಿಗೆ ಬಂದಿರುತ್ತಾಳೆ. ಆದರೆ ಇವಳು ಜನರನ್ನು ದಾರಿತಪ್ಪಿಸುವ ಕೆಲಸ ಮಾಡುತ್ತಿದ್ದು, ಹೆಣ್ಣಿಗಿರಬೇಕಾದ ಸಹಜ ನಾಚಿಕೆಯು ಇಲ್ಲದ ಅಸೂಯಾಪರಳಾದ ಹೆಣ್ಣು ಈಕೆ. ಕಾದಂಬರಿಕಾರರು ಇವಳನ್ನೆ ಮಾಯಗಾರ್ತಿ ಗಂಗೆ ಎಂದೇ ಕರೆದಿದ್ದಾರೆ.

ಆದರೆ ಇವಳು ಸುಬ್ಬಮ್ಮನ ಸ್ಥಾನವನ್ನು ಕಿತ್ತುಕೊಳ್ಳಲು, ಚಂದ್ರಯ್ಯ ತನ್ನ ಜೊತೆಗೆ ಇರಬೇಕೆಂದು ಬಯಸಿ ಅನೇಕ ಕುಟಿಲತನವನ್ನು ಮಾಡುತ್ತಾಳೆ. ಮುಗ್ಧೆ ಸುಬ್ಬಮ್ಮನನ್ನು ನಂಬಿಸುತ್ತಾಳೆ ತಾನು ಕೂಡ ವಿಷ ಬೆರೆಸುವ ಕಾರ್ಯಕ್ಕೆ ಕೈ ಹಾಕುತ್ತಾಳೆ. ಕುಕ್ಕುಟ ಪ್ರಸಂಗವೇ ಇವಳೆಷ್ಟು ಕೆಟ್ಟ ಹುಳು ಎಂಬುದಕ್ಕೆ ನಿದರ್ಶನವಾಗಿದೆ. ಸುಬ್ಬಮ್ಮನಿಂದ ಗೌಡರನ್ನು ದೂರ ಮಾಡಿ ತಾನೇ ಗೌಡರ ಜೊತೆಯು ಇರುತ್ತಾಳೆ. ಸುಬ್ಬಮ್ಮನನ್ನು ಗೌಡರು ಹಿಂಸಿಸಲು ದ್ವೇಷಿಸಲು ಕುಮ್ಮಕ್ಕೂ ಕೊಡುತ್ತಾಳೆ. ಅಷ್ಟೇ ಅಲ್ಲದೆ ಓಬಯ್ಯನನ್ನು ತನ್ನ ಮಾಯದ ಬಲೆಗೆ ಬೀಳಿಸಿಕೊಳ್ಳುತ್ತಾಳೆ.

ಚಂದ್ರಯ್ಯನು ಇಲ್ಲದಿದ್ದಾಗ ಕಾನೂರಿನ ಮನೆಯಲ್ಲಿ ಸೇರೆಗಾರರೊಡನೆ ಕುಣಿದು, ಕುಡಿದು ವಾಲಾಡಿ, ಹೂವಯ್ಯನಿಂದ ಏಟನ್ನು ತಿನ್ನುತ್ತಾಳೆ. ಇವಳನ್ನೇ ನಂಬಿದ್ದ ಸುಬ್ಬಮ್ಮನಿಂದಲೂ ದ್ವೇಷಿಸಲ್ಪಟ್ಟು, ಒಡವೆಯನ್ನು ತೆಗೆದುಕೊಂಡು ಹೋಗಲು ಸುಬ್ಬಮ್ಮ ಬಂದಾಗ ಅವಳ ಜೊತೆ ಜಗಳ ಮಾಡುತ್ತಾಳೆ.

ಇವಳ ಪಾತ್ರವು ಒಬ್ಬ ಕೆಟ್ಟ ಮಹಿಳೆ ಹೇಗಿರಬಹುದೋ ಹಾಗೆಯೇ ಅಷ್ಟೆಲ್ಲ ಅವಗುಣಗಳಿಂದಲೇ ಚಿತ್ರಿತವಾಗಿದ್ದು, ಇವಳು ಉಂಡ ಮನೆಗೆ ಜಂತಿ ಎಸಿಸುವ ಕೆಲಸ ಮಾಡುತ್ತಾಳೆ. ಆರಂಭದಲ್ಲಿ ಚಂದ್ರಯ್ಯಗೌಡರಿಗೆ ತಲೆ ಬಾಚಿ ಹೂ ಮುಡಿಸುತ್ತಿದ್ದವಳನ್ನು ನೋಡಿದಾಗಲು ಇವಳ ಮೇಲೆ ಅನುಮಾನ ಪಡದ ಸುಬ್ಬಮ್ಮ, ಇವಳ ಕೆಟ್ಟ ನಡತೆ ಕಂಡು ಇವಳ ಜೊತೆ ದೊಡ್ಡ ಜಗಳವನ್ನೇ ಮಾಡುತ್ತಾಳೆ. ಗಂಗೆ ಸೇರೆಗಾರರೊಡನೆ ಸೇರಿಕೊಂಡು ಗೌಡರ ಕಾನೂರು ಮನೆಯನ್ನು ಇಂದ್ರಿಯ ಸುಖಗಳಿಗೆ ನಂದನವನವನ್ನಾಗಿ ಮಾಡಿ ಬಿಟ್ಟಿದ್ದಳು! ಪ್ರತಿದಿನವೂ ಔತಣ, ಒಟ್ಟಾರೆಯಾಗಿ ಇಡೀ ಮನೆಯನ್ನು ಮಲಿನಗೊಳಿಸಿದ್ದರು.

ಕಾದಂಬರಿಕಾರರು ಚಿತ್ರಿಸುವ ಹಾಗೆ ಸೇರೆಗಾರರು ಅಮೋದ ಪ್ರಮೋದಗಳಲ್ಲಿ ತೊಡಗಿದ್ದರೂ, ಸ್ವಲ್ಪಮಟ್ಟಿಗಾದರೂ ಅದನ್ನು ನಿಲ್ಲಿಸಬೇಕೆಂದರೂ ಗಂಗೆ ಅದಕ್ಕೆ ಆಸ್ಪದ ಕೊಡಲಿಲ್ಲ. ಪತಿತ ಮಾತ್ರಳಾಗಿದ್ದ ಅವಳು ಇತ್ತೀಚೆಗೆ ಹೃದಯದಲ್ಲಿ ವಿಷಯಾಗ್ನಿಕುಂಡವನ್ನಿಟ್ಟುಕೊಂಡು ಕಾಮ ರಾಕ್ಷಸಿಯಾಗಿ ಬಿಟ್ಟಿದ್ದಳು.

ಅಂದಿನ ಸಮಾಜದಲ್ಲಿ ಅದರಲ್ಲಿಯೂ ಗೌರವಸ್ತ ಮನೆತನದ ಪುರುಷ ಸ್ತ್ರೀ ಲಂಪಟನಾದರೆ, ಆ ಮನೆತನ ಎಂತಹ ಅಧೋಗತಿಗೆ ಇಳಿಯುತ್ತದೆ. ಅದಕ್ಕೆ ಗಂಗೆಯಂತಹವಳು ಎಷ್ಟು ಕಾರಣಕರ್ತರಾಗಿ ಮನೆತನವನ್ನು ಹಾಳುಮಾಡುತ್ತಾರೆ, ಎಂಬ ಸೂಕ್ಷ್ಮ ಅಂಶವನ್ನು ಇವಳ ಪಾತ್ರದ ಮೂಲಕ ಅದ್ಭುತವಾಗಿ ತಂದಿದ್ದಾರೆ.

ಒಂದು ಮನೆಯು ಬೆಳಗಲು ಹೆಣ್ಣು ಕಾರಣಕರ್ತಳಾಗುತ್ತಾಳೆ. ಅದೇ ಮನೆಯು ಒಡೆಯಲು ಕೂಡ ಅವಳು ಕಾರಣಳಾಗಬಹುದು, ಅದಕ್ಕೆ ಉತ್ತಮ ಉದಾಹರಣೆ ಇವಳು. ಕಾನೂರು ಮನೆತನ ಇವಳ ಪಾದಸ್ಪರ್ಶದಿಂದ ಅಶುದ್ಧವಾಗಿ, ಅನಿಷ್ಟ ತುಂಬಿಕೊಳ್ಳುತ್ತದೆ. ಎಷ್ಟೇ ಜನರ ಸಂಬಂಧ ಹೊಂದಿದ್ದರು ತೃಪ್ತಿ ಹೊಂದದ ಪಾತ್ರ. ಹಾಗೆಯೇ ಈ ಅಸೂಯಾ ಗುಣವೇ ಸುಬ್ಬಮ್ಮನನ್ನು ಹಾಳು ಗೆಡವಲೂ ಕಾರಣವಾಗಿ ಅವಳು ಕೆಟ್ಟ ಸಂಬಂಧದಿಂದ ಗರ್ಭಧರಿಸಲು ಕಾರಣವಾಗಿ ಅವಳ ಸಾವಿಗೂ ಕಾರಣವಾಗುತ್ತಾಳೆ. ಕುತಂತ್ರ ಸೇರೆಗಾರನೊಡನೆ ಸೇರಿ ಸುಬ್ಬಮ್ಮನ ಎಲ್ಲಾ ಒಡವೆಗಳು ತನ್ನ ಕೈ ಸೇರುವಂತೆ ಮಾಡಿಕೊಳ್ಳುತ್ತಾಳೆ. ಎಂತಹ ಸಂದರ್ಭದಲ್ಲಾದರೂ ಎಂತಹವರನ್ನಾದರೂ ಮರಳು ಮಾಡಿ ತನ್ನ ಮಾಯೆಯ ಬಲೆಗೆ ಬೀಳಿಸಿಕೊಳ್ಳುವ ಹೆಣ್ಣಾಗಿ ಕಾಣಿಸುವ ಇವಳು ಸೇರೆಗಾರರೊಡನೆ ಹೇಗೆ ಕಾನೂರಿಗೆ ಓಡಿಬಂದಳೊ ಹಾಗೆಯೇ ಅದೇ ರಂಗಪ್ಪನ ಜೊತೆ ಕಾನೂರಿನಿಂದ ಗಟ್ಟದ ಕೆಳಕ್ಕೆ ಓಡಿ ಹೋಗುತ್ತಾಳೆ.

ಒಟ್ಟಾರೆಯಾಗಿ ಕಾನೂರು ಸುಬ್ಬಮ್ಮನ ಅವನತಿಗೆ ಅಧಃಪತನಕ್ಕೆ ನೇರವಾಗಿಯೇ ಕಾರಣವಾಗುವ ಪಾತ್ರ.

೫. <u>ಗೌರಮ್ಮ</u> : ಮುತ್ತಳ್ಳಿ, ಶ್ಯಾಮಯ್ಯಗೌಡರ ಧರ್ಮಪತ್ನಿ, ಅಲ್ಲದೆ ಒಂದು ಸಂಪ್ರದಾಯಸ್ಥ ಮನೆತನದ ಮಹಿಳೆ. ಚಿನ್ನಯ್ಯ, ಸೀತೆ, ಲಕ್ಷ್ಮಿಯರ ಮಮತೆಯ ತಾಯಿ, ಕಾದಂಬರಿಯಲ್ಲಿ ಆರಂಭದಿಂದಲೂ ಅಲ್ಲಲ್ಲಿ ಕಾಣಿಸಿಕೊಳ್ಳುವ ಪಾತ್ರ. ಸಂಪ್ರದಾಯಸ್ಥ ಮನೆತನದ ಮಹಿಳೇ ಹೇಗಿರಬೇಕೋ ಆ ಎಲ್ಲಾ ಗುಣಗಳು ಈಕೆಯಲ್ಲಿವೆ. ಯಾರೊಡನೆಯೂ ದ್ವೇಷ ಬೆಳೆಸಿಕೊಂಡವರಲ್ಲ ತನ್ನ ಮಗಳಿಗೆ ಹೂವಯ್ಯನ ಮೇಲೆ ಪ್ರೀತಿಯಿದೆ ಎಂದು ತಿಳಿದಿದ್ದರೂ ಕೂಡ ಅದನ್ನು ಗಟ್ಟಿಯಾಗಿಯೂ ಹೇಳಲಾರದ ಮುಗ್ದೆ. ಹಾಗೆಯೇ ಮಗಳ ಸ್ಥಿತಿ ಕಂಡು, ಮರುಗಿದ್ದಾಳೆ, ದುಃಖ ಪಟ್ಟಿದ್ದಾಳೆ. ಸೀತೆಯ ಸ್ವಭಾವವನ್ನು ಅರ್ಥಮಾಡಿಕೊಂಡಿದ್ದರೂ, ಗಂಡನ

ಜೊತೆ ಹೇಳಿದರೂ ಸಹಾ ಗಂಡ ಹಾಕಿದ ಗೆರೆಯನ್ನು ದಾಟುತ್ತಿರಲಿಲ್ಲ. ಸೀತೆಯು ರೋಗಿಯಾದಂತೆಲ್ಲಾ ಸೀತೆಯ ಸ್ಥಿತಿಗೆ ಭೂತದ ಭೀತಿಯೇ ಕಾರಣವೆಂದು ಹಲವು ದೇವರುಗಳಿಗೆ ಹರಕೆ ಹೊರುತ್ತಾಳೆ. ಮಗಳನ್ನು ಜೋಪಾನ ಮಾಡಿ ಅವಳ ಸ್ಥಿತಿಗೆ ಅಳುತ್ತಾಳೆ.

ಈ ಕಾದಂಬರಿಯ ನಾಗಮ್ಮನಂತೆಯೇ ಈಕೆ ಕೂಡ ಸಂಪ್ರದಾಯಸ್ಥ ಮನಸ್ಥಿತಿಯ, ಗೌರವಸ್ಥ ಕುಟುಂಬದ ಸದ್ಗೃಹಿಣಿ. ಆದರೆ ಗಂಡನ ಮಾತಿಗೆ ಎದುರಾಡದ ಅವನ ಹೆಜ್ಜೆಗೆ ಹೆಜ್ಜೆಯನ್ನಿಡುವ, ಕಾಯಾ, ವಾಚಾ, ಮನಸಾ ಗಂಡನನ್ನೆ ಅನುಸರಿಸುತ್ತಿದ್ದವಳು. ಅವನು ಹಾಕಿದ ಗೆರೆಯನ್ನು ದಾಟದಿರುವವಳು. ಈಕೆ ಕೇವಲ ಶ್ಯಾಮಯ್ಯನ ಹೆಂಡತಿಯಾಗಿ, ಮಕ್ಕಳ ಮಮತೆಯ ತಾಯಿಯಾಗಿ ಮಾತ್ರ ಪಾತ್ರ ನಿರ್ವಹಿಸುತ್ತಾಳೆ. ಸಂಪ್ರದಾಯವನ್ನು ಮೀರುವ ಸಾಹಸ ಮಾಡಲು ಹೋಗುವುದಿಲ್ಲ. ಹಾಗೆಯೇ ಈಕೆಯಲ್ಲಿ ಸ್ವತಂತ್ರ ವ್ಯಕ್ತಿತ್ವವನ್ನು ಕಾಣಲು ಸಾಧ್ಯವಿಲ್ಲ.

೬. **ಪುಟ್ಟಮ್ಮ** : ಕಾನೂರಿನ ಚಂದ್ರಯ್ಯಗೌಡರ ಎರಡನೆಯ ಹೆಂಡತಿಯ ಮಗಳು. ವಾಸುವಿನ ಅಕ್ಕ ಈಕೆ ಆದರ್ಶ ಅಪ್ಪಟ ಭಾರತೀಯ ನಾರಿ. ಏಕೆಂದರೆ ಗಂಡ ಚಿನ್ನಪ್ಪ ಹೇಗೆ ಹೇಳುತ್ತಾನೆಯೋ ಅದನ್ನು ಶಿರಸಾವಹಿಸಿ ಪಾಲಿಸುತ್ತಾಳೆ. ಕಾದಂಬರಿಯ ಆರಂಭದಲ್ಲಿ ಮಲತಾಯಿಯಿಂದ ನಿರ್ಲಕ್ಷಿಸಲ್ಪಡುತ್ತಾಳೆ. ಅವಳೊಡನೆ ಜಗಳವಾಡುತ್ತಾಳೆ. ಆದರೆ ಆ ನಂತರ ಸುಬ್ಬಮ್ಮನೊಡನೆ ಹೊಂದಿಕೊಳ್ಳುತ್ತಾಳೆ. ಕಾದಂಬರಿಯಲ್ಲಿ ಅಲ್ಲಲ್ಲಿ ಕಾಣುವ ಪಾತ್ರ ಇವಳದು. ಯಾರಿಗೂ ಯಾವ ಕೇಡನ್ನು ಬಯಸದ ತಣ್ಣಗಿನ ವ್ಯಕ್ತಿತ್ವ. ದೊಡ್ಡಮ್ಮನಾದ ನಾಗಮ್ಮನಲ್ಲಿ ಅಪಾರ ಪ್ರೀತಿ, ಗೌರವಗಳನ್ನು ಹೊಂದಿದ್ದು ತಂದೆಯು ವಿರೋಧಿಸುತ್ತಿದ್ದ ನಾಗಮ್ಮನ ಬಳಿಗೆ ಅವನಿಗೆ ಗೊತ್ತಿಲ್ಲದ ಹಾಗೆ, ತನ್ನ ಮದುವೆ ನಿಶ್ಚಯವಾದುದನ್ನು ಹೇಳಲು ಹೋಗುತ್ತಾಳೆ. ಅಷ್ಟೇ ಅಲ್ಲದೆ ತನ್ನ ಮದುವೆಯ ದಿಬ್ಬಣವು ಕೆಳಕಾನೂರಿನ ರಸ್ತೆಯಲ್ಲಿ ಹೋದರೂ ನಾಗಮ್ಮನನ್ನು ನೋಡದ್ದರಿಂದ ಒಳಗೊಳಗೆ ದುಃಖಿಸುತ್ತಾಳೆ.

ತಾಯಿಯಿಲ್ಲ ಎನ್ನುವುದನ್ನು ಬಿಟ್ಟರೆ ಪುಟ್ಟಮ್ಮ ಅದೃಷ್ಟವಂತೆಯೇ ಎನ್ನಬಹುದು. ಏಕೆಂದರೆ ಸೀತೆಗೊದಗುವ ಯಾವ ಕಷ್ಟವು ಇವಳಿಗೆ ಬರುವುದಿಲ್ಲ. ತಂದೆಯ ಮನೆಯಲ್ಲಿದ್ದಾಗಲೂ ಯಾರಿಗೂ ಎದುರಾಡದೆ ಗಂಡನ ಮನೆಯಲ್ಲಿಯೂ ಯಾರ ವಿರೋಧವನ್ನು ಕಟ್ಟಿಕೊಳ್ಳದ ಸಮಾಧಾನದ ಮನಸ್ಥಿತಿಯ ಪಾತ್ರ. ಹಾಗೆಯೇ ಚಿನ್ನಯ್ಯ ತನ್ನ ಸೀತೆಗಾದ ಕಷ್ಟವನ್ನು ನೋಡಿ ಚಂದ್ರಯ್ಯಗೌಡರ ಮನೆಗೆ ಇವಳನ್ನು ಕಳುಹಿಸದಿದ್ದರೂ ಈಕೆ ಯೋಚಿಸುವುದಿಲ್ಲ. ತಂದೆ ತೀವ್ರ ಅನಾರೋಗ್ಯವಾಗಿ ಸಾಯುವ ಸ್ಥಿತಿ ತಲುಪಿದ್ದರೂ ತನ್ನನ್ನು

ಗಂಡ ತೌರಿಗೆ ಕಳುಹಿಸದಿದ್ದರೂ ದುಃಖಿಸುವುದಿಲ್ಲ ಹಠ ಮಾಡುವುದಿಲ್ಲ. ಗಂಡನೇಳಿದ ಹಾಗೆ ಕೇಳಿಕೊಂಡು ಹೋಗುವ ಯಾವುದಕ್ಕೂ ಆಸೆ ಪಡದ ವ್ಯಕ್ತಿ.

ಒಟ್ಟಾರೆಯಾಗಿ ತಂದೆಗೆ ಮಗಳಾಗಿ, ಅಣ್ಣಂದಿರಿಗೆ ತಂಗಿಯಾಗಿ, ವಾಸುವಿಗೆ ಪ್ರೀತಿಯ ಅಕ್ಕನ್ನಾಗಿ, ಚಿನ್ನಯ್ಯನಿಗೆ ಮುದ್ದಿನ ಮಡದಿಯಾಗಿ, ಎರಡು ಮಕ್ಕಳ ತಾಯಿಯಾಗಿ ಸಾಂಸಾರಿಕ ಜೀವನದಲ್ಲಿಯೇ ಸುಖವನ್ನು ಕಂಡವಳು.

ಕಾದಂಬರಿಕಾರರೇ ಹೇಳಿರುವ ಹಾಗೆ "ಸ್ವಪ್ನ ಸಾಹಸಿಗಳಿಗಿರುವ ಘನತೆಯಿರದಿದ್ದರೂ ಐಹಿಕ ಜೀವನ ದೃಷ್ಟಿಯಲ್ಲಿ ಹೆಚ್ಚು ನೆಮ್ಮದಿಯಾಗಿರುವ ಜೀವಿಗಳು ಚಿನ್ನಯ್ಯ ಹಾಗೂ ಪುಟ್ಟಮ್ಮ" ಎಂಬ ಮಾತು ಪುಟ್ಟಮ್ಮನ ವ್ಯಕ್ತಿತ್ವವನ್ನು ತಿಳಿಸುತ್ತದೆ. ಸಂಸಾರ ಜೀವನವನ್ನೇ ತಪಸ್ಸಾಗಿ ಸ್ವೀಕರಿಸಿ, ಅದರಲ್ಲಿಯೇ ತೃಪ್ತಿ ಪಡೆದುಕೊಳ್ಳುವ ಆದರ್ಶ ಪತ್ನಿ.

೭. **ಲಕ್ಷ್ಮಿ** : ಕಾದಂಬರಿಯ ಆರಂಭದಿಂದಲೂ ಕಾಣಿಸಿಕೊಳ್ಳುವ ಪಾತ್ರ. ಶಾಮಯ್ಯಗೌಡರ ಕಿರಿಯ ಮಗಳು. ಆರಂಭದಲ್ಲಿ ಚಿಕ್ಕ ಬಾಲಕಿಯಾಗಿ ಕೊನೆಗೆ ಸ್ತ್ರಿಯರ ಮಟ್ಟಕೇರುವ ಪಾತ್ರ. ಸೀತೆಯ ಪ್ರೀತಿಯ ತಂಗಿ ಲಕ್ಷ್ಮಿ. ಬಾಲೆಯಾದರೂ ಈಕೆಯ ಪಾತ್ರದ ಮೂಲಕ ಸೀತೆಯ ಜೀವನದಲ್ಲಾಗುವ ಘಟನೆಗಳು ಸೂಚ್ಯವಾಗಿ ಕಾಣಿಸಿಕೊಳ್ಳುತ್ತವೆ. ಹಾಗೆಯೇ ಸೀತೆಯ ವ್ಯಕ್ತಿತ್ವ ಸ್ಪಷ್ಟವಾಗುವುದೇ ಲಕ್ಷ್ಮಿಯಿಂದ. ಇವಳ ಪಾತ್ರ ಅಳುವಿನಲ್ಲಿ ಆರಂಭವಾಗುತ್ತದೆ. ಆದರೆ ಅವಳ ಜೀವನ ಅಳುವಿನಿಂದ ಕೂಡಿರುವುದಿಲ್ಲ. ಇವಳ ಅಳುವೇ ಅನೇಕ ದುರ್ಘಟನೆಗಳಿಗೆ ಮುನ್ಸೂಚನೆಯಾಗುತ್ತದೆ. ಉದಾ: ಸೀತೆ ಹೂವಯ್ಯ ಬರುತ್ತಿದ್ದಾನೆಂದು ಸಿಂಗರಿಸಿಕೊಳ್ಳುತ್ತಿರುವಾಗ ಲಕ್ಷ್ಮಿಯು ಬಾಚಣಿಗೆ, ಹೂವು ಆಭರಣಗಳನ್ನೆಲ್ಲಾ ಒಂದೊಂದಾಗಿ ಪರೀಕ್ಷೆ ಮಾಡುತ್ತಿದ್ದವಳು ಎಣ್ಣೆಯ ಕುಡಿಕೆಗೂ ಕೈಹಾಕಿದಳು. ಅವಳ ಗ್ರಹಚಾರಕ್ಕೆ ಉರುಳಿಬಿದ್ದು ಚಾಪೆಯ ಮೇಲೆ ತೈಲವಾಹಿನಿ ಪ್ರವಹಿಸಿ, ವ್ಯರ್ಥವಾಯಿತು. ಈ ಘಟನೆ ಲಕ್ಷ್ಮಿಯ ಕೈಜಾರಿ ಆದರೂ ಸೀತೆಯ ಜೀವನದಲ್ಲಿ ಮಾತ್ರ ಕೈಮೀರಿದ್ದೆಲ್ಲಾ ಆಗುತ್ತದೆನ್ನುವುದನ್ನು ಸೂಚಿಸುತ್ತದೆ.

ಲಕ್ಷ್ಮಿಯ ಪಾತ್ರವನ್ನು ಪ್ರತ್ಯೇಕವಾಗಿ ಹೇಳುವುದಕ್ಕಿಂತ ಸೀತೆಯ ಪಾತ್ರದೊಡನೆ ಜೊತೆಯಲ್ಲಿ ಚಿತ್ರಿಸುವುದೇ ಉಚಿತ. ಏಕೆಂದರೆ ಲಕ್ಷ್ಮಿಯ ಜೀವನವು ಯಾವುದೇ ತರಹದ ತೊಡಕಿಲ್ಲದೆ ನಡೆಯುತ್ತದೆ. ಆದರೆ ಸೀತೆಯ ಜೀವನವೇ ತೊಂದರೆಗಳಿಂದ ತುಂಬಿರುವುದು. ಆದ್ದರಿಂದಲೇ ಲಕ್ಷ್ಮಿಯ ಪಾತ್ರವನ್ನು ಲೇಖಕರು ಅತ್ಯುತ್ತಮವಾಗಿ ತಂದಿದ್ದಾರೆ. ಒಮ್ಮೆಯಂತೂ ಲಕ್ಷ್ಮಿ ಗೊಂಬೆಯಾಟವಾಡುತ್ತ ಹೆಣ್ಣು ಗೊಂಬೆಯ ಸೀರೆ ಬಿಚ್ಚಿ ಹೋದಾಗ ಸೀರೆ ಬಿಚ್ಚಿ

ಹೋಯ್ತು ಎನ್ನುವಾಗ ಸೀತೆ ತಾನು ಗೊಂಬೆಗೆ ಉಡಿಸಿದ್ದ ಸೀರೆ ಸರಿಮಾಡುತ್ತಾಳೆ. ಈ ಪುಟ್ಟ ಘಟನೆಯು ಸೀತೆಯ ಜೀವನ ಅಸ್ತವ್ಯಸ್ತವಾಗುವುದನ್ನೂ, ಲಕ್ಷ್ಮಿಯ ಬದುಕು ಸುವ್ಯವಸ್ಥಿತವಾಗಿರುವುದನ್ನೂ ತೋರಿಸುತ್ತದೆ.

ಮೊದಲು ಅಳುಬುರುಕಿಯಾದರೂ ಆ ನಂತರ ಉತ್ತಮ ನಡವಳಿಕೆಯ ಹೆಣ್ಣು ಮಗಳಾಗಿ ಕಾಣಿಸಿಕೊಳ್ಳುತ್ತಾ ಮುಗ್ಧವಾದ ಸ್ತ್ರೀಯಾಗಿ ಚಿತ್ರಿತಗೊಂಡು ವಾಸುವಿನ ಮಡದಿಯಾಗಿ ಜೀವನ ಸಾರ್ಥಕಗೊಳಿಸಿಕೊಳ್ಳುತ್ತಾಳೆ. ಈ ಕಾದಂಬರಿಯಲ್ಲಿ ಇಷ್ಟು ಪಾತ್ರಗಳಲ್ಲದೆ, ಕೆಳವರ್ಗದ ಕೂಲಿಯಾಳುಗಳಾದ ಬೈರನ ಹೆಂಡತಿ ಸೇಸಿ ಹಾಗೂ ನಂಜನ ಹೆಂಡತಿ ಮುಂತಾದವರು ಗಂಡನ ಮಾತಿಗೆ ತಕ್ಕ ಹಾಗೆ ನಡೆದುಕೊಳ್ಳುವುದಲ್ಲದೆ ಅಂದಿನ ಸಾಮಾಜಿಕ ಪರಿಸ್ಥಿತಿಯ ಇಕ್ಕಟ್ಟಿನಲ್ಲಿ ಸಿಕ್ಕಿದ್ದರೂ ಭಿನ್ನ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಅಧ್ಯಾಯ – ೪

ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಬರುವ ಸ್ತ್ರೀ ಪಾತ್ರಗಳು

ಅ. ಚಿನ್ನಮ್ಮ

ಆ. ಪೀಂಚಲು

ಇ. ತಿಮ್ಮಿ

ಈ. ದೇವಮ್ಮ

ಉ. ಕಾವೇರಿ

ಊ. ಅಂತಕ್ಕ

ಋ. ಅಕ್ಕಣಿ

ಎ. ರಂಗಮ್ಮ

ಏ. ಲಕ್ಕಮ್ಮ

ಐ. ಬಚ್ಚಮ್ಮ

ಒ. ಸೇಸಿ

ಓ. ನಾಗತ್ತೆ

ಔ. ನಾಗಕ್ಕ

ಈ ಕೃತಿಯಲ್ಲಿ ಬರುವ ಪಾತ್ರಗಳನ್ನು ೩ ವರ್ಗಗಳಾಗಿ ವಿಂಗಡಿಸಬಹುದು.

೧. ಮೇಲ್ವರ್ಗದ ಪಾತ್ರಗಳು

೨. ಕೆಳವರ್ಗದ ಪಾತ್ರಗಳು

೩. ಅತಿ ಕೆಳವರ್ಗದ ಪಾತ್ರಗಳು

೧. ಮೇಲ್ವರ್ಗದ ಪಾತ್ರಗಳು :-

೧. **<u>ಚಿನ್ನಮ್ಮ</u>** : ಕಾದಂಬರಿಯ ಶೀರ್ಷಿಕೆಯಲ್ಲಿ ಬರುವ ಮದುಮಗಳೇ ಈ ಚಿನ್ನಮ್ಮ. ವೆಂಕಟಪ್ಪನಂತಹ ಕಾಮುಕ ತಂದೆಯ ಏಕ ಮಾತ್ರ ಸುಪುತ್ರಿ, ಚಿಕ್ಕಂದಿನಲ್ಲಿಯೇ ತಾಯಿಯನ್ನು ಕಳೆದುಕೊಂಡು ಅಜ್ಜಿಯ ಹಾರೈಕೆಯಲ್ಲಿ ಬೆಳೆದವಳು. ಕಾದಂಬರಿಯ ನಾಯಕಿಯ ಪಾತ್ರ. ಹೂವಳ್ಳಿಯ ಮನೆಯ ಮಗಳಾಗಿ ಛಲವಂತ ಹೆಣ್ಣಾಗಿ ತಾನು ಬಯಸಿದ್ದನ್ನು ಪಡೆದೆ ತೀರುತ್ತಾಳೆ. ಅವಿದ್ಯಾವಂತೆಯಾದರೂ ವಿಚಾರವಂತೆ. ಬಡ ಒಕ್ಕಲಿನ ಮನೆಯವಳಾದರು ಸೌಂದರ್ಯವತಿ. ಇವಳ ಪಾತ್ರ ಚಿತ್ರಿಸುತ್ತಾ ಲೇಖಕರು ಚಿನ್ನಮ್ಮ ತಾಯಿಯ ಚೆಲುವನ್ನೆಲ್ಲಾ ಪಡೆದು ಹುಟ್ಟಿದಳು. ಆದರೆ .... ಸುತ್ತಲೂ ದಟ್ಟಯಿಸಿದ್ದ ಸಂಸ್ಕೃತಿ ದಾರಿದ್ರ್ಯದ ದೆಸೆಯಿಂದಲೂ ಅವಳು ಕಾಡುಕಾಡಾಗಿ ಕೊಳಕಾಗಿ ಮಣ್ಣುಹಿಡಿದು ಕಾಂತಿಕುಂದಿದ ಚಿನ್ನದ ಸಲಾಕೆಯಂತಿದ್ದಳು. ಅಲ್ಲದೆ ನಯ ನಾಜೂಕಿಲ್ಲದೆ ಒರಟೊರಟಾಗಿಯೂ ಬೆಳೆದಳು. ಅಡಿಗೆ ಕೆಲಸದಿಂದಿಡಿದು ಕೊಟ್ಟಿಗೆ ಕೆಲಸದವರೆಗೂ ಇವಳ ಕಾರ್ಯಭಾರವಿತ್ತು. ಇದರಿಂದಲೇ ಇವಳ ವ್ಯಕ್ತಿತ್ವವನ್ನು ಗುರ್ತಿಸಬಹುದು. ಆ ಕಾಲದಲ್ಲಿ ಹೆಣ್ಣು ಓದು ಕಲಿಯುವುದು ಗಂಡಸರು ಸೀರೆಯುಡುವುದಕ್ಕಿಂತಲೂ ಹಾಸ್ಯಾಸ್ಪದವಾಗಿತ್ತು.

ಈ ಕೃತಿಯಲ್ಲಿ ಚಿನ್ನಮ್ಮನ ಬಾಲ್ಯ-ಯೌವ್ವನದ ಬದುಕನ್ನ ಲೇಖಕರು ಅತ್ಯಂತ ಸೂಕ್ಷ್ಮವಾಗಿ ಸೆರೆಹಿಡಿದಿದ್ದಾರೆ. ಈಕೆ ಚಿಕ್ಕಂದಿನಿಂದಲೂ ಮುಕುಂದಯ್ಯನ ಜೊತೆ ಕಾದು ಅಲೆದು ಹಕ್ಕಿಗೂಡು ಕಂಡು ಹಿಡಿಯುವ, ಜೇನು ಕೀಳುವ, ಗಾಳ ಹಾಕಿ ಮೀನು ಹಿಡಿವ, ಹೊಂಡ ತೋಣಕುವ, ಸೆಖೆ ಒಡ್ಡಿ ಕಾಡು ಕೋಳಿ ಹಿಡಿವ, ಶೂದ್ರ ಮಕ್ಕಳ ಬಾಲ್ಯ ಸಹಜ ವೃತ್ತಿ ಮಾಡುತ್ತಿರುತ್ತಾಳೆ. ಆದರೆ ಸ್ವಚ್ಛಂದ ಬದುಕು ಇವಳದಲ್ಲ. ಚಿನ್ನಮ್ಮ ಮುಂದೆ ಮುಕುಂದಯ್ಯನ ಕೈ ಹಿಡಿಯುತ್ತಾಳೆನ್ನುವುದನ್ನು ಸೂಚ್ಯವಾಗಿ ಹೇಳಲಾಗಿದೆ. ಚಿನ್ನಮ್ಮ ಮುಕುಂದಯ್ಯನ ಸಾಮಿಪ್ಯ ಬಯಸುವುದು, ಅಜ್ಜಿಯೊಡನೆ ಅವನನ್ನೇ ನೋಡಲು ಕೋಣೂರಿಗೆ ಹೋಗುವುದು. ಅಲ್ಲದೆ ಮುಕುಂದಯ್ಯನ ತಾಯಿ ಇವಳಿಗೆ ತನ್ನ ಮಗನನ್ನೇ ತೋರಿಸಿ ಇಂವ ಯಾರು? ಎಂದಾಗ ಇವಳು 'ಅವರು' ಎಂದು ನಾಚಿಕೊಳ್ಳುವುದು. ಈ ಎಲ್ಲವು ಚಿನ್ನಮ್ಮನ ಬಾಯಿಯಲ್ಲಿ ಅವಳಿಗರಿವಿಲ್ಲದೆ ಬಂದಿದ್ದರೂ ಭವಿಷತ್ ಕಲ್ಪನೆಯನ್ನೇ ತೋರಿಸುತ್ತವೆ. ಮುಂದೆ ಅಜ್ಜಿ ಇವಳಿಗೆ ...... ದಾರಿ ತಪ್ಪಿ ಕಾಡು ಹಾದಿ ಹಿಡ್ದೀಯಾ? ಎಂಬ ಮಾತು ಕೋಣೂರಿನ ಮನೆಯನ್ನೇ ತಮ್ಮ ಮನೆ ಎಂಬುದು. ಮುಗ್ದತೆಯಿಂದ ಮದ್ವೆ ಯಾವಾಗ ಮಾಡ್ತೀಯ ಎನ್ನುವುದು ಮುಂದಾಗಲಿರುವ ಕಾರ್ಯದ ಮುನ್ಸೂಚನೆ.

ಈ ಕೃತಿಯ ಮೊದಲ ಹಂತದಲ್ಲಿ ಯಾವ ತೊಡಕೂ ಇಲ್ಲದೆ ಇವಳ ಜೀವನ ಸಾಗಿದರೂ, ವಯಸ್ಸಿಗೆ ಬಂದಾಗ ಜಟಿಲ ಸಮಸ್ಯೆಗಳಿಗೆ ಸಿಕ್ಕಿ ಬೀಳುತ್ತಾಳೆ. ಮಳೆ ಇವಳ ಜೀವನದಲ್ಲಿ ಮುಖ್ಯ ಪಾತ್ರ ವಹಿಸಿದೆ. ಇವಳ ಪ್ರೀತಿಗೆ ಬೆಲೆ ಕೊಡದ ಇವಳಪ್ಪ ವೆಂಕಣ್ಣ, ವ್ಯವಹಾರದ ಕಾರಣಕ್ಕಾಗಿ ಸಿಂಬಾವಿ ಭರಮೈ ಹೆಗ್ಗಡೆಗೆ ಎರಡನೆಯ ಮದುವೆ ಮಾಡಿಕೊಡಲು ತಯಾರಾಗುತ್ತಾನೆ. ಮಗಳ ಮಾತಿಗೆ, ವ್ಯಕ್ತಿತ್ವಕ್ಕೆ ಇವನ ಸಂಪ್ರದಾಯದ ಸಮಾಜದಲ್ಲಿ ಮಹತ್ವವಿಲ್ಲ. ಮದುವೆಯ ದಿನವೇ ಮಳೆಯಿಂದ ಹಳ್ಳವೆಲ್ಲ ತುಂಬಿ ಮದುವೆ ಗಂಡು ಜಾರಿ ಬಿದ್ದು ಸೊಂಟ ಮುರಿದುಕೊಳ್ಳುತ್ತಾನೆ. ಚಿನ್ನಮ್ಮನ ಸುತ್ತ ಮದುವೆ ಸಡಗರ ನಡೆಯುತ್ತಿದ್ದರೂ, ಪೂರ್ವ ನಿಶ್ಚಿತ ಯೋಜನೆಯಂತೆ ಎಲ್ಲಾ ಸಂಬಂಧವನ್ನು ಕಳಚಿ ದೃಢ ಮನಸ್ಸಿನಿಂದ ಮನೆಯಿಂದ ತಪ್ಪಿಸಿಕೊಂಡು ಹೊರಟುಬಿಡುತ್ತಾಳೆ. ಇಲ್ಲಿ ಇವಳಿಗೆ ಮುಕುಂದಯ್ಯನಿಗಿಂತ ಯಾವ ಸಾಮಾಜಿಕ ಸಂಬಂಧಗಳು ಮುಖ್ಯವೆನಿಸುವುದಿಲ್ಲ. ಅವಿದ್ಯಾವಂತೆಯಾದರೂ ಈಕೆ ಛಲವಂತೆ ಏಕೆಂದರೆ ಅಂತಹ ಕಟ್ಟುನಿಟ್ಟಿನ ಸಮಾಜದಲ್ಲಿ ತನ್ನ ಬದುಕನ್ನು ತನಗೆ ಕಂಡಂತೆ ಬದುಕಲಿಚ್ಚಿಸುವ, ವಾತಾವರಣಕ್ಕೆ ಸಂಸ್ಕೃತಿಗೆ ವಿರುದ್ಧವಾಗಿ ಹೋರಾಡುವ ಪಾತ್ರ ಈಕೆಯದು. ಇವಳಿಗೆ ತನ್ನ ಪ್ರೀತಿಯ ಮುಂದೆ ಉಳಿದೆಲ್ಲವೂ ತೃಣಕ್ಕೆ ಸಮಾನ. ಭರಮೈ ಹೆಗಡೆಯೊಡನೆ ನಡೆಯುವ ಮದುವೆಗಿಂತ ಸಾವೇ ಮೇಲು ಎನ್ನುವಂತಹ ಗಟ್ಟಿ ವ್ಯಕ್ತಿತ್ವ. ಮದುವೆ ಗಂಡು ಬರುವುದು ಅಸಂಭವ ಎಂದಾಗ ಬರದೇ ಇದ್ದರೆ ಅಷ್ಟೇ ಹೋಯ್ತು ಋಣ ಕಡೀತು! ಎನ್ನುತ್ತಾಳೆ. ಅದರಿಂದಲೇ ಅಂತಹ ಕತ್ತಲೆಯಲ್ಲಿಯೂ ಕಾಡಿಗೆ ಹೋಗುತ್ತಾಳೆ. ಆಡಿ ತೋರಿಸುವುದಕ್ಕಿಂತ ಮಾಡಿ ತೋರಿಸುವುದೇ ಸರಿ ಎಂಬುದೇ ಇವಳ ತೀರ್ಮಾನ. ಅಂತಹ ಕಾಲದಲ್ಲಿ ಇಂತಹ ತೀರ್ಮಾನ ನಿಜಕ್ಕೂ ಆಶ್ಚರ್ಯಕರ ಮತ್ತು ಸಾಹಸವೇ ಸರಿ. ಪ್ರೀತಿಯಂತಹ ವೈಯಕ್ತಿಕ ಮೌಲ್ಯಕ್ಕೆ ಅಡ್ಡನಿಲ್ಲುವ ಸಾಮಾಜಿಕ ರೀತಿ-ನೀತಿಗಳನ್ನು ಉಲ್ಲಂಘಿಸುವ, ತನ್ನವರ ಮೌಲ್ಯಗಳ ಅನ್ಯಾಯವನ್ನು ಪ್ರತಿಭಟಿಸುವ ಅವು ಮೌಢ್ಯಗಳು ಎಂಬ ಪ್ರಜ್ಞೆ ಇವಳದಲ್ಲ.

ಚಿನ್ನಮ್ಮ ಮನೆಯಿಂದ ತಪ್ಪಿಸಿಕೊಂಡು ಹೋಗುವುದು ಒಂದು ಭಯಂಕರ ಸಾಹವಲ್ಲದೆ, ಆ ದಿನದ ರಾತ್ರಿ ಕಾದಂಬರಿಯ ಕ್ರಿಯಾ ಕೇಂದ್ರವಾಗಿದೆ. ಈ ಘಟನೆಯಿಂದಾಗಿ ಹೂವಳ್ಳಿ, ಹಳೆಮನೆ ಕೋಣೂರು ಮತ್ತು ಸಿಂಬಾವಿಯ ಸಾಮಾಜಿಕ ಜೀವನದಲ್ಲಿ ಉಂಟಾಗಲಿದ್ದ ಕ್ರಾಂತಿ ವೆಂಕಪ್ಪನಾಯಕನ ಸಾವಿನಿಂದ ತಣ್ಣಗಾಗುತ್ತದೆ.

ಈ ಕೃತಿಯೇ ಮಲೆಗಳಲ್ಲಿ ಮದುಮಗಳು ಎಂದಿರುವುದರಿಂದ ಚಿನ್ನಮ್ಮನೆ ಆ ಮದುಮಗಳಾಗಿರುವುದರಿಂದ ಕಾದಂಬರಿಯುದ್ದಕ್ಕೂ ಇವಳ ಬದುಕು ಬಹಳಷ್ಟು ಹೋರಾಟದಲ್ಲಿಯೇ ಕಳೆಯುತ್ತದೆ. ತಂದೆ ಸತ್ತ ಮೇಲೂ ಮುಕುಂದಯ್ಯನೊಡನೆ ಸೇರಿ ಮನೆ – ಹೊಲ ಎನ್ನದೆ ದುಡಿಯುತ್ತಾಳೆ. ಸಮಾಜದಲ್ಲಿ ಬಂದಂತಹ ಅಪವಾದ ನಿಂದೆಗಳನ್ನು ಮೌನವಾಗಿಯೇ ಸಹಿಸುತ್ತಾಳೆ. ಅಪ್ಪನ ಕ್ರೌರ್ಯಕ್ಕೆ ತುತ್ತಾದ ನಾಗಕ್ಕನನ್ನು ಹೃದಯ ತುಂಬಿ ಪ್ರೀತಿಸುತ್ತಾಳೆ. ದೇವಮ್ಮನಿಗೆ ಒದಗಿದ ದುಃಖಕ್ಕೆ ಅನುಕಂಪ ಪಡುತ್ತಾಳೆ.

ಕಾದಂಬರಿಕಾರರು ಚಿನ್ನಮ್ಮನ ಪಾತ್ರದಲ್ಲಿ ಅಲೌಕಿಕತೆಯನ್ನು ತರುವ ಪ್ರಯತ್ನವನ್ನು ಮಾಡಿದ್ದಾರೆ. ಈಕೆ ಪೀಂಚಲು ಜೊತೆ ತಪ್ಪಿಸಿಕೊಂಡು ಹೋದಾಗ ಗುಡ್ಡದಲ್ಲಿ ಗುಡಿಯೊಳಗೆ ಅವಳು ತಲೀನಳಾಗುವುದು. ಮೂರ್ಛೆಯ ಸ್ಥಿತಿಯಲ್ಲಿರುವುದು. ಹುಚ್ಚು ಹೆಗ್ಗಡತಿ ಎನಿಸಿಕೊಂಡಿದ್ದ ರಂಗಮ್ಮ ಮುಂದಿನ ಜನ್ಮದಲ್ಲಿ ಮುಕುಂದಯ್ಯ ಮತ್ತು ಚಿನ್ನಮ್ಮರಿಗೆ ಮಗುವಾಗಿ ಹುಟ್ಟಿ ತನ್ನ ಗಂಡನನ್ನು ಸೇರುತ್ತಾಳೆ. ಹೀಗೆ ಚಿನ್ನಮ್ಮನ ಪಾತ್ರ ತಂದೆಗೆ ಹೆದರುವ, ಅಜ್ಜಿಯನ್ನು ತುಂಬಾ ಪ್ರೀತಿಸುವ, ಮುಕುಂದಯ್ಯನೊಡನೆ ತನ್ನ ಸರ್ವಸ್ವವನ್ನು ಹಂಚಿಕೊಂಡು ಅವನನ್ನೆ ಆರಾಧಿಸುವ ನಿಸರ್ಗಕ್ಕೆ ಹತ್ತಿರವಾದ ನಿಸರ್ಗದ ಮಣ್ಣಿನ ಮಗಳಾಗಿ, ಕಾದಂಬರಿಯ ಕೊನೆಯವರೆಗೂ ಮದುಮಗಳಾಗಿ ಉಳಿಯುವ ಒಂದು ಉದಾತ್ತ ಪಾತ್ರವಾಗಿದೆ.

೨. **<u>ಪೀಂಚಲು</u>** : ಕಾದಂಬರಿಯ ಬಹುಮುಖ್ಯವಾದ ಬಿಲ್ಲವರ ಜಾತಿಯ ಕೆಳವರ್ಗದ ಪಾತ್ರ. ಐತನ ಆದರ್ಶ ಪತ್ನಿ, ಮುಕುಂದಯ್ಯ-ಚಿನ್ನಮ್ಮರ ಆರೇಳು ವರ್ಷಗಳ ಸ್ನೇಹಿತೆ. ಕಾದಂಬರಿಯ ಮುಕ್ಕಾಲು ಪಾಲು ಇರುವ ಚಲನಶೀಲವಾದ ಪಾತ್ರ. ಏಕೆಂದರೆ ಈಕೆ ಐತನಿಗಿಂತಲೂ ಚುರುಕಾದ, ಅವನಿಗೆ ತಿಳುವಳಿಕೆ ಹೇಳುವ, ವಿದ್ಯೆಯಿಲ್ಲದಿದ್ದರೂ ವಿಚಾರವಂತೆ, ವಾಸ್ತವಕ್ಕೆ ಹೆಚ್ಚು ಹತ್ತಿರವಿರುವ ಜೀವಂತ ಪಾತ್ರ. ಇವಳು ಹಕ್ಕಿ ಬೇಟೆ, ಮೀನು ಬೇಟೆ, ಉರುಳು ಬೇಟೆ ಇಲ್ಲದರಲ್ಲಿಯೂ ಹುಡುಗರಂತೆ ಪಾಲ್ಗೊಳ್ಳುತ್ತಾಳೆ. ಹಾಗೆ ಹುಡುಗರಂತೆ ಅಡಕೆ ಮರ ಹತ್ತಿ ಹೊಂಬಾಳೆ ಕೀಳುತ್ತಾಳೆ. ಐತ ಹೆದರಿದರೂ ಈಕೆ ಮಾತ್ರ ಜೇನುಗೂಡಿಗೆ ಕೈಹಾಕಿ ಜೇನು ಕೀಳುತ್ತಾಳೆ. ನಿಜವಾದ ಮಣ್ಣಿನ ಮಗಳು ಪೀಂಚಲು.

ಪೀಂಚಲುವಿನದು ಒಂದು ರೀತಿಯ ಸ್ವತಂತ್ರವಾದ ಸ್ವಚ್ಛಂದ ಬದುಕು. ಐತ ಮತ್ತು ಇವಳದು ಆದರ್ಶ ದಾಂಪತ್ಯ, ಬದುಕಿನ ವಿವಿಧ ಸ್ತರಗಳನ್ನು ಪರಿಪೂರ್ಣವಾಗಿ ಅನುಭವಿಸುವ ವ್ಯಕ್ತಿಗಳು. ಯಾವುದೇ ಅಶ್ಲೀಲ ಅಥವಾ ಕೃತಕ ನಾಗರೀಕತೆಯು ಸೋಂಕದ ಬದುಕು.

ಪೀಂಚಲು ಜಾತಿ ದೃಷ್ಟಿಯಿಂದ ಐತನೊಬ್ಬನನ್ನೆ ತನ್ನ ಗಂಡನೆಂದು ನಂಬಿ ಇರಬೇಕಾಗಿಯೂ ಇರಲಿಲ್ಲ ಆದ್ದರಿಂದ ಐತ ಅಪೇಕ್ಷಿಸಿದ್ದನ್ನು ಮುಕುಂದಯ್ಯ ಅಪೇಕ್ಷಿಸಿದ್ದರೆ ಅವಳು ಇಲ್ಲ ಎನ್ನುತ್ತಿರಲಿಲ್ಲ. ತನಗಿಂತಲೂ ಮಹತ್ತರವಾದದಕ್ಕೆ ತನ್ನನ್ನು ಅರ್ಪಿಸಿಕೊಳ್ಳಲು ಅವಳು ಹಿಂಜರಿಯುತ್ತಿರಲಿಲ್ಲ. ಅದನ್ನು ಗೌರವವೆಂತಲೂ ತಿಳಿದುಕೊಳ್ಳುತ್ತಿದ್ದಳು. ಆದರೆ ಪೀಂಚಲು ಐತನೊಬ್ಬನನ್ನು ಬಿಟ್ಟು ಬೇರೆ ಯಾರನ್ನು ಸೇರಲು ಬಯಸುವುದಿಲ್ಲ. ಮದುವೆಗೆ ಮೊದಲು ಮುಕುಂದಯ್ಯನೊಡನೆ ಇದ್ದ ಅಭಿಮಾನ ಈಗಲೂ ಇದ್ದರೂ ಐತನಿಗೆ ದ್ರೋಹ ಬಗೆಯುವ ಕೆಲಸವನ್ನು ಮಾತ್ರ ಪೀಂಚಲು ಮಾಡುವುದಿಲ್ಲ.

ಈ ಕೃತಿಯಲ್ಲಿ ಚಿನ್ನಮ್ಮ-ಮುಕುಂದಯ್ಯರ ಪ್ರೇಮಕ್ಕೆ ಪೀಂಚಲು ಸಹಾಯಕಳಾಗಿ, ಮಧ್ಯವರ್ತಿಯಾಗಿ ಕಾಣಿಸಿಕೊಳ್ಳುತ್ತಾಳೆ. ಚಿನ್ನಮ್ಮ ಮುಕುಂದಯ್ಯನ ಜೊತೆ ಸೇರಲು ಅವರ ಪ್ರೀತಿ ಉಳಿಯಲು ಪೀಂಚಲುವೆ ಕಾರಣ. ಅವಳೆಷ್ಟು ಚತುರೆ ಎಂದರೆ ಚಿನ್ನಮ್ಮನ ಪ್ರೀತಿಯ ವಿಚಾರ ಗಂಡನ ಹರಕು ಬಾಯಿಯಲ್ಲಿ ಉಳಿಯುವುದಿಲ್ಲವೆಂದು ಅವನಿಗೂ ತಿಳಿಸದೆ ಇರುತ್ತಾಳೆ. ಚಿನ್ನಮ್ಮನ ದುಃಖದಲ್ಲಿ ಸದಾಬಾಗಿಯಾಗಿದ್ದು ಅಲ್ಲದೆ ಗಂಡನ ಜೊತೆಯಲ್ಲಿದ್ದರೂ ಚಿನ್ನಮ್ಮ ಮುಕುಂದಯ್ಯರನ್ನು ಮರೆಯದೆ ಅವರ ಕಷ್ಟಕ್ಕಾಗಿ ಪರಿತಪಿಸಿ, ಅವರ ಸುಖಕ್ಕಾಗಿ ಹಂಬಲಿಸುವ ಮಾನವೀಯತೆಯ ಸಂಕೇತ ಪೀಂಚಲುವಿನ ಪಾತ್ರ. ಇಷ್ಟೇ ಅಲ್ಲದೆ ತನ್ನ ಗುಡಿಸಲಿನ ಅಕ್ಕಪಕ್ಕದ ಮನೆಯವರಿಗೂ ಸಹಾಯಕಳಾಗಿ ನಿಲ್ಲುತ್ತಾಳೆ.

ಚಿನ್ನಮ್ಮನ ಒಲ್ಲದ ಮದುವೆಯಲ್ಲಿ ಪೀಂಚಲುವಿನದೆ ಪ್ರಮುಖ ಪಾತ್ರ. ಚಿನ್ನಮ್ಮನನ್ನೇ ಆ ವಿಷ ಚಕ್ರವ್ಯೂಹದಿಂದ ಪಾರು ಮಾಡುವ ಕರ್ತವ್ಯದಲ್ಲಿ ಪ್ರಮುಖವಾದ ಪಾತ್ರವಹಿಸಿ ಅಂತಹ ರಾತ್ರಿಯಲ್ಲಿ ಚೊಚ್ಚಲು ಬಸಿರಿಯಾದರೂ ಕೂಡ ಅವಳ ಕಷ್ಟ ತನ್ನ ಕಷ್ಟವೆಂದು ಭಾವಿಸಿ, ಹುಲಿಕಲ್ಲು ನೆತ್ತಿಗೆ ಚಿನ್ನಮ್ಮನಿಗೆ ಸಹಾಯಕಳಾಗಿ ಹೋಗುತ್ತಾಳೆ. ಅಲ್ಲದೆ ಈಕೆ ಗುತ್ತಿ ತಿಮ್ಮಿಯರಿಗೂ ಆಶ್ರಯ ನೀಡಿ ಅವರನ್ನು ಪೋಲಿಸರಿಂದ ರಕ್ಷಿಸಿ, ತಪ್ಪಿಸಿಕೊಳ್ಳಲು ಸಹಾಯ ಮಾಡುತ್ತಾಳೆ. ಅಷ್ಟೇ ಅಲ್ಲದೆ ಗಂಡನ ಹೆಜ್ಜೆಗೆ ಹೆಜ್ಜೆ ಹಾಕುವಂತಹ, ಅವನಿಗೆ ಯಾವ ಕೊರತೆಯೂ ಆಗದ ಹಾಗೆ ನೋಡಿಕೊಳ್ಳುವ ಹೆಣ್ಣು, ಸುಖ-ದುಃಖ, ನೋವು-ನಲಿವುಗಳನ್ನು ಹಂಚಿಕೊಂಡು ಮಣ್ಣಿನ ಮಗಳಾಗಿ, ಮಾನವೀಯ ಮೌಲ್ಯಗಳಿಗೆ ಸಂಕೇತವಾಗಿ ರೂಪಿತವಾದ ಹೆಣ್ಣು ಪೀಂಚಲು.

ಚಿನ್ನಮ್ಮನಿಗಾಗಿಯೇ ಹೂವಳ್ಳಿಯ ಮನೆಯಲ್ಲಿದ್ದು, ಅದೇ ತೋಟದಲ್ಲಿ ಜೀತದ ಆಳುಗಳಾಗಿ ಸೇರಿಕೊಂಡ ಐತ-ಪೀಂಚಲು, ಜಾತಿಯೊಂದನ್ನು ಹೊರತು ಪಡಿಸಿದರೆ, ಮುಕುಂದಯ್ಯನಿಗೆ ಎಂದೂ ಜೀತದಾಳುಗಳು ಎಂದೆನಿಸುವುದಿಲ್ಲ. ಅಂತಹ ಕರ್ತವ್ಯ ನಿಷ್ಠರು ಪ್ರಾಮಾಣಿಕರು. ಐತನಿಗೆ ಪೀಂಚಲುವನ್ನು ಬಿಟ್ಟಿರಲಾರದಂಥ ಪ್ರೀತಿ. ಏನೇ ಕೋಪ, ಮುನಿಸಿದ್ದರೂ ಅವಳ ನೋಟ, ಧ್ವನಿ, ಸ್ಪರ್ಶಕ್ಕೆ ಮನಸೋಲುತ್ತಾನೆ. ಗಂಡನನ್ನು ತಿದ್ದಿ ಬುದ್ಧಿ ಹೇಳದಂತಹವಳು ಈಕೆ. ಮುಕುಂದಯ್ಯನ ಕಣ್ಣಿಗಂತೂ ಇವರು ಬಿಲ್ಲ ವೇಷದ ಶಿವ-ಶಿವಾಣಿಯರಂತೆ ಕಂಡಿರುತ್ತಾರೆ.

ಕಾದಂಬರಿಯಲ್ಲಿ ಮದುಮಗಳಾದ ಚಿನ್ನಮ್ಮನ ಪಾತ್ರವನ್ನು ಮೀರಿಸಿ ಬೆಳೆಯುತ್ತಾ ಹೋಗುತ್ತದೆ ಪೀಂಚಲುವಿನ ಪಾತ್ರ. ಒಂದು ವೇಳೆ ಪೀಂಚಲು ಧೈರ್ಯ ಹೇಳದಿದ್ದರೆ ಅಥವಾ ಅವಳು ಚಿನ್ನಮ್ಮನನ್ನು ಗುಡ್ಡದ ಮೇಲೆ ಕರೆದುಕೊಂಡು ಹೋಗದಿದ್ದರೆ ಚಿನ್ನಮ್ಮ ಮುಕುಂದಯ್ಯನನ್ನು ಸೇರಲು ಸಾಧ್ಯವಾಗುತ್ತಿರಲಿಲ್ಲ. ಹಾಗೆಯೇ ಮತ್ತೊಬ್ಬ ಮದುಮಗಳಾದ ತಿಮ್ಮಿಯನ್ನು ತನಗಿಂತ ಕೀಳು ಜಾತಿಯಾದರೂ, ಮನೆಯೊಳಗೆ ಸೇರಿಸುತ್ತಾಳೆ ರಕ್ಷಣೆ ನೀಡುತ್ತಾಳೆ. ಇತರರ ದುಃಖಕ್ಕೆ ಮರುಗುತ್ತಿದ್ದ ಮನಸ್ಸು ಇವಳದು ಅಲ್ಲದೆ ಚೀಂಕ್ರನ ಹೆಂಡತಿ ದೇಯಿ ಸತ್ತಾಗ ಅವಳನ್ನೂ, ಅವಳ ಮಕ್ಕಳನ್ನು ನೋಡಿ ಮರುಗುತ್ತಾಳೆ. ಹೀಗೆ ಶೂದ್ರ ವರ್ಗಕ್ಕೆ ಸೇರಿದ್ದರೂ ಕೂಡ ಮೇಲು, ಜಾತಿ, ತನಗಿಂತ ಕೆಳಜಾತಿ ಎಂಬ ಭೇದ-ಭಾವವಿಲ್ಲದೆ ತನ್ನನ್ನು ತಾನು ಸೇವೆಯಲ್ಲಿ ತೊಡಗಿಸಿಕೊಳ್ಳುತ್ತಾಳೆ. ಅದರಿಂದಲೇ ಇವಳು ಬಡವಳಾದರೂ ಸುಖ ಜೀವಿ, ಸಂಸಾರದಲ್ಲಿಯೇ ಸುಖವನ್ನು ಕಂಡುಕೊಂಡಿದ್ದವಳು. ಈಕೆಯ ಬೆನ್ನೆಲುಬಾಗಿ ಐತನಿರುತ್ತಾನೆ. ಇವರ ದಾಂಪತ್ಯವು ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ ಎಂಬಂತೆ, ಕಲ್ಲು-ಸಕ್ಕರೆಯ ಸವಿಯಂತೆ ಮಧುರವಾದುದು. ಸಮರಸವಾದ ಜೀವನ.

ಪೀಂಚಲು ನಿಸರ್ಗ ಸಹಜ ಪಾತ್ರವಾದರೂ, ಸುಸಂಸ್ಕೃತಿಯುಳ್ಳವಳು ಎನ್ನಬಹುದು. ನಾಗರಿಕ ಹೆಣ್ಣಿನ ಎಲ್ಲ ಲಕ್ಷಣಗಳಿದ್ದು ವ್ಯಕ್ತಿನಿಷ್ಟ ಬದುಕು ಇವಳದಾಗಿತ್ತು. ಮುಕುಂದಯ್ಯನ ಜೀತದ ಆಳಾಗಿ, ಚಿನ್ನಮ್ಮನ ಜೊತೆಗಾರ್ತಿಯಾಗಿ ಸಂತೃಪ್ತ ಬಾಳನ್ನು ಬಾಳುತ್ತಾಳೆ ಪೀಂಚಲು.

೩. **ಕಾವೇರಿ** : ಅಂತಕ್ಕ ಸೆಟ್ಟಿಯ ಮಗಳು ಈಕೆ. ಮೇಲುವರ್ಗಕ್ಕೆ ಸೇರಿದವಳು ಮುಕುಂದಯ್ಯನ ಭಾವನಾದ ದೇವಯ್ಯನ ಪ್ರೇಯಸಿ, ಸುಸಂಸ್ಕೃತೆ ಆದರೂ ಮುಗ್ಧೆ. ಇಡೀ ಕಾದಂಬರಿಯಲ್ಲಿ ಒಂದು ದುರಂತ ನಾಯಕಿ ಈಕೆ. ದುರಂತ ಅಂತ್ಯವನ್ನು ಕಂಡವಳು. ಕೃತಿಯ ಆರಂಭದ ಅಧ್ಯಾಯಗಳಲ್ಲಿ ಇವಳ ಪಾತ್ರ ಕಾಣಿಸಿಕೊಳ್ಳುತ್ತದೆ. ನಾಯಿಗುತ್ತಿ ಇವಳ ಮನೆಗೆ ಬಂದಾಗ ಲಕ್ಷಣವಾಗಿದ್ದ ಅವನನ್ನು ನೋಡುತ್ತಾಳೆ, ಆದರೆ ಕೆಟ್ಟ ಭಾವನೆಯಿಂದಲ್ಲ. ಅಲ್ಲದೆ ಅವನನ್ನು ಆಸೆಪಡಲು ಆಗುವುದಿಲ್ಲ. ಏಕೆಂದರೆ ಗುತ್ತಿ ಇವಳಗಿಂತ ಅತ್ಯಂತ ಕೊನೆಯ ಕೀಳು ಜಾತಿಯವನಾಗಿದ್ದ ಹೀಗೆ ಇವಳ ಸ್ವಭಾವ ಚಿತ್ರಿತವಾಗಿದೆ.

ಇವಳ ಕುಟುಂಬವೇ ಅಸಹಾಯವಾದುದು ದಿಕ್ಕುದೆಸೆಯಿಲ್ಲದ ಬೇರೆ ಜನರು ನೀಚ ಭಾವನೆಯಿಂದ ನೋಡುವ ಕುಟುಂಬ. ಕಾವೇರಿಯಂತೂ ದೇವಯ್ಯನನ್ನೆ ಸರ್ವಸ್ವವೆಂದು ನಂಬುತ್ತಾಳೆ ಕೊನೆಯವರೆಗೂ ತನ್ನನ್ನು ಕೈಬಿಡಲಾರದೆ ಕಾಪಾಡುತ್ತಾನೆಂದೇ ನಂಬಿ ಕೆಡುತ್ತಾಳೆ. ಆತ ವಿವಾಹಿತನಾಗಿದ್ದರೂ ಅವನನ್ನು ಪ್ರೀತಿಸುತ್ತಿರುತ್ತಾಳೆ. ಅವನಿಗಾಗಿ ತನ್ನ ಸೋದರ ಮಾವನನ್ನು ಮದುವೆಯಾಗುವುದರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಆದರೆ ಅಂತಕ್ಕ ಮಾತ್ರ ತನ್ನ ಮಗಳನ್ನು ಕಿಟ್ಟಣ್ಣನಿಗೆ ಕೊಡಬೇಕೆನ್ನುತ್ತಾಳೆ. ಏಕೆಂದರೆ ತನ್ನ ಬಾಳಿನ ಹಾಗೆ ತನ್ನ ಮಗಳಾಗುವುದು ಬೇಡವೆಂದು, ಎಷ್ಟೆಂದರೂ ಪ್ರಾಯಕ್ಕೆ ಬಂದ ಹುಡುಗಿ ಅವಳ ರಕ್ಷಣೆಗೆ ಯಾರಾದರೂ ಬೇಕೇ ಬೇಕು. ಅಲ್ಲದೆ ಕಾವೇರಿಯ ಬಗ್ಗೆ ಜನರು ಬಾಯಿಗೆ ಬಂದ ಮಾತನಾಡುತ್ತಿದ್ದರು. .... ಸುಮ್ಮನೆ ಚೆಲ್ಲು ಹರಿಯುತ್ತಿರುತ್ತಾಳೆ .... ಪರಿಕಾರ ಹಾಕುತ್ತಿದ್ದಾಗ ಹೇಗೆ ಆಡುತ್ತಿದ್ದಳೊ ಹಾಗೆಯೆ ಆಡುತ್ತಿರುತ್ತಾಳೆ ಕಂಡ ಕಂಡವರೊಡನೆ .... ತೆಳ್ಳಗೆ ಬೆಳ್ಳಗೆ ಚೆನ್ನಾಗಿ ಇದ್ದಾಳೆ ಎಂದೂ ಎಲ್ಲರೂ ಇವಳನ್ನು ಮುದ್ದುಮಾಡುವವರೆ ಆಗಿದ್ದಾರೆ. ಅದಕ್ಕಾಗಿ ಅಂತಕ್ಕ ಸ್ಥಿತಿವಂತನಾದ ಕಿಟ್ಟಣ್ಣನಿಗೆ ೩ನೆಯ ಹೆಂಡತಿಯಾದರೂ ಸಹ ತನ್ನ ಮಗಳನ್ನು ಮದುವೆ ಮಾಡಲು ಹೊರಡುತ್ತಾಳೆ. ಕಾವೇರಿ ಮಾತ್ರ ಕಿಟ್ಟಣ್ಣನನ್ನೆ ಮದುವೆಯಾಗುವುದಕ್ಕಿಂತ ಹಾಳುಬಾವಿಗಾದ್ರೂ ಹಾರುತ್ತೀನಿ! ಎನ್ನುತ್ತಾಳೆ. ದೇವಯ್ಯನಂತಹ ಸ್ಫುರದ್ರೂಪಿಯನ್ನು ನೋಡಿದ ಮೇಲೆ ಕಿಟ್ಟಪ್ಪನಂತಹ ಕುರೂಪಿಯನ್ನು ಇವಳು ಒಪ್ಪುವುದಿಲ್ಲ.

ಇವಳಿಗೆ ತನ್ನ ಬದುಕನ್ನು ದೇವಯ್ಯನ ಬದುಕಿನೊಡನೆ ಬೆಸೆಯಬೇಕೆಂಬ ಹಂಬಲವಿತ್ತು. ಕಿಟ್ಟಯ್ಯ ಸೆಟ್ಟಿಯ ಧರ್ಮಪತ್ನಿಯಾಗುವುದಕ್ಕಿಂತಲೂ ಸಾವಿರಪಾಲು ಹರ್ಷದಾಯಕ ದೇವಯ್ಯಗೌಡರು ಇಟ್ಟುಕೊಂಡವಳಾಗಿರುವುದು.

ಇವಳ ಜೀವನದಲ್ಲಿ ಬರುವವರೆಲ್ಲರೂ ಇವಳ ನಾಶಕ್ಕೆ ಕಾರಣರಾಗುತ್ತಾರೆ. ದೇವಯ್ಯ, ಚೀಂಕ್ರ, ಇಜಾರದ ಸಾಬಿ, ಚರ್ಚಿನ ಪಾದ್ರಿ ಎಲ್ಲರೂ. ದೇವಯ್ಯನಂತೂ ಮೊದಮೊದಲು ತುಂಬಾ ಪ್ರೀತಿಸುತ್ತಿದ್ದವನು. ಅವಳಿಗೆ ತಾನು ಕೊಟ್ಟಿದ್ದ ಉಂಗುರ ಕಾಣದೆ ಅದು ಕರೀಂ ಸಾಬರ ಬಳಿಯಿರುವುದನ್ನು ನೋಡಿದಾಗ ಕಾವೇರಿಯ ಬಳಿ ಹೋಗುವುದನ್ನು ಬಿಟ್ಟು ಬಿಡುತ್ತಾನೆ. ಕಾವೇರಿ ತಾನು ಉಂಗುರ ಕಳೆದಿದ್ದರಿಂದ ದೇವಯ್ಯ ಬರುತ್ತಿಲ್ಲವೆಂದು ಭಾವಿಸಿ, ಅದಕ್ಕಾಗಿ ಉಂಗುರ ಹುಡುಕಲು ಬಹಳ ಪ್ರಯತ್ನ ಪಡುತ್ತಾಳೆ. ಉಂಗುರ ಸಿಕ್ಕರೆ ತಾನು ದೇವಯ್ಯ ಮದುವೆಯಾಗಬಹುದು. ಕಿಲಸ್ತರ ಜಾತಿಗೆ ಸೇರಿಕೊಳ್ಳುವುದು. ದೇವಯ್ಯಗೌಡರು ಕಿಲಸ್ತರ ಜಾತಿಗೆ ಸೇರಿದರೆ ನಾನೂ ಸೇರುತ್ತೇನೆ. ಆ ಜಾತಿಯಲ್ಲಿ ಉಂಗುರ ತೊಡಿಸಿದ ಮೇಲೆ ಮದುವೆಯಾದಂತೆಯೆ ಲೆಕ್ಕವಂತೆ! ಹೀಗೆ ಯೋಚಿಸುತ್ತಾಳೆ, ಆದರೆ ವಿಧಿ ಅವಳ ಬಾಳಿನಲ್ಲಿ ಬೇರೆಯೇ ಆಟ ಆಡುತ್ತದೆ. ಕಾಮುಕರ ಕಪಿಮುಷ್ಠಿಗೆ ಬಲಿಯಾಗುತ್ತಾಳೆ.

ಉಂಗುರ ಇವಳ ಜೀವನದಲ್ಲಿ ವಿಚಿತ್ರ ಆಟವನ್ನೇ ಆಡುತ್ತದೆ. ಈ ಉಂಗುರದಿಂದಾಗಿ ಆಕೆ ದೇವಯ್ಯನನ್ನು ಸೇರಬಹುದೆಂದು ಮೋಸಗಾರ, ಲಂಪಟ, ಕಾಮುಕ ಸೇರೆಗಾರ ಚೀಂಕ್ರನ ಮಾತು ಕೇಳಿ ಅಮಾವಾಸ್ಯೆ ರಾತ್ರಿಯಲ್ಲಿ ಉಂಗುರದ ಆಸೆಯಿಂದ ಚೀಂಕ್ರನ ಜೊತೆ ಉಂಗುರ ತರಲು ಹೋಗುತ್ತಾಳೆ. ಅಲ್ಲಿ ಚೀಂಕ್ರನಾದಿಯಾಗಿ ಸಾಮೂಹಿಕ ಅತ್ಯಾಚಾರಕ್ಕೆ ಬಲಿಯಾಗುತ್ತಾಳೆ. ಆಕೆ ಎಂತಹ ಮುಗ್ದೆಯೆಂದರೆ ಚೀಂಕ್ರ ಇವಳನ್ನು ಕೆಟ್ಟ ದೃಷ್ಠಿಯಿಂದ ನೋಡಿದರೂ ತಿಳಿಯದೆ ಅವನನ್ನು ನಂಬುತ್ತಾಳೆ. ಕೊನೆಗೆ ಆತ್ಮಹತ್ಯೆಗೆ ಶರಣಾಗುತ್ತಾಳೆ.

ಆದ್ದರಿಂದಲೇ ಇವಳ ತಪ್ಪೇನು ಇಲ್ಲದೆ ಪರಿಸ್ಥಿತಿಯ ಪರಿಣಾಮದಿಂದಾಗಿ, ಪಾಪಿಗಳ ಕಾಮಕ್ಕೆ ಬಲಿಯಾಗಿ, ದುರಂತ ಪಾತ್ರವಾಗಿದ್ದು ಓದುಗರ ಅನುಕಂಪವನ್ನು ಗಳಿಸುವ ಪಾತ್ರ.

ಆ. **ನಾಗಕ್ಕ** : ಕಾದಂಬರಿಯಲ್ಲಿ ಬರುವ ಒಂದು ಅಸಹಾಯಕ, ದುರದೃಷ್ಟವಂತ ಪಾತ್ರ. ಮೇಲುವರ್ಗಕ್ಕೆ ಸೇರಿರುವವಳು. ಕೃತಿಯ ಪ್ರಾರಂಭದಲ್ಲಿ ಈಕೆ ಒಬ್ಬ ವಿಧವೆ. ಅತ್ತೆಯ ಸಂಚಿಗೆ ಬಲಿಯಾದ ಸ್ವತಂತ್ರ ವ್ಯಕ್ತಿತ್ವವಿಲ್ಲದ ವ್ಯಕ್ತಿ. ಇವಳ ಅತ್ತೆಯ ಜೊತೆ ಹೋಗುತ್ತಿದ್ದರೆ ಜನ ಒಂದು ರೀತಿಯಲ್ಲಿ ನಗುತ್ತಿರುತ್ತಾರೆ. ಅದಕ್ಕೆ ಕಾರಣ ದುಷ್ಟಬುದ್ಧಿಯ ನಾಗತ್ತೆ. ನಾಗತ್ತೆಯ ಒಬ್ಬನೇ ಮಗನಾದ ನಾಗಣ್ಣನ ಹೆಂಡತಿಯೇ ನಾಗಕ್ಕ. ಸಿಂಬಾವಿ ಹೆಗಡೆಯವರ ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದವರು ನಾಗಕ್ಕನ ಗಂಡ ರೋಗದಿಂದ ಸತ್ತ ಮೇಲೆ ಅತ್ತೆಯ ಕಪಿಮುಷ್ಟಿಯಲ್ಲಿ ನಲುಗುತ್ತಾಳೆ. ಅಂದಿನಿಂದ ಇವರು ಸೀರುಡಿಕೆ ಜೋಡಿ ಎಂದೂ ಹೊಲೆಯನ ಹಾಸ್ಯಕ್ಕೂ

ಪಕ್ಕಾಗುವಷ್ಟರಮಟ್ಟಿಗೆ ಹಬ್ಬಿತ್ತು ಇವರ ಕೀರ್ತಿ. ಆದರೆ ಇಲ್ಲಿ ನಾಗಕ್ಕನ ತಪ್ಪು ಏನು ಇರಲಿಲ್ಲ. ದುಷ್ಟರೊಂದಿಗೆ ಇರುವ ಒಳ್ಳೆಯವರನ್ನೂ ದುಷ್ಟರ ಹಾಗೆ ನೋಡುವ ಸಮಾಜಕ್ಕೆ ನಾಗಕ್ಕ ಕೂಡ ಹಾಸ್ಯಾಸ್ಪದ ವ್ಯಕ್ತಿಯಾಗಿದ್ದಳು. ನೋಡಲು ಚೆನ್ನಾಗಿದ್ದ ಈಕೆ ಗಂಡ ರೋಗಿಯಾಗಿದ್ದರೂ ಯಾರೊಡನೆಯೂ ಅಸಭ್ಯವಾಗಿ ವರ್ತಿಸಲಿಲ್ಲ. ಅವನಿಗಾಗಿ ಏನೆಲ್ಲ ಹರಕೆಯನ್ನು ಹೊತ್ತುಕೊಂಡಿದ್ದಳು ಅಂದರೆ ಆ ಗಂಡ ಸತ್ತ ನಂತರ ಅತ್ತೆ ಸಿಂಭಾವಿ ಹೆಗಡೆಗೆ ಇವಳನ್ನು ಸೀರುಡಿಕೆ ಮಾಡಿಕೊಡಬೇಕೆಂದು ಶತಪ್ರಯತ್ನ ಮಾಡುತ್ತಾಳೆ ಆದರೆ ಮಾನವಂತೆಯಾದ, ನಾಗಕ್ಕ ಇದಕ್ಕೆ ಒಪ್ಪುವುದಿಲ್ಲ. ಆದರೂ ಈ ವಿಚಾರ ಹೆಗಡೆ ಪತ್ನಿಗೆ ತಿಳಿದು ಆಕೆ ಇಬ್ಬರನ್ನೇ ಮನೆಬಿಟ್ಟು ಓಡಿಸಿದಳು. ಅಲ್ಲಿಂದ ನಾಗಕ್ಕನ ಸ್ಥಿತಿ ಇನ್ನೂ ಹೀನಾಯವಾಯಿತು. ಈಕೆ ತನ್ನತ್ತೆಯ ಕೈಯಲ್ಲಿ ' ಪಂಜೊರ್ಲ ಕೈಲಿ ಸಿಕ್ಕ ಜಕಣಿ 'ಯಂತಾದಳು. ಪ್ರಾಣಿಯ ಹಾಗೆ ಇವಳನ್ನು ನಡೆಸಿಕೊಂಡ ಇವಳತ್ತೆ ಊರಿಂದೂರಿಗೆ ಸಾಗಿಸುವಂತೆ ಮನೆಯಿಂದ ಮನೆಗೆ ಕೊಂಡೊಯ್ದಳು. ಹಾಗೆಯೇ ಇವಳನ್ನೇ ಹಲವಾರು ಗಂಡುಗಳಿಗೆ ಸೀರುಡಿಕೆ ಮಾಡುವ ವ್ಯರ್ಥಪ್ರಯತ್ನವನ್ನೆ ನಡೆಸಿದ್ದಳು. ನಾಗಕ್ಕ ಪ್ರತಿಭಟಿಸಿ ಬಲತ್ಕಾರದ ಮರುಮದುವೆಯಿಂದ ಪಾರಾಗಿದ್ದಳು. ಹೀಗೆ ಕಾದಂಬರಿಯ ಆರಂಭದ ಅಧ್ಯಾಯಗಳಲ್ಲಿ ನಾಗಕ್ಕನ ಪಾತ್ರ ಕಾಣಿಸಿಕೊಳ್ಳುತ್ತದೆ.

ನಾಗಕ್ಕ ನಾಗತ್ತೆಯ ಕುತಂತ್ರಕ್ಕೆ ಬಲಿಯಾಗುವ ಪಾತ್ರವಾಗಿರುವುದೇ ಅಲ್ಲದೆ ಅಂದಿನ ಸಮಾಜದಲ್ಲಿ ಪ್ರಾಯಕ್ಕೆ ಬಂದ ಒಂಟಿ ಹೆಣ್ಣು ಗಂಡಸರ ಆಶ್ರಯವಿಲ್ಲದೆ ಬದುಕಲು ಸಾಧ್ಯವಿಲ್ಲ ಮತ್ತು ಇಂತಹ ಹೆಣ್ಣುಗಳನ್ನು ಗಂಡು ತನ್ನ ಕಾಮದಾಸೆಗೆ ಎಂತಹ ವಂಚನೆಯಿಂದಲಾದರೂ ಎಷ್ಟೇ ತೆರವಾದರೂ ಕೊಟ್ಟು ಮರುಮದುವೆ ಮಾಡಿಕೊಳ್ಳುತ್ತಿದ್ದ. ಅಂತಹ ಕಾಮುಕನ ಕಾಮುಕತನಕ್ಕೆ ಬಲಿಯಾದುದು ನಾಗಕ್ಕನ ಬದುಕು. ತನ್ನ ಬೆನ್ನ ಹಿಂದೆ ಎಂತಹ ವಂಚನೆ ನಡೆಯುತ್ತಿದೆ ಎಂಬುದನ್ನು ಅರಿಯದ ಮುಗ್ದೆ ಇವಳು. ಕೆಸರಿನಲ್ಲಿರುವ ಕಮಲದಂತಿರುವವಳು ಇವಳ ಯೌವ್ವನವೇ ಇವಳಿಗೆ ಮುಳ್ಳು. ಅದಕ್ಕಾಗಿಯೇ ಸಿಂಬಾವಿಯಿಂದ ಅತ್ತೆಯೊಡನೆ ಹೂವಳ್ಳಿಗೆ ಬಂದು ನೆಲೆಸುತ್ತಾಳೆ. ಇಲ್ಲಿಂದ ಮುಂದೆ ಅವಳ ಬದುಕೇ ಬೇರೆ ರೀತಿಯಾಗುತ್ತದೆ. ನಾಗತ್ತೆ ಮತ್ತು ವೆಂಕಟಣ್ಣನ ಮೋಸದ ಬಲೆಗೆ ಸಿಕ್ಕಿ ವೆಂಕಟಣ್ಣನಿಂದ ಅತ್ಯಾಚಾರಕ್ಕೊಳಗಾಗುತ್ತಾಳೆ. ಇವಳತ್ತೆ ತಾನು ಕೆಟ್ಟಿದ್ದಲ್ಲದೆ ತನ್ನ ಸೊಸೆಯ ಬಾಳನ್ನೇ ಹಾಳು ಮಾಡುತ್ತಾಳೆ. ವೆಂಕಟಣ್ಣನಿಗೆ ಸೀರುಡಿಕೆ ಮಾಡಿಕೊಡಬೇಕೆಂದು ಪೂರ್ವ ನಿಯೋಜಿತ ತಂತ್ರಮಾಡಿ ದಯ್ಯದ ಹರಕೆಯ ನೆಪದಲ್ಲಿ ಸೊಸೆಯನ್ನು ವಂಚಿಸಿರುತ್ತಾಳೆ. ಮುಗ್ದೆಯಾದ

ನಾಗಕ್ಕ ತಾನು ವೆಂಕಟಣ್ಣನ ಜೊತೆ ಮಲಗಿದ್ದೂ ತನ್ನ ಪತಿ ಕನಸಿನಲ್ಲಿ ಮತ್ತೆ ಬಂದು ಕೂಡಿದಂತೆ ಇತ್ತು. ಇವಳ ಈ ಮನೋಭಾವವನ್ನು ಗಮನಿಸಿದಾಗ ಈಕೆ ಪಾತಿವ್ರತ್ಯಕ್ಕೆ ಎಷ್ಟು ಬೆಲೆ ಕೊಡುತ್ತಿದ್ದಳು ಎಂಬುದು ಗಮನಕ್ಕೆ ಬರುತ್ತದೆ. ಅತ್ತೆಯ ಕುತಂತ್ರಕ್ಕೆ ಬಲಿ ಬೀಳದೆ ಯಾರೊಡನೆಯೂ ಸೀರುಡಿಕೆ ಮಾಡಿಕೊಳ್ಳಲಿಲ್ಲವಲ್ಲ ಎಂಬ ಭಾವನೆಯಂತೂ ನಿಜಕ್ಕೂ ಇವಳ ಬಗ್ಗೆ ಅನುಕಂಪವನ್ನು ಹುಟ್ಟಿಸುವಂತೆ ಮಾಡುತ್ತದೆ.

ನಾಗಕ್ಕ ವೆಂಕಣ್ಣನ ಕಾಮಕ್ಕೆ ಬಲಿಯಾದ್ದರಿಂದ ಅವನನ್ನು ಅನಿವಾರ್ಯವಾಗಿ ಸೀರುಡಿಕೆ ಮಾಡಿಕೊಳ್ಳಲೇ ಬೇಕಾಗುತ್ತದೆ. ಚಿನ್ನಮ್ಮನ ತಂದೆಯಾದ ಈತ ಚಿನ್ನಮ್ಮನ ವಯಸ್ಸಿನವಳನ್ನೇ ಸೀರುಡಿಕೆ ಮಾಡಿಕೊಳ್ಳುವುದನ್ನು ನೋಡಿದಾಗ ಹೆಣ್ಣಿಗೆ ಆ ಕಾಲದಲ್ಲಿ ಎಂಥ ಸ್ಥಾನವಿತ್ತು ಎಂಬುದು ಅರಿವಿಗೆ ಬರುತ್ತದೆ. ವೆಂಕಟಣ್ಣನನ್ನು ಸೀರುಡಿಕೆ ಮಾಡಿಕೊಂಡ ಮೇಲೆಯೂ ಇವಳು ಅವನನ್ನೆ ಚೆನ್ನಾಗಿ ನೋಡಿಕೊಳ್ಳುತ್ತಾಳೆ. ಚಿನ್ನಮ್ಮನಿಗೂ ಜೊತೆಗಾರ್ತಿಯಾಗಿ, ಮನೆಯಲ್ಲಿ ತಾಯಿಯಾಗಿ, ಗದ್ದೆಯಲ್ಲಿ ಆಳಾಗಿಯೂ ದುಡಿಯುತ್ತಾಳೆ. ಚಿನ್ನಮ್ಮ ಮದುವೆಯ ದಿನ ತಪ್ಪಿಸಿಕೊಂಡು ಹೋಗಲು ಸಹಾಯವನ್ನು ಮಾಡುತ್ತಾಳೆ. ಇವಳಿಂದಲೇ ತನ್ನ ಮಗಳು ತಪ್ಪಿಸಿಕೊಂಡು ಹೋದಳೆಂದು ಮೊದಲೇ ರೋಗದಿಂದ ಬಳಲುತ್ತಿದ್ದ ವೆಂಕಟಣ್ಣ ನಾಗಕ್ಕನನ್ನು ಹೊಡೆಯಲು ಬಿಟ್ಟು ಸಾಯುತ್ತಾನೆ. ಆ ನಂತರವೂ ನಾಗಕ್ಕ ಕೆಟ್ಟ ದಾರಿ ತುಳಿಯದೆ ಚಿನ್ನಮ್ಮನ ಗೆಳತಿಯಾಗಿ, ಮನೆಯ ಒಡತಿಯಾಗಿ, ಹೂವಳ್ಳಿಯ ಮನೆ ತೋಟವನ್ನು ನೋಡಿಕೊಂಡು ಬದುಕನ್ನೇ ಸಾರ್ಥಕಗೊಳಿಸಿಕೊಳ್ಳುತ್ತಾಳೆ. ಈಕೆಯ ಪಾತ್ರದ ಒಳ್ಳೆಯ ಸದ್ಗೃಹಿಣಿಯ ನಡವಳಿಕೆಗಳನ್ನೇ ಹೊಂದಿದ್ದರೂ, ಪರಿಸ್ಥಿತಿಯ ಅನಿವಾರ್ಯತೆಯಿಂದ ತನ್ನನ್ನು ಒಪ್ಪಿಸಿಕೊಳ್ಳುವ ಪಾತ್ರ. ನಾಗಕ್ಕ ಛಲವಂತೆ, ಧೈರ್ಯವಂತೆ ಕಾದಂಬರಿಯ ಅಲ್ಲಲ್ಲಿ ಬರುವ ಇವಳು ಕೊನೆಯವರೆಗೂ ಇರುತ್ತಾಳೆ. ವಿಧಿಯ ಕಾರಣದಿಂದಾಗಿ ಇವಳ ಬಾಳಿನಲ್ಲಿ ಬಂದ ಇಬ್ಬರೂ ಗಂಡಂದಿರು ಉಳಿಯುವುದಿಲ್ಲ.

೪. **<u>ತಿಮ್ಮಿ</u>** : ಕಾದಂಬರಿಯಲ್ಲಿ ಬರುವ ಮತ್ತೊಬ್ಬ ಮದುಮಗಳು ಈಕೆ. ಅತ್ಯಂತ ಕೆಳವರ್ಗವಾದ (ದಲಿತ) ಹೊಲೆಯರವಳು. ಈ ಕೃತಿಯ ಮುಖ್ಯಪಾತ್ರವಾದ ನಾಯಿಗುತ್ತಿಯ ಪ್ರೇಯಸಿ/ಹೆಂಡತಿ. ಸಿಂಬಾವಿಯ ನಾಯಿಗುತ್ತಿ ತನ್ನ ಸೋದರತ್ತೆಯ ಮಗಳಾದ ಬೆಟ್ಟಳ್ಳಿಯ ತಿಮ್ಮಿಯನ್ನು ಪ್ರೀತಿಸುತ್ತಿರುತ್ತಾನೆ. ತಿಮ್ಮಿಗೆ ಅದೇ ಊರಿನ ಬಚ್ಚನೊಡನೆ ಮದುವೆ ನಿಶ್ಚಯವಾಗಿರುತ್ತದೆ. ಆದರೆ ಅವನು ಕಿಲಸ್ತರ ಜಾತಿಗೆ ಸೇರುತ್ತಾನೆಂದು ಅವನೊಡನೆ ಮದುವೆ

ತಪ್ಪಿಸಿಕೊಳ್ಳಲು ಮತ್ತು ತಾನು ಮೊದಲಿನಿಂದಲೂ ಪ್ರೀತಿಸುತ್ತಿದ್ದ ನಾಯಿಗುತ್ತಿಯ ಜೊತೆ ಓಡಿ ಹೋಗಲು ನಿರ್ಧರಿಸುತ್ತಾಳೆ. ಆದ್ದರಿಂದಲೆ ರಾತ್ರೋರಾತ್ರಿ ತಾನು ಪ್ರೀತಿಸಿದ ಗುತ್ತಿಯೊಡನೆ ಹೊರಟು ಬಿಡುತ್ತಾಳೆ. ಹುಲಿಕಲ್ಲುನೆತ್ತಿಯ ಬಳಿ ಗುತ್ತಿಯೊಡನೆ ಉಳಿಯುತ್ತಾಳೆ. ಭಯಂಕರವಾದ ಕಾಡಿನಲ್ಲಿ ಹುಲಿ ಮತ್ತು ದೊಡ್ಡುಗಳಿಂದ ಒದಗಲಿದ್ದ ದುರಂತದಿಂದ ಪಾರಾಗಿ ಹುಲಿಕಲ್ಲು ನೆತ್ತಿಯ ಪಾಳುನೆತ್ತಿಯ ಪಾಳುಮಂಟಪದಲ್ಲಿ ಎಲ್ಲವನ್ನು ಮರೆತು ಅವಳು ಗುತ್ತಿಯೊಡನೆ ಕಳೆದ ಅದ್ಭುತ ರಮ್ಯರಾತ್ರಿ ಮರೆಯುವಂತಹದ್ದಲ್ಲ. ಪ್ರಕೃತಿಯೊಡಲಿನಲ್ಲೆ ಹುಟ್ಟಿ ಅಲ್ಲಿಯೇ ಬೆಳೆದಿದ್ದರೂ ಹಿಂದೆಂದು ಆಗದಿದ್ದ ಸುಂದರಾನುಭವ ತಿಮ್ಮಿಗಾಗಿರುತ್ತದೆ.

ಕಾದಂಬರಿಕಾರರು ತಿಮ್ಮಿಯನ್ನು ನಿಸರ್ಗ ಸಹಜವಾದ ಪಾತ್ರವಾಗಿ, ಪ್ರಕೃತಿ ಪ್ರೇಮಿಯಾಗಿ ಚಿತ್ರಿಸಿದ್ದಾರೆ. ಪೂರ್ವ ದಿಗಂತದಿಂದ ಕೆಂಡದುಂಡೆಯಾಗಿ ಕಿರಣವಿಲ್ಲದ ಸೂರ್ಯ ಮೇಲೇಳುತ್ತಿದ್ದನು. ಇದನ್ನು ನೋಡಿ ಪರವಶಳಾಗುತ್ತಾಳೆ. ನಿಸರ್ಗದಲ್ಲಿ ಬೆರೆತುಬಿಡುತ್ತಾಳೆ. ಗುತ್ತಿಯೊಡನೆ ಇಲ್ಲಿಯೇ ಬಿಡಾರ ಹೂಡಿದರೆ ಹೇಗಿರುತ್ತದೆ ಎನ್ನುತ್ತಾಳೆ. ಗುತ್ತಿಗೆ ತಿಮ್ಮಿ ತನ್ನ ಜೊತೆ ಬಂದಿರುವುದಕ್ಕೆ ಕಣ್ಣ ಪಂಡಿತರ ಯಂತ್ರವೇ ಕಾರಣ ಎಂದು ಅವಳಿಗೆ ಹೇಳಿದಾಗ ಆಕೆ ಬಚ್ಚನಿಗೂ ಅಂತ್ರಕೊಟ್ಟಿದ್ದನ್ನು ಹೇಳುತ್ತಾಳೆ. ಇಲ್ಲಿ ತಿಮ್ಮಿ ತಾನು ಬಚ್ಚನೊಂದಿಗೆ ಸುಖಪಟ್ಟಿದ್ದನ್ನು ಗುತ್ತಿಗೆ ಹೇಳುತ್ತಾಳೆ. ಆದರೆ ಇದು ಗುತ್ತಿಗೆ ತಪ್ಪು/ಮಹತ್ವವೆನಿಸುವುದಿಲ್ಲ. ಅವರ ಜಾತಿಯ ದೃಷ್ಟಿಯಿಂದ ಇದು ಅಪರಾಧವೇನು ಅಲ್ಲ.

ತಿಮ್ಮಿಯು ಹಿಡಿದ ಕಾರ್ಯವನ್ನೇ ಛಲಬಿಡದೆ ಸಾಧಿಸುತ್ತಾಳೆ. ಅಲ್ಲದೆ ಗುತ್ತಿಯನ್ನು ಪೋಲೀಸರು ಹುಡುಕುತ್ತಿದ್ದಾಗ ಇವಳು ತಪ್ಪಿಸಿಕೊಂಡು ಪೀಂಚಲು ಮನೆಯಲ್ಲಿದ್ದು ಗುತ್ತಿಯೊಡನೆ ಹೊರಟು ಹೋಗುತ್ತಾಳೆ. ಇವಳ ಮನೋಸ್ಥೈರ್ಯ ಮೆಚ್ಚುವಂತಹದ್ದು. ಗುತ್ತಿಯ ಜೊತೆಯಲ್ಲಿ ಕಷ್ಟದಲ್ಲಿಯೂ, ನೋವಿನಲ್ಲಿಯೂ, ನಲಿವಿನಲ್ಲಿಯೂ, ಭಾಗಿಯಾಗುತ್ತಿದ್ದಳು. ತಿಮ್ಮಿ ಓಡಿ ಬಂದಿದರಿಂದ ಬೆಟ್ಟಳ್ಳಿಯ ಅವಳ ಕುಟುಂಬ ನೆಮ್ಮದಿ ಕಳೆದುಕೊಳ್ಳುತ್ತದೆ. ಹಾಗೆಯೇ ಸಿಂಬಾವಿ ಮತ್ತು ಬೆಟ್ಟಳ್ಳಿ ಗೌಡರುಗಳ ನಡುವೆ ದ್ವೇಷ ಹೆಚ್ಚಗುತ್ತಾ ಹೋಗುತ್ತದೆ. ಅದಕ್ಕೆ ಕಾರಣ ಬೆಟ್ಟಳ್ಳಿ ಗೌಡರಿಗೆ ಒಂದು ಕೂಲಿಯಾಳು ಕಡಿಮೆಯಾಗುತ್ತದೆ ಎಂಬುದು. ಹಾಗೆಯೇ ತಮ್ಮ ಹೊಲೆಗೇರಿಯ ಒಂದು ಹೆಣ್ಣನ್ನು ಹೊರಗೆ ಕೊಟ್ಟರೆ ತಮ್ಮ ಕೆಲಸಕ್ಕೆ ಒಂದಾಳು ಖೋತ ಬೀಳುತ್ತದೆ. ಆದ್ದರಿಂದ ಕೇರಿಯ ಹೆಣ್ಣನ್ನು ಗಂಡೇ ಮದುವೆಯಾಗಬೇಕು ಎಂಬುದು ಅವರ ಕಟ್ಟಪ್ಪಣೆ. ಒಂದು ವೇಳೆ ಬೇರೆ ಊರಿನವರನ್ನು ಮದುವೆಯಾಗಿದ್ದರೂ ಅವಳ ತಾಳಿ ಕೀಳಿಸಿ ತಮ್ಮ ಕೇರಿಯವನಿಗೆ ಮದುವೆ ಮಾಡುತ್ತಿದ್ದರು. ಅದಕ್ಕಾಗಿಯೇ ಈಗ ತಿಮ್ಮಿ

ಕೂಡ ಓಡಿ ಹೋಗಿರುವುದರಿಂದ ಅವಳ ಅಣ್ಣನಿಗೆ ಚೆನ್ನಾಗಿ ಹೊಡೆಸಿ ಗಾಯಗೊಳಿಸಿರುತ್ತಾರೆ ಮತ್ತು ತಿಮ್ಮಿಯನ್ನು ಮತ್ತೆ ಕರೆತರುವಂತೆ ಹಿಂಸಿಸುತ್ತಾರೆ. ಅವರಿಗೆ ಹೆಣ್ಣಿನ ಭಾವನೆಗಳಿಗಿಂತಲೂ ತಮ್ಮ ಲಾಭವೆ ಮುಖ್ಯ. ಈ ಕಾರಣದಿಂದಾಗಿಯೇ ತಿಮ್ಮಿ ಗುತ್ತಿಯೊಡನೆ ದೇಶಾಂತರ ಹೋಗಬೇಕಾಗಿ, ಹುಲಿಯನೊಡನೆ ಕಾನೂರಿಗೆ ಹೋಗುತ್ತಾರೆ. ಅಲ್ಲಿಯೇ ಶಾಶ್ವತವಾಗಿ ಜೀತದಾಳುಗಳಾಗಿ ನೆಲೆಸುತ್ತಾರೆ. ತಿಮ್ಮಿ ಚಿನ್ನಮ್ಮನಷ್ಟೆ ಧೈರ್ಯವಂತ, ನಿಸರ್ಗ ಸಹಜ ಪಾತ್ರ.

ತಿಮ್ಮಿ ಕೆಂಡದುಂಡೆಯಾಗಿ ಮೇಲೆರುತ್ತಿದ್ದ ಸೂರ್ಯನನ್ನು ಕಂಡು ತೋರಿಸುವ ಪ್ರತಿಕ್ರಿಯೆ ಅರ್ಥವತ್ತಾಗಿದೆ. ಮುಂದೆ ಮುಕುಂದಯ್ಯ-ಚಿನ್ನಮ್ಮರಿಗೆ ಸಹಾಯಕವಾಗುವ ಸಂದರ್ಭದಲ್ಲಿ ಇದೆ ಹುಲಿಕಲ್ಲು ನೆತ್ತಿಯ ಮಂಟಪದಲ್ಲಿ ಸೈನಿಕ ವೇಷದ ಸವಾರ ಮತ್ತು ತರುಣಿಯೊಬ್ಬಳ ಕಾಣ್ಕೆಯನ್ನು ತಿಮ್ಮಿ ಕಾಣುತ್ತಾಳೆ. ಈ ಅದ್ಭುತ ದೃಶ್ಯವನ್ನು ಕಣ್ಣುಬಿಟ್ಟುಕೊಂಡೆ ಕಂಡಿದ್ದವಳು ದಿಗ್ಮೂಡಳಾಗಿ ಗಡಗಡ ನಡುಗುತ್ತಳೆ. ತಿಮ್ಮಿಯ ಪಾತ್ರದ ದೃಷ್ಟಿಯಿಂದ ಇದು ಬಹಳ ಮುಖ್ಯ. ಅವಳಿಗಾಗುವ ಆ ಅತೀಂದ್ರಿಯ ಕಾಣ್ಕೆಗೆ, ಇಲ್ಲಿನ ಅವಳ ಸೂರ್ಯೋದಯವನ್ನು ಕಂಡು ತೋರಿಸುವ ಪ್ರತಿಕ್ರಿಯೆ, ಅವಳನ್ನೆ ಸಿದ್ಧಮಾಡುತ್ತದೆ. ಇಂಥ ಸೂಕ್ಷ್ಮ ಸಂವೇದನೆ ಕೆಲವರಿಗೆ ಮಾತ್ರ ಇರುವಂಥವು. ಅದಕ್ಕೆ ಸುಸಂಸ್ಕೃತರು ಅಲ್ಲದವರು ಎಂಬ ಯಾವ ಭೇದವೂ ಇಲ್ಲ. ತಿಮ್ಮಿ ಕಾಣುವ ಸೈನಿಕ ವೇಷದ ಸವಾರ ಮತ್ತು ತರುಣಿಯ ಕಾಣ್ಕೆ ಕಾದಂಬರಿಯ ವಸ್ತುಗಳಲ್ಲೊಂದಾದ ಜನ್ಮಾಂತರದ ವಿಷಯಕ್ಕೆ ಸಂಬಂಧಪಟ್ಟಂತಹದ್ದಾಗಿದೆ. ಚಿನ್ನಮ್ಮ-ಮುಕುಂದಯ್ಯರ ವಿವಾಹ ತಿಮ್ಮಿ ಕಂಡ ದರ್ಶನದಂತೆಯೇ ಮುಂದೆ ನಡೆಯುತ್ತದೆ.

ಹಾಗೆಯೇ ಗುತ್ತಿ ಹೇಳುವ ಹಾಗೆ ನಾನು ಇವಳಿಗೆ ಅಧೀನವಾಗದಿದ್ದರೆ, ಇವಳು ನನಗೆ ಅಧೀನವಾಗುವ ಚೇತನವಲ್ಲ, ಏಕೆಂದರೆ ತಿಮ್ಮಿ ತಾನು ಗುತ್ತಿಯೊಡನೆ ಓಡಿ ಬಂದಿದ್ದೇನೆಂದು ಒಪ್ಪಿಕೊಳ್ಳಲಾರದಷ್ಟು ಸ್ವಾಭಿಮಾನಿ. ಆದರೂ ಗುತ್ತಿಯ ಕಷ್ಟಸುಖದಲ್ಲಿ ಪಾಲು ಪಡೆದುಕೊಂಡು ಸಾಗುತ್ತಾಳೆ. ಒಂದು ರೀತಿಯಿಂದ ಗುತ್ತಿ-ತಿಮ್ಮಿಯರಲ್ಲಿ ಕಾಣುವ ಹೆಣ್ಣು-ಗಂಡಿನ ಸಮಾನತೆಯನ್ನು ಕಾದಂಬರಿಯಲ್ಲೆಲ್ಲಿಯೂ ಕಾಣಲಾರೆವು.

೫. **<u>ಸೇಸಿ</u>** : ತಿಮ್ಮಿಯ ತಾಯಿ. ಬೆಟ್ಟಳ್ಳಿಯ ಹೊಲೆಯರವನಾದ ದೊಡ್ಡಬೀರನ ಹೆಂಡತಿ. ನಾಯಿಗುತ್ತಿಗೆ ಸೋದರತ್ತೆ. ಈಕೆಯ ಪಾತ್ರ ಕೆಲವು ಕಡೆ ಬಂದರೂ ನೆನಪಿನಲ್ಲಿ ಉಳಿಯುವಂತಹದ್ದು. ಏಕೆಂದರೆ ಸೇಸಿ ಹೊಲೆಯರವಳಾದರೂ ಕೂಡ ಧೈರ್ಯಶಾಲಿ, ಮಗಳ ಸಂಕಟವನ್ನು ನೋಡಲಾರದ ಇವಳು ಮಗಳನ್ನು ತನ್ನ ಅಣ್ಣನ ಮಗನಾದ ನಾಯಿಗುತ್ತಿಯ ಜೊತೆ ಕಳುಹಿಸಿಬಿಡುತ್ತಾಳೆ. ನಿಜಾಂಶ ತಿಳಿದರೆ ತನ್ನ ಗತಿ? ಗೌಡರ ಕೋಪ, ಗಂಡನ ರೌದ್ರತೆ, ಅಳಿಯನಾಗಲಿದ್ದವನ ಕ್ರೋಧ, ಕೇರಿಯವರ ನಿಂದೆ, ಇವೆಲ್ಲವನ್ನು ನೆನಪಿಸಿಕೊಂಡರೂ ಮಗಳ ಆಸೆಯ ಮುಂದೆ ಇದೆಲ್ಲ ಕ್ಷಣಿಕವೆನಿಸಿ ನಿಸರ್ಗಕ್ಕೆ ಕೈಮುಗಿದು ಕಳುಹಿಸಿಕೊಡುತ್ತಾಳೆ. ಮುಂದೆ ತನ್ನ ಗಂಡ ಮಕ್ಕಳು ತಿಮ್ಮಿಯನ್ನು ಕೇಳಿದರೂ ಗೊತ್ತಾಗದವರಂತೆ ಇದ್ದು ಬಿಡುತ್ತಾಳೆ. ಆದರೆ ತನ್ನ ಮಗನಿಗೆ ಗೌಡರು ಶಿಕ್ಷಿಸುತ್ತಿರುವುದನ್ನು ನೋಡಿದಾಗ ಮಗನ ಮೇಲಿನ ಪ್ರೀತಿಯಿಂದ ಎಲ್ಲವನ್ನು ಬಾಯಿಬಿಟ್ಟು ಬಿಡುತ್ತಾಳೆ. ಅಂದರೆ ಇಜಾರದ ಸಾಬಿಯು ಬೀರನಿಗೆ ಹುಣಸೆ ಬರಲಿನಲ್ಲಿ ಒಂದೇ ಸಮನೆ ಹೊಡೆಯುತ್ತಿದ್ದಾಗ ಅವನ ಕೈಲಿದ್ದ ಹುಣಸೆ ಬರಲನ್ನು ಕಿತ್ತೆಸೆದು ಅನನ್ನೇ ತಳ್ಳಿ ಮಗನನ್ನು ರಕ್ಷಿಸುತ್ತಾಳೆ. ಅಂತಹ ಕ್ರೂರಿಯಾಗಿದ್ದ ಸಾಬಿಯು ಇದ್ದಕ್ಕಿದ್ದ ಹಾಗೆ ಸತ್ವಹೀನನಾಗಿಬಿಟ್ಟ. ಇದನ್ನೇ ಲೇಖಕರು ಸೇಸಿಯ ಬಗ್ಗೆ ವ್ಯಕ್ತಪಡಿಸುವ ಅನುಕಂಪವೆಂದರೆ. 'ಹೊಲೆಯಳಾದರೂ, ಬಡವಳಾದರೂ, ಯಾವ ವಿಧವಾದ ವ್ಯಕ್ತಿತ್ವ ವಿಶೇಷವೂ ಲವಲೇಶವೂ ಇಲ್ಲದವಳಾದರೂ ಸಂಕಟತಪ್ತ ತಾಯ್ತನ ಎಂತಹ ಅಲ್ಪ ಸ್ತ್ರೀಯನ್ನಾದರೂ ಭೂಮಪಟ್ಟಕ್ಕೇರಿಸಿಬಿಡುತ್ತದೆಯೋ ಏನೋ ಎಂಬಂತೆ, ಅವಳ ಮಾತೃ ದುಃಖ ಜನ್ಯಕ್ರೋಧದ ಸಾನ್ನಿಧ್ಯಭೀಷಣೆಗೆ ಕ್ಷಣಮಾತ್ರ ಭೀತ ಚೇತಸನಾದನು ಇಜಾರದ ಸಾಬಿ!' ಹೀಗೆ ಇವಳ ತಾಯ್ತನದಲ್ಲಿ ಭೂಮತೆ ಉಂಟಾಗುತ್ತದೆ.

ಗೌಡರ ಎದುರಿನಲ್ಲಿಯೂ ಕೂಲಿಯಾಳುಗಳು ಅದರಲ್ಲಿಯೂ ಹೊಲೆಯರವರು ನಿಲ್ಲುವುದು ಕಷ್ಟ ಆದರೆ ಸೇಸಿ ತನ್ನ ತಾಯ್ತನದ, ಕರುಳ ಸಂಕಟದಿಂದ ಗೌಡನೆದುರು ನಿಂತು ರೋದನ ಮಿಶ್ರವಾದ ತಾರಕ ಸ್ವರದಲ್ಲಿ ನನ್ನನ್ನು ಕೊಲ್ಲಿ, ಅಂದರೆ ನನ್ನ ಗಂಡ ಮಕ್ಕಳನ್ನು ಕೊಲ್ಲಬ್ಯಾಡಿ ಎಂದು ಅಡ್ಡಬಿದ್ದು ಬೇಡಿಕೊಳ್ಳುತ್ತಾಳೆ. ಆದ್ದರಿಂದಲೇ ಕೇವಲ ಕೆಲವೇ ಕಡೆ ಇವಳ ಪಾತ್ರ ಚಿತ್ರಣವಿದ್ದರೂ ಕೂಡ ಮಹತ್ವವಾದ ಪಾತ್ರವಾಗಿದೆ.

೬. **ಜಟ್ಟಮ್ಮ** : ಸಿಂಬಾವಿ ಭರಮೈ ಹೆಗ್ಗಡೆಯವರ ಪತ್ನಿ. ಆದರೆ ಈಕೆಗೆ ಮಕ್ಕಳಿಲ್ಲ. ಇವಳು ಯಾವಾಗಲೂ ಜಗಳವಾಡುತ್ತಿರುತ್ತಾಳೆ. ಕಾರಣ ತನ್ನ ಗಂಡ ಎರಡನೆ ಮದುವೆಯಾಗುತ್ತಿರುವುದಕ್ಕೆ ತನ್ನ ಬಂಜೆತನವೇ ಕಾರಣವೆಂದು ಅರಿತಿದ್ದುದರಿಂದ ಗಂಡನ ಮೇಲೆ ತೀರಿಸಿಕೊಳ್ಳಲಾಗದ ನಿರಾಶೆ, ಕೋಪ, ತಾಪಗಳನ್ನೆ, ಇನ್ನೂ ಮದುವೆಯಾಗದ ನಾದಿನಿಯಾದ ಲಕ್ಕಮ್ಮನ ಮೇಲೆ ತೀರಿಸಿಕೊಂಡು ಮನಸನ್ನು ಶಾಂತಗೊಳಿಸಿಕೊಳ್ಳುತ್ತಿದ್ದಳು. ಇವಳ ಜಗಳ ಎಷ್ಟಿತ್ತೆಂದರೆ ಹೊಲೆಯರ ಆಳುಗಳು "ಮತ್ತೆ ಸುರುವಾಯ್ತಪ್ಪ! ಈ ಹೆಗ್ಗಡ್ತೀರಿಂದ ಸುಖಾ ಇಲ್ಲ. ಮೂರೊತ್ತು ಜಗಳಾ! ಜಗಳಾ! ಜಗಳಾ! ಮುರೊತ್ತು ನೀ ಮುಂಡೆ ನೀ ಮುಂಡೆ! ನೀ ರಂಡೆ ನೀ ರಂಡೆ! ನಾನಾಗೋ ಹೊತ್ತಿಗೆ ಕಾಲ ಮಾಡ್ತೀನಿ! ಎಂದು ಹೇಳುವುದಲ್ಲದೆ ಹಾದಿರಂಪ ಬೀದಿರಂಪ ಮಾಡ್ತಿದ್ದಾರೆ" ಎನ್ನುತ್ತಿದ್ದರು.

ಜಟ್ಟಮ್ಮನಂತೂ ತನ್ನ ತವರಿನಿಂದ ಗಂಡನಿಗೆ ಸವತಿ ಬರುತ್ತಿದ್ದಾಳೆ ಎಂದಾಗ ಮಾರಿಯಾದಳು. ಅವಳಿಗೆ ಸವತಿಯ ಆಗಮನ ಎಷ್ಟು ಅಸಹ್ಯವಾಗಿತ್ತೆಂದರೆ ಅದಕ್ಕಿಂತ ಬಾವಿಗೆ ಬೀಳುವುದೇ ವಾಸಿ ಎನಿಸುತ್ತಿತ್ತು. ಆ ಕಾಲದಲ್ಲಿ ಗಂಡಸು ತನ್ನದೆಷ್ಟೆ ಲೋಪವಿದ್ದರೂ ಕೂಡ ಮದುವೆಯಾಗುವುದರಲ್ಲಿ ಮಾತ್ರ ಹಿಂದೆ ಬೀಳುತ್ತಿರಲಿಲ್ಲ. ಹೆಣ್ಣು ಅವರಿಗೆ ಕೇವಲ ಭೋಗ ವಸ್ತು ಮಕ್ಕಳನ್ನು ಪಡೆಯುವ ಯಂತ್ರ ಅಷ್ಟೇ ಅದು ಜಟ್ಟಮ್ಮನ ವಿಚಾರದಲ್ಲಿಯೂ ಅಷ್ಟೇ. ಜಟ್ಟಮ್ಮ ನೇಣು ಹಾಕಿಕೊಳ್ಳುತ್ತೇನೆಂದರೂ ಭರಮೈ ಹೆಗಡೆ ಕೇಳುತ್ತಿರಲಿಲ್ಲ. ಜಟ್ಟಮ್ಮ ಮನಸ್ಸಿನಲ್ಲಿಯೇ ಪರಿತಪಿಸುತ್ತಿದ್ದರೂ ಗಂಡನೆದುರು ಯಾವುದನ್ನೂ ಬಿಚ್ಚಿ ಹೇಳುವ ಧೈರ್ಯವಿರಲಿಲ್ಲ. ಇದು ಅಂದಿನ ನಾಡಿನಲ್ಲಿ ಹೆಣ್ಣಿಗಿದ್ದ ಅಸಮಾನತೆ.

ಕುಸಂಸ್ಕೃತಿಯ ಜಟ್ಟಮ್ಮ ಚಿನ್ನಮ್ಮನನ್ನು ತನ್ನ ಗಂಡನಿಗೆ ತಂದುಕೊಳ್ಳಬೇಕೆಂಬ ಇಚ್ಛೆಯಿರದಿದ್ದರೂ ಕೂಡ ಗಂಡನಿಗಾಗಿ ಒಪ್ಪುತ್ತಾಳೆ. ಆದರೆ ಚಿನ್ನಮ್ಮನಿಂದ ತನ್ನ ಮಾಂಗಲ್ಯ ಭಾಗ್ಯ ಹೋಗುತ್ತದೆ, ಎಂದಾಗ ವಿರೋಧಿಸಿದರೂ ಮದುವೆ ನಡೆಯದಾಗ ಸಂತೋಷಿಸಿ ಮಂಜಮ್ಮನೊಂದಿಗೆ ಮದುವೆ ಮಾಡಿಸುತ್ತಾಳೆ.

ಜಟ್ಟಮ್ಮ ನಾಲ್ಕು ಗೋಡೆಯ ಮಧ್ಯೆಯೇ ಇದ್ದರೂ ಚಿಕ್ಕಪುಟ್ಟ ಖರ್ಚಿಗೆ ಪುಡಿಗಾಸನ್ನು ಮಾಡಿಕೊಳ್ಳುತ್ತಿದ್ದಳು. ಕದರಡಿಕೆ ಮಾಡಿ ಹಣ ಸಂಪಾದಿಸುತ್ತಿದ್ದಳು. ಜಟ್ಟಮ್ಮ ಸುಬ್ಬಣ್ಣ ಹೆಗಡೆಯವರ ಮಗಳು.

ಜಟ್ಟಮ್ಮನ ಪಾತ್ರವನ್ನು ಕುರಿತು ಹೇಳುವಾಗ ಅವಳ ನಾದಿನಿ ಅಂದರೆ ಭರಮಹೆಗಡೆಯವರ ತಂಗಿ ಲಕ್ಕಮ್ಮನ ಪಾತ್ರವನ್ನು ಕುರಿತು ಹೇಳಬೇಕಾಗುತ್ತದೆ. ಏಕೆಂದರೆ ಜಟ್ಟಮ್ಮನಷ್ಟೆ ಜಗಳಗಂಟಿ ಲಕ್ಕಮ್ಮ ನೋಡಲು ಚೆನ್ನಾಗಿದ್ದರೂ ಕೂಡ ತೀರಾ ಕುಸಂಸ್ಕೃತವಾದ ಪಾತ್ರ. ತಿಮ್ಮಪ್ಪ ಹೆಗ್ಗಡೆಯನ್ನೆ ಮದುವೆಯಾಗುವವಳು. ಅತ್ತಿಗೆ ಯಾವ ತಿಂಡಿಯನ್ನು ಕೊಡುತ್ತಿರಲಿಲ್ಲವಾದ್ದರಿಂದ ಇವಳು ಜಟ್ಟಮ್ಮನಿಗಿಂತ ಕಡಿಮೆಯಿಲ್ಲವೆಂಬಂತೆ ಕದರಡಿಕೆಯನ್ನು ಮಾರಿಸಿ ತಿಂಡಿ ತರಿಸಿಕೊಳ್ಳುತ್ತಿದ್ದಳು.

ಲಕ್ಕಮ್ಮ ಅತ್ತಿಗೆಯ ಜೊತೆ ಜಗಳವಾಡಿದರೂ ಅಣ್ಣನಿಗೆ ಪ್ರೀತಿಯ ತಂಗಿಯಾಗಿದ್ದಳು. ವೆಂಕಟಣ್ಣನಿಗೆ ತನ್ನನ್ನೇ ಮದುವೆಮಾಡಿದ್ದರೂ ಇವಳು ತಲೆ ಭಾಗಬೇಕಾಗಿತ್ತು. ಅತ್ತಿಗೆ ಅಣ್ಣನನ್ನು ಎಲ್ಲಿ ಕೊಂದುಬಿಡುತ್ತಾಳೊ ಎಂದು ಕಾಯುತ್ತಿದ್ದಳು.

ಇನ್ನುಳಿದಂತಹ ಪಾತ್ರಗಳಾದ ದೇವಮ್ಮ. ತನ್ನ ಗಂಡನ ಬಗ್ಗೆ ಯೋಚಿಸುವುದನ್ನೇ ಮಾಡುತ್ತಿರುತ್ತಾಳೆ. ಆತ ಕ್ರಿಶ್ಚಿಯನ್ ಧರ್ಮದ ಪ್ರಭಾಕ್ಕೊಳಗಾಗಿ ತನ್ನನ್ನು ಜಾತಿ ಕೆಡಿಸಲು ಪ್ರಯತ್ನಿಸುತ್ತಾನೆಂದು ತಿಳಿದಾಗ ನಮ್ಮನ್ನು ಬಾವಿಗೆ ತಳ್ಳಿ ಆಮೇಲೆ ಏನು ಬೇಕಾದರೂ ಮಾಡಿ ಎಂದು ಹೇಳಿ ದುಃಖಿಸುತ್ತಾಳೆ.

ಮುಕುಂದಯ್ಯನ ಅಕ್ಕನಾದ ಈಕೆ ಗಂಡನಿಂದಾಗಿಯೇ ಯಾವಾಗಲೂ ಕಣ್ಣೀರು ಸುರಿಸುತ್ತಾಳೆ. ಆದರೆ ಮಗು ಚಲುವಯ್ಯನೇ ಇವಳ ಸರ್ವಸ್ವ. ಈಕೆ ದೇವಯ್ಯನ ಹೆಂಡತಿ, ಮುಕುಂದಯ್ಯ ಇವಳನ್ನೆ ಅಕ್ಕಯ್ಯ ಎನ್ನುತ್ತಿದ್ದ, ಆಳುಕಾಳುಗಳಲ್ಲಿ ಗೌರವದಿಂದ ಕೋಣೂರಮ್ಮ ಎನ್ನುತ್ತಿದ್ದರು. ಇವಳಿಗೆ ಮಗ ಚೆಲುವಯ್ಯ ಇವಳ ಕಷ್ಟ ಸಂಕಟಗಳನ್ನೆಲ್ಲಾ ನುಂಗಿ ನೊಣೆವ ಮೂರ್ತಿಯಾಗಿದ್ದನು. ದೇವಮ್ಮ ಮದುವೆಯಾದ ಹೊಸತರಲ್ಲಿ ದೇವಯ್ಯನನ್ನು ತುಂಬಾ ಪ್ರೀತಿಸುತ್ತಿದ್ದಳು ಅವನೂ ಅಷ್ಟೇ. ಆದರೆ ಪಾದ್ರಿಯ ಪ್ರಭಾವಕ್ಕೆ ತನ್ನ ಗಂಡ ಒಳಗಾದಂದಿನಿಂದ ಅವಳಿಗೆ ಗಂಡನಲ್ಲಿ ಮೊದಲಿದ್ದ ಹೊಂದಾಣಿಕೆಯಿರದೆ ವಾದಿಸುತ್ತಿದ್ದಳು. ಕಾರಣ ಅವಳಿಗೆ ಕ್ರಿಶ್ಚಿಯನ್ ಪಾದ್ರಿ ಕಂಡರೆ ಆಗುತ್ತಿರಲಿಲ್ಲ. ಆದರೂ ಇವಳು ಮೌನದಿಂದಲೇ ಗಂಡನನ್ನೆ ಗೆದ್ದಳು.

ನಾಗತ್ತೆ ಹೆಸರೇ ಹೇಳುವಂತೆ ಕೆಟ್ಟ ಅತ್ತೆಗಿರಬೇಕಾದ ಗುಣಲಕ್ಷಣವುಳ್ಳವಳು ಮೇಲ್ಜಾತಿಯವಳು. ಸೀರುಡಿಕೆ ನಾಗತ್ತೆ ಎಂದೇ ಪ್ರಸಿದ್ಧಿಯಾದವಳು. ಎರಡು ಮೂರು ಜನರನ್ನೆ ಸೀರುಡಿಕೆ ಮಾಡಿಕೊಂಡು ನುಂಗಿ ನೀರು ಕುಡಿದಿದ್ದಳು. ಮೊದಲು ಸಿಂಬಾವಿಗೌಡರ ಮನೆಯಲ್ಲಿದ್ದು ಅನಂತರ ಹೂವಳ್ಳಿ ವೆಂಕಟಣ್ಣನ ಮನೆಗೆ ಬಂದು ಮೋಸದಿಂದ ಸೊಸೆಯಾದ

ನಾಗಕ್ಕನನ್ನೆ ವೆಂಕಟಣ್ಣ ಸೇರುವ ಹಾಗೆ ಮಾಡುತ್ತಾಳೆ. ಅಲ್ಲದೆ ಸಾಬಿಯ ಜೊತೆ ಕೆಟ್ಟ ಸಂಬಂಧವಿಟ್ಟುಕೊಂಡಿರುತ್ತಾಳೆ. ಎಲ್ಲಾ ದುಷ್ಟ ಬುದ್ದಿಗಳು ಇವಳಲ್ಲೆ ಅಡಕವಾಗಿರುತ್ತವೆ. ಜೊತೆಗೆ ಇವಳು ಹೆಣ್ಣಿಗೆ ಹೆಣ್ಣೇ ಶತ್ರು ಎಂಬ ಗಾಥೆಗೆ ಅನ್ವರ್ಥ. ಒಳ್ಳೆಯ ನಾಗಕ್ಕನ ಬಾಳನ್ನೆ ಹಾಳುಗೆಡವಿದವಳು. ಕುತಂತ್ರದ ಹೆಣ್ಣು.

ಆಕ್ಕಣಿ ಕೆಳಜಾತಿಯ ಸ್ತ್ರಿ ಮೊದಮೊದಲು ರೋಗಗ್ರಸ್ತ ಗಂಡನ ಸೇವೆ ಮಾಡಿಕೊಂಡು ಇದ್ದು ಒಳ್ಳೆಯವಳಾಗಿರುತ್ತಾಳೆ. ಆದರೆ ಚೀಂಕ್ರ ಎಂಬ ಸೇರೆಗಾರನಿಂದ ಮೋಸ ಹೋಗುತ್ತಾಳೆ. ಆದರೂ ಸಹ ಅವನ ಮಕ್ಕಳನ್ನೆ ಪ್ರೀತಿಯಿಂದ ನೋಡಿದರೂ, ತನ್ನ ಗಂಡನ ಸಾವಿಗೆ ಚೀಂಕ್ರನೆ ಕಾರಣನೆಂದು ದೂರಿ ಗೌಡರ ಮನೆ ಸೇರುತ್ತಾಳೆ, ಅಲ್ಲಿಯೂ ಗೌಡನ ಬಲೆಗೆ ಬೀಳುತ್ತಾಳೆ ಒಂದು ರೀತಿ ದುರಂತ ಬದುಕು ಇವಳದು.

ಮೇಲ್ವರ್ಗದ ಮಂಜಮ್ಮ ಮತ್ತು ರಂಗಮ್ಮನ ಪಾತ್ರ ಕಾದಂಬರಿಯಲ್ಲಿ ಅಲ್ಲಲ್ಲಿ ಕಂಡು ಬಂದರೂ ಕೂಡ ಉತ್ತಮವಾಗಿ ಮೂಡಿ ಬಂದಿದೆ. ಮಂಜಮ್ಮ ಸುಬ್ಬಣ್ಣ ಹೆಗ್ಗಡೆಯವರ ಮಗಳು ಅತ್ತಿಗೆಯನ್ನು ಪ್ರೀತಿಯಿಂದಲೇ ನೋಡುತ್ತಿರುತ್ತಾಳೆ. ಒಳ್ಳೆಯ ಸ್ವಭಾವ, ಇವಳು ಸಿಂಭಾವಿ ಗೌಡನಿಗೆ ಎರಡನೆ ಹೆಂಡತಿಯಾಗುತ್ತಾಳೆ.

ರಂಗಮ್ಮ ಮುಕುಂದಯ್ಯನ ಹಿರಿಯಕ್ಕ. ಒಳ್ಳೆಯವಳಾದರೂ ಕಿರಿಯವಯಸ್ಸಿಗೆ ಗಂಡನಿಂದ ದೂರವಾಗಿ ಮಾನಸಿಕ ಸ್ಥಿಮಿತ ಕಳೆದುಕೊಂಡಿರುತ್ತಾಳೆ. ಅದೇ ರೀತಿ ಸ್ವಲ್ಪ ದಿನ ಆರೋಗ್ಯವಾಗಿದ್ದರೆ ಕೆಲವು ದಿನ ಅನಾರೋಗ್ಯ ಗಂಡನನ್ನು ಅತಿಯಾಗಿ ಪ್ರೀತಿಸುತ್ತಿದ್ದು ಅವನು ಕಣ್ಮರೆಯಾದರೂ ಮುತ್ತೈದೆ ರೀತಿಯಲ್ಲಿಯೇ ಇದ್ದು ಎಲ್ಲರೂ ಆಡಿಕೊಳ್ಳಲು ಕಾರಣಳಾಗುತ್ತಾಳೆ. ತನ್ನ ತಂಗಿಯ ಮಗ ಚೆಲುವಯ್ಯನನ್ನೇ ತನ್ನ ಗಂಡನೆಂದು ಭಾವಿಸಿರುತ್ತಾಳೆ. ತನ್ನ ಗಂಡನನ್ನೆ ಕಣ್ಮುಂದೆಯೇ ನೋಡಿ ಪ್ರಾಣ ಬಿಡುತ್ತಾಳೆ.

ಹೀಗೆ ಈ ಕೃತಿಯಲ್ಲಿ ಹಲವಾರು ಸ್ತ್ರೀ ಪಾತ್ರಗಳು ಕಂಡು ಬಂದು ಅವುಗಳು ನಿಸರ್ಗ ಸಹಜ ಗುಣಗಳಿಂದ ಕೂಡಿವೆ.

ಅಧ್ಯಾಯ – ೫

ಎರಡೂ ಕಾದಂಬರಿಗಳ ಸ್ತ್ರೀ ಪಾತ್ರ ಚಿತ್ರಣ

ಕುವೆಂಪು ಅವರ ಕಾದಂಬರಿಗಳಲ್ಲಿ ಅಸಂಖ್ಯಾತ ಪಾತ್ರಗಳು. ಎಲ್ಲಾ ಪಾತ್ರಗಳು ಅವುಗಳದ್ದೆ ಆದ ವೈಶಿಷ್ಟ್ಯವನ್ನು ಹೊಂದಿವೆ. ಪುರುಷ ಪಾತ್ರಗಳಿಗೆ ಹೆಗಲೆಣೆಯಾಗಿ ಸ್ತ್ರೀ ಪಾತ್ರಗಳು ಕಾಣಿಸಿ ಕೊಂಡಿವೆ. ಕಾನೂರು ಹೆಗ್ಗಡತಿಯಲ್ಲಿ ಹೆಚ್ಚು ಸುಸಂಸ್ಕೃತ ಪಾತ್ರಗಳು ಕಂಡು ಬಂದರೆ, ಮದುಮಗಳಿನಲ್ಲಿ ನಿಸರ್ಗಸಹಜವಾದ ಪಾತ್ರಗಳಿವೆ. ಈ ಕೃತಿಗಳು ಗಾತ್ರದ ದೃಷ್ಟಿಯಿಂದಷ್ಟೇ ಅಲ್ಲದೆ ಸತ್ವದ ದೃಷ್ಟಿಯಿಂದಲೂ ಮಹತ್ವವಾದವು ಅಲ್ಲದೆ ಇವು ಸಾಮಾಜಿಕ ಹಾಗೂ ಪ್ರಾದೇಶಿಕ ಕಾದಂಬರಿಗಳಾದ್ದರಿಂದ ಮೂವತ್ತು ವರ್ಷಗಳ ಹಿಂದಿನ ಮಲೆನಾಡಿನ ಜೀವನವೇ ಇವುಗಳಲ್ಲಿ ಪ್ರತಿಬಿಂಬಿತವಾಗಿದ್ದರೂ ಕಾಲ ದೇಶಗಳನ್ನೇ ಮೀರಿ ನಿಲ್ಲುವಂತಹದು. ಅದರಂತೆಯೇ ಇಲ್ಲಿ ಪುರುಷನಷ್ಟೆ ಸಮಾನವಾಗಿ ಮೂಡಿ ಬಂದಿರುವ ಸ್ತ್ರೀ ಪಾತ್ರಗಳು .ಅವರ ಸ್ಥಾನಮಾನಗಳು, ಕಾದಂಬರಿಯ ಬೆಳವಣಿಗೆಗೆ ಎಂತೋ ಅಂತೆಯೇ ಅಂದಿನ ಆ ನಾಡಿನ ಪರಿಸ್ಥಿತಿಗೂ ಕಾರಣವಾಗಿವೆ. [೧]"ಅನೇಕ ಕುಟುಂಬಗಳನ್ನೊಳಗೊಂಡ ಕಾದಂಬರಿಗಳಲ್ಲಿ 'ಸ್ತ್ರೀ' ತಾಯಾಗಿ, ಹೆಂಡತಿಯಾಗಿ, ತಂಗಿಯಾಗಿ, ಅಕ್ಕನಾಗಿ, ಅತ್ತೆಯಾಗಿ ಮೆರೆದು ಇಂದಿನ ಸಮಾಜದಲ್ಲಿ ದೊರೆಯುತ್ತಿರುವ ಸ್ತ್ರೀ ಸ್ವಾತಂತ್ರ್ಯದ ಕಡೆಗೆ ದೃಷ್ಟಿಯನ್ನು ಹಾಯಿಸದಷ್ಟು ಮುಗ್ಧರಾಗಿ ಬಾಳನ್ನು ಬಾಳಿದ್ದಾರೆ" [೧]– ಎಚ್.ಬಿ.ಯಶೋಧರಾ.

ಕಾನೂರು ಹೆಗ್ಗಡತಿಯಲ್ಲಿ ಅನೇಕ ಗೌಡ ಕುಟುಂಬಗಳಲ್ಲಿ ಕಾಣುವ ಸ್ತ್ರೀಯರು ಎರಡು ಗುಂಪುಗಳಾಗಿ ಕಂಡು ಬರುತ್ತಾರೆ. ಸುಸಂಸ್ಕೃತರು ಮತ್ತು ಕುಸಂಸ್ಕೃತರು ಎಂದು. ಮಲೆಗಳಲ್ಲಿ ಮದುಮಗಳು ಕಾದಂಬರಿಯ ಪ್ರಾರಂಭದಲ್ಲಿಯೇ ಹೇಳಿರುವ ಹಾಗೆ ಇಲ್ಲಿ ಯಾರು ಮುಖ್ಯರಲ್ಲ, ಯಾರು ಅಮುಖ್ಯರಲ್ಲ, ಎಂಬಂತೆ ಇಲ್ಲಿ ಬರುವ ಪಾತ್ರಗಳು ಕೂಡ ಗುಣದಲ್ಲಿ ವ್ಯತ್ಯಾಸವಿದ್ದರೂ ಕೂಡ ಎಲ್ಲರೂ ಸಮಾನರೆ. ಇಲ್ಲಿನ ಪಾತ್ರಗಳನ್ನು ಮೇಲುಜಾತಿಯ ಗ್ರಾಮೀಣ ಪಾತ್ರಗಳು, ಕೆಳಜಾತಿಯ ಕುಸಂಸ್ಕೃತಿಯ ಪಾತ್ರಗಳು ಎಂದು ವಿಭಾಗಿಸಬಹುದು. ಹಾಗೆ ನೋಡಿದರೆ 'ಹೆಗ್ಗಡತಿ' ಗಿಂತ 'ಮದುಮಗಳು'ವಿನಲ್ಲಿ ಸ್ತ್ರೀ ಪಾತ್ರಗಳ ಸಂಖ್ಯೆ ಹೆಚ್ಚು. ಈ ಪಾತ್ರಗಳು ಒಂದಕ್ಕೊಂದು ಪೂರಕವಾಗಿ ಮೂಡಿಬಂದಿವೆ. ಆದರೆ ಹೆಗ್ಗಡತಿಯಲ್ಲಿ ಬರುವ ಸ್ತ್ರೀ ಪಾತ್ರಗಳು ಭಾವನಾ ಜೀವಿಗಳು ಮತ್ತು ಒಂದರ ಗುಣಕ್ಕೂ ಮತ್ತೊಂದರ ಗುಣಕ್ಕೂ ಸಂಬಂಧವಿಲ್ಲ.

೧. ಕುವೆಂಪು ಕಾದಂಬರಿಗಳು. ಸಂ.ಗುರುಪಾದ ಮರಿಗುದ್ದಿ – ಪುಟ ೬೨

ಕಾಲದ ದೃಷ್ಟಿಯಿಂದ ನೋಡುವುದಾದರೆ ಹೆಗ್ಗಡತಿಯು ಮದುಮಗಳು ಕೃತಿಗಿಂತ ಮೂವತ್ತೊಂದು ವರ್ಷ ಹಳೆಯದು. ಹೆಗ್ಗಡತಿಯ ಪರಿಸರಕ್ಕನುಗುಣವಾಗಿ ಅಲ್ಲಿನ ಪಾತ್ರಗಳು ಆದರ್ಶಮಯವಾಗಿದ್ದರೆ ಮದುಮಗಳಿನಲ್ಲಿ ಸ್ವತಂತ್ರವಾದ ಸ್ವಚ್ಛಂದವಾದ ಮಣ್ಣಿನ ಗುಣಕ್ಕೆ ತೀರಾ ಹತ್ತಿರವಾದ ಪಾತ್ರಗಳಾಗಿವೆ.

ಹೆಗ್ಗಡತಿಯ ಸೀತೆ ಮತ್ತು ಮದುಮಗಳಲ್ಲಿನ ಚಿನ್ನಮ್ಮನ ಪಾತ್ರವನ್ನು ತೌಲನಿಕವಾಗಿ ನೋಡಿದಾಗ ಸೀತೆ ತುಂಬಾ ಭಾವ ಜೀವಿ, ಮೃದು ಮತ್ತು ಸುಶಿಕ್ಷಿತೆ ಆದರೆ ಚಿನ್ನಮ್ಮ ಛಲವಂತೆ, ವಾಸ್ತವವಾದಿ ಅಶಿಕ್ಷಿತೆ. ಈ ಇಬ್ಬರೂ ಇಷ್ಟವಿಲ್ಲದ ಮದುವೆ ಮಾಡಿಕೊಳ್ಳಲು ಹೊರಟವರು ಸೀತೆ ಎದುರಿಸಲು ಸಾಧ್ಯವಿಲ್ಲದೆ ಒದ್ದಾಡುತ್ತಾಳೆ. ಆದರೆ ಚಿನ್ನಮ್ಮ ಗಟ್ಟಿಮನಸ್ಸಿನಿಂದ ಎದುರಿಸುತ್ತಾಳೆ. ಇದಕ್ಕೆ ಕಾರಣ ಇವರು ಬೆಳೆದ ಪರಿಸರ ಸೀತೆ ತಾಯಿಯ ಆರೈಕೆಯಲ್ಲಿ ಬೆಳೆದಿದ್ದರೆ, ಚಿನ್ನಮ್ಮ ಅಜ್ಜಿಯ ಆರೈಕೆಯಲ್ಲಿ ಒರಟು ಒರಟಾಗಿ ಬೆಳೆದಿರುತ್ತಾಳೆ. ಹೆಗ್ಗಡತಿಯ ಸೀತೆ ಮೌನವಾಗಿ ಎಲ್ಲವನ್ನು ಸಹಿಸಿಕೊಳ್ಳುತ್ತಾಳೆ. ಕೃಷ್ಣಪ್ಪನ ಜೊತೆ ವಿವಾಹ ಏರ್ಪಟ್ಟಾಗ ಅದನ್ನು ಬೇಡ ಎಂದು ಧೈರ್ಯವಾಗಿ ನೇರವಾಗಿ ಹೇಳಲು ಆಗುವುದಿಲ್ಲ. ಅವಳ ಸುಪ್ತ ಮನಸ್ಸಿನ ಭಾವನೆಗಳು ಕನಸಿನ ರೂಪದಲ್ಲಿ ಹೊರಬರುತ್ತವೆ. ಆದರೆ ಚಿನ್ನಮ್ಮ ಚಿಕ್ಕಂದಿನಿಂದಲೂ ಮುಕುಂದಯ್ಯನನ್ನು ಇಷ್ಟಪಡುತ್ತಿದ್ದವಳು, ದೊಡ್ಡವಳಾದ ಮೇಲೆ ಅವನಿಗಾಗಿ ಏನನ್ನೂ ಮಾಡಲು ಸಿಧ್ಧಳಾಗುತ್ತಾಳೆ. ಪೀಂಚಲುವಿನ ಬಳಿ ಎಲ್ಲವನ್ನು ಹೇಳಿಕೊಳ್ಳುತ್ತಾಳೆ. ಸೀತೆ ತನ್ನ ಮನದ ಅಭಿಲಾಷೆಯನ್ನು ಯಾರ ಬಳಿಯೂ ವ್ಯಕ್ತಪಡಿಸದೆ ಮೌನ ಯುಧ್ಧಕ್ಕೆ ತೊಡಗುತ್ತಾಳೆ. ಸ್ವತಃ ತಾನು ಪ್ರೀತಿಸಿದ, ಆರಾಧಿಸಿದ ಹೂವಯ್ಯನ ಬಳಿಯೂ ಹೇಳಲಾರದಷ್ಟು ಮುಗ್ಧೆ ಈಕೆ. ಆದ್ದರಿಂದ ಸೀತೆಗೆ ಬೇರೆಯವರ ಜೊತೆ ಮದುವೆ ಪ್ರಸ್ತಾಪವಾಗುವಾಗ ಆಗುವುದು ಕೇವಲ ಮೌನ ಪ್ರತಿಭಟನೆ.

ಸೀತೆ ಮತ್ತು ಚಿನ್ನಮ್ಮರ ಮದುವೆಯ ವಿಚಾರಗಳಲ್ಲಿ ಕೆಲವೊಂದು ಸಾಧೃಶ್ಯವನ್ನು ಕಾಣಬಹುದು ಚಿನ್ನಮ್ಮನನ್ನು ಸಿಂಬಾವಿ ಭರಮೈ ಹೆಗ್ಗಡೆಯವರಿಗೆ ಕೊಟ್ಟು ಮದುವೆ ತೀರ್ಮಾನವಾಗಿ, ದಿಬ್ಬಣ ಬರುವಾಗ ಮದುವಣಿಗನಿಗೆ ಸೊಂಟ ಉಳುಕಿ ದಿಬ್ಬಣ ಬರುವುದೇ ಅಸಂಭವ ಎಂದು ತಿಳಿದಾಗ – ಚಿನ್ನಮ್ಮ "ಬರದೇ ಇದ್ದರೆ ಅಷ್ಟೆ ಹೊಯ್ತು ಹಾಳಾಗಲಿ ಬಿಡು! ಋಣ ಕಡೀತು" ಎಂದು ಹೇಳುತ್ತಾಳೆ. ಹೆಗ್ಗಡತಿಯ ಸೀತೆ ತನ್ನ ಜೊತೆ ಮದುವೆಯಾಗಬೇಕಾದ ಕೃಷ್ಣಪ್ಪನನ್ನು ಹುಲಿ ಹಿಡೀಲಿ ಎಂದು ಮನಸ್ಸಿನಲ್ಲಿಯೇ ಅಂದುಕೊಂಡಿರುತ್ತಾಳೆ. ಅದೇ ರೀತಿ ಅವನನ್ನು ಹುಲಿ ಹಿಡಿದು ಕೊಂಡಾಗ ಒಳಗೊಳಗೆ

ಸಂತೋಷ ಪಡುತ್ತಾಳೆ. ಅಲ್ಲಿಯವರೆಗೂ ಅನಾರೋಗ್ಯದಿಂದಿದ್ದ'ವಳು ಇದ್ದಕ್ಕಿದ್ದ ಹಾಗೆಯೇ ಗುಣವಾಗುತ್ತಾಳೆ. ಇಲ್ಲಿ ಸೀತೆಯ ಸಮಾಧಾನಕ್ಕಿಂತ ಚಿನ್ನಮ್ಮನ ಸಂತೋಷ ಮುಖ್ಯವಾದುದು. ಸೀತೆಗಿಲ್ಲದ ಧೈರ್ಯ ಚಿನ್ನಮ್ಮನಿಗಿತ್ತು. ಆದ್ದರಿಂದಲೇ ಆಕೆ ಮುಕುಂದಯ್ಯನ ಜೊತೆ ಓಡಿ ಹೋದದ್ದು. ಚಿನ್ನಮ್ಮ ಬಯಸಿದ್ದನ್ನು ಪಡೆಯ ಬೇಕೆನ್ನುವ ಛಲವಂತೆ, ಮದುವೆಯ ದಿನ ಅದೂ ಧಾರೆ ಎರೆಯಲು ಕೆಲವೇ ಸಮಯವಿದೆ ಎನ್ನುವಾಗ ಧೈರ್ಯಮಾಡಿ ಮನೆಯಿಂದ ಹೊರಡುತ್ತಾಳೆ ಮಕುಂದಯ್ಯನ ವಿನಃ ಅವಳಿಗೆ ಯಾವುದೂ ಮುಖ್ಯವಲ್ಲ. ಮನೆತನದ ಗೌರವ, ಪ್ರತಿಷ್ಠೆ ಏನನ್ನು ಲೆಕ್ಕಿಸುವುದಿಲ್ಲ. ಆದರೆ, ಸೀತೆ, ಕೀಲಿಕೊಟ್ಟ ಗೊಂಬೆಯ ಹಾಗೆ, ನಿಲ್ಲಲು ಕೂರಲೂ ಆಗದ ಪರಿಸ್ಥಿತಿಯಲ್ಲಿ ಹಸೆಮಣೆ ಏರುತ್ತಾಳೆ. ಒಳಗೊಳಗೆ ದುಃಖವನ್ನನುಭವಿಸುತ್ತಾ ಪುರೊಹಿತನ ಕುತಂತ್ರಕ್ಕೆ ಬಲಿಯಾಗಿ ರಾಮಯ್ಯನ ಹೆಂಡತಿಯಾಗುತ್ತಾಳೆ. ಅದೂ ಪೂಜಾರಿಯೇ ತಾಳಿ ಕಟ್ಟುವುದೂ ಕೂಡ ಅಂದರೆ ತೀರಾ ಅಸಹಾಯಕ ಪರಿಸ್ಥಿತಿಯಲ್ಲಿ, ತನ್ನ ಮನಸ್ಸಿಗೆ ವಿರುದ್ಧವಾದದ್ದು ನಡೆಯುತ್ತಿದ್ದರೂ, ಸಹಿಸಿಕೊಳ್ಳುತ್ತಾ ಮನೋರೋಗಿಯಾಗುತ್ತಾಳೆ. ಮದುಮಗಳಿನ ಚಿನ್ನಮ್ಮನಿಗೆ ತನ್ನ ಭವಿಷ್ಯದ ಮುಂದೆ ಬೇರೆ ಯಾವ ಮನೆತನವೂ ಕಾಣುವುದಿಲ್ಲ. ಆದರೆ ಸೀತೆ ತನ್ನ ಕುಟುಂಬದ ಗೌರವವೂ ಮುಖ್ಯವಾಗುತ್ತದೆ.

ಹೆಗ್ಗಡತಿ ಮತ್ತು ಮದುಮಗಳು ಕೃತಿಗೂ ಇದ್ದ ಕಾಲದ ಅಂತರ ಅಂದಿನ ಬದಲಾಗುತ್ತಿದ್ದ ಸಾಮಾಜಿಕ ಧೋರಣೆಗಳೂ, ಸ್ತ್ರೀಯ ಸ್ಥಾನ-ಮಾನವನ್ನು ಪರಿವರ್ತಿಸುತ್ತಿದ್ದವು. ಹೆಣ್ಣು ತಾನು ಇಚ್ಛಿಸಿದವನೊಡನೆ ಹೇಗಾದರೂ ಸರಿ ಬಾಳುವೆ ಮಾಡುವಷ್ಟರ ಮಟ್ಟಿನ ಸ್ವಾತಂತ್ರವನ್ನು ಪಡೆದಿದ್ದಳು ಎನ್ನುವುದಕ್ಕಿಂತ ಹೆಚ್ಚಾಗಿ ಸಂಪಾದಿಸಿ ಕೊಂಡಿದ್ದಳೆಂಬುದರಲ್ಲಿಯೇ ಹೆಚ್ಚು ಔಚಿತ್ಯ ಕಂಡು ಬರುತ್ತದೆ. ಅದರಿಂದಾಗಿಯೇ ಮದುಮಗಳುವಿನಲ್ಲಿ ಯಾವ ನಾಗರೀಕತೆಯ ಸೋಂಕು ಇಲ್ಲದೆ ನಿಸರ್ಗ ಸಹಜವಾದ ಸ್ವಂತಿಕೆಗೆ ಹೆಚ್ಚು ಬೆಲೆಯಿರುವಂತೆ ತೋರುತ್ತದೆ. ಅಂದರೆ ಚಿನ್ನಮ್ಮನ ಪಾತ್ರವನ್ನೇ ನೋಡಿದಾಗ ಅವಳ ವ್ಯಕ್ತಿತ್ವ, ಸ್ವಭಾವ ತಾನು ಬಯಸಿದ್ದನ್ನೆ ಪಡೆಯಬೇಕು ಎನ್ನುವುದಾಗಿತ್ತು. ಅದು ಒಳಿತಾಗಲಿ ಕೆಡುಕಾಗಲಿ ಅದರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ ಸೀತೆಯದು ತದ್ವಿರುದ್ಧ. ಸೀತೆ ಸಮಾಜಕ್ಕೆ ಹೆದರಿದವಳು. ಹೂವಯ್ಯನನ್ನೆ ಮದುವೆಯಾಗಬೇಕು ಎಂದು ಮನಸ್ಸಿನಲ್ಲಿದ್ದರೂ ಸ್ವತಂತ್ರ ವ್ಯಕ್ತಿತ್ವವಿಲ್ಲದ ಇವಳು ಮನೋರೋಗಿಯಾಗಿ ಸಮಾಜದ ಕಣ್ಣಿಗೆ ಕೃಷ್ಣಪ್ಪನ ಭೂತ ಮೆಟ್ಟಿದವಳಾಗಿ ಕಂಡು ಬರುತ್ತಾಳೆ. ಬಹುಶಃ ಸೀತೆ ಏನಾದರೂ ತಾನು ಪ್ರೀತಿಸುತ್ತಿರುವುದನ್ನು ನೇರವಾಗಿ ತಂದೆಯೊಡನೆ ಹೇಳಿದ್ದರೆ ಅವಳ ಬಾಳಿನಲ್ಲಿ ಹೆಚ್ಚಿನ ಅನಾಹುತಗಳು ನಡೆಯುತ್ತಲೇ ಇರಲಿಲ್ಲ. ಆದರೆ ಅವಳು ಹಾಗೆ ಹೇಳಲಾಗದಿರುವುದಕ್ಕೆ ಕಾರಣ ಸಂಪ್ರದಾಯಬದ್ಧ ವ್ಯವಸ್ಥೆ.

ಚಿನ್ನಮ್ಮನ ಸ್ವಭಾವ ಅವಳು ಬೆಳೆದ ಪರಿಸರಕ್ಕನುಗುಣವಾಗಿ ವ್ಯಕ್ತವಾಗಿರುವುದರಿಂದಲೇ ಆಕೆ ಧಾರಾಮೂಹೂರ್ತಕ್ಕೆ ಕೆಲವೇ ಗಂಟೆಗಳಿವೆ ಎನ್ನುವಾಗಲೇ ಆ ಸರಿರಾತ್ರಿಯಲ್ಲೇ ಕಾಡಿನಲ್ಲಿ ಹೋಗುತ್ತಾಳೆ ಮುಕುಂದಯ್ಯನನ್ನು ಸೇರಲು. ತಂದೆಗೆ ಹೆದರುತ್ತಿದ್ದರೂ ಅವನನ್ನು ಲೆಕ್ಕಿಸುವುದಿಲ್ಲ. ಕಾದಂಬರಿಯ ಶೀರ್ಷಿಕೆಯ ಅನ್ವರ್ಥವಾಗಿಯೇ ಇವಳ ಪಾತ್ರ ಮೂಡಿಬಂದಿದೆ. ತಂದೆ ಸತ್ತ ನಂತರವೂ ತೀರಾ ಸಂಕಷ್ಟಕ್ಕೆ ಒಳಗಾಗದೆ. ನಾಗಕ್ಕನ ಜೊತೆ ಸೇರಿ, ಮುಕುಂದಯ್ಯನೊಡಗೂಡಿ ಮನೆ, ಗದ್ದೆ ಎನ್ನದೆ ದುಡಿಯುತ್ತಾಳೆ. ವಿವಾಹಕ್ಕೂ ಮುಂಚೆಯೇ ತನ್ನ ಬದುಕನ್ನು ಮುಕುಂದಯ್ಯನೊಡನೆ ಹಂಚಿಕೊಳ್ಳುತ್ತಾಳೆ ಇದರಲ್ಲಿ ಅವಳಿಗೆ ಯಾವ ತಪ್ಪೂ ಕಂಡು ಬರುವುದಿಲ್ಲ.

ಸೀತೆ ಹೂವಯ್ಯನನ್ನು ಮದುವೆಯಾಗದಿದ್ದರೂ, ಕೃಷ್ಣಪ್ಪನ ಜೊತೆ ಮದುವೆ ಏರ್ಪಟ್ಟಾಗಲೂ ಅದು ಮುರಿದು ಬೀಳಲಿ ಎನ್ನುತ್ತಾಳೆ ಅವನು ಸತ್ತಾಗ ಒಳ್ಳೆಯದಾಯಿತು ಎನ್ನುತ್ತಾಳೆ. ಆದರೆ ರಾಮಯ್ಯನ ಜೊತೆ ವಿವಾಹ ಏರ್ಪಟ್ಟಾಗ ಹೂವಯ್ಯನ ಬಗ್ಗೆಯೇ ಹೆಚ್ಚು ಯೋಚಿಸಲಾರಂಬಿಸುತ್ತಾಳೆ. ಇದು ಎಂತಹ ವಿಕೋಪಕ್ಕೆ ತಿರುಗುತ್ತದೆಂದರೆ, ಚಂದ್ರಯ್ಯಗೌಡರು ತಮ್ಮ ಸೊಸೆಗೆ ಭೂತವಿಡಿದಿದೆ ಎಂದು ಕಬ್ಬಿಣಕಾಯಿಸಿ ಬರೆ ಹಾಕಿದಾಗ ಅಲ್ಲಿಯವರೆಗೂ ಸುಪ್ತವಾಗಿದ್ದ ಅವಳ ನಿಜವಾದ ಪ್ರತಿಭಟನೆ ವ್ಯಕ್ತವಾಗುವುದು. ಆ ರಾತ್ರಿಯೇ ಪುಟ್ಟನ ಸಹಾಯದಿಂದ ಕೆಳಕಾನೂರಿನ ಹೂವಯ್ಯನ ಮನೆಗೆ ಓಡಿ ಬರುತ್ತಾಳೆ. ಮೌನ ಒಡೆದು ತನ್ನ ಪ್ರೀತಿಯನ್ನು ವ್ಯಕ್ತಪಡಿಸುತ್ತಾಳೆ ಆದರೆ ಕಾಲ ಮಿಂಚಿ ಹೋಗಿರುತ್ತದೆ. ಮುಂದೆ ಆಕೆ ಕಾನೂರಿಗೆ ಹೋಗುವುದೇ ಇಲ್ಲ. ಒಂಟಿಯಾದರೂ ನೆಮ್ಮದಿಯ ಬಾಳುಬಾಳುತ್ತಾಳೆ. ಹಳ್ಳಿಯ ಹುಡುಗಿ, ಸುಸಂಸ್ಕೃತ ತರಳೆಯಾಗಿ ಪರಿವರ್ತಿತಳಾದಳು ಹೂವಯ್ಯನ ಸಂಗದಿಂದ ಮಹದಾಕಾಂಕ್ಷೆಯ ಲೋಭವಿಲ್ಲದ ಅವಳ ಪ್ರೇಮದಲ್ಲಿ ಉತ್ಕಟತೆ ಸಮರ್ಪಣಭಾವಗಳೆರಡನ್ನೂ ಗುರ್ತಿಸಬಹುದು. ಮುಂದೆ ಹೂವಯ್ಯನಲ್ಲಿ ಸೇರುತ್ತಾಳೆ ಮಡದಿಯಾಗಿಯಲ್ಲ, ಸಖಿಯಾಗಿ, ಶಿಷ್ಯೆಯಾಗಿ ಅಷ್ಟರಮಟ್ಟಿಗೆ ಸಾರ್ಥಕವಾಗುತ್ತದೆ ಅವಳ ಬದುಕು. ಬಯಸಿದಂತೆಲ್ಲಾ ಸೀತೆಗೆ ದೊರೆಯದಿದ್ದರೂ ಬಯಸದ್ದು ಅವಳ ಜೀವನದಲ್ಲಾಗುತ್ತದೆ. ಲೇಖಕರು ಸೀತೆಯ ಪಾತ್ರ ಚಿತ್ರಣದಲ್ಲಿ ಉತ್ಪ್ರೇಕ್ಷೆ ತಂದಿದ್ದಾರೆ ಎಂಬ ಅಪವಾದವಿದ್ದರೂ ಈ ಉತ್ಪ್ರೇಕ್ಷೆ ಅನಿವಾರ್ಯ. ಏಕೆಂದರೆ, ಸಹನೆ, ತಾಳ್ಮೆಯ ಗುಣವುಳ್ಳ ಈಕೆ ಎಲ್ಲಾ ಸಂದರ್ಭದಲ್ಲಿಯೂ ಹಾಗೆ ನಡೆದುಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಕೊನೆಯವರೆಗೂ ಕಷ್ಟಪಡಬೇಕಾಗುತ್ತದೆ. ಕೊನೆಗೆ ಹೂವಯ್ಯನಷ್ಟೆ ಉನ್ನತ, ಆದರ್ಶ ವ್ಯಕ್ತಿತ್ವ ಇವಳದಾಗುತ್ತದೆ. ಕಾನೂರಿಗೆ

ಹೆಗ್ಗಡತಿಯಾಗದಿದ್ದರೂ ಹೂವಯ್ಯನ ಆಧ್ಯಾತ್ಮಿಕ ಸಂಗಾತಿಯಾಗುವಂತೆ, ಆಕೆಯ ಮತ್ತು ಹೂವಯ್ಯನ ಬಾಳು, ಒಡಲ ಸೋಂಕಿನ ಗೊಡವೆಯಿಲ್ಲದ ಪರಸ್ಪರ ಪ್ರೇಮದ ಎರಡು ಆತ್ಮಗಳ ಪ್ರೋಜ್ವಲ ಜೀವನವಾಗಿತ್ತು. ಸೀತೆಯದು ಸಂಸ್ಕೃತಿಯಿಂದ ಸುಸಂಸ್ಕೃತಿಗೇರಿದ ಪಾತ್ರ.

ಕೊನೆಯಲ್ಲಿ ತನ್ನ ಹಿಂದಿನ ತಲೆಮಾರನ್ನು ಮೀರಿ, ಬದಲಾಗುತ್ತಿರುವ ಮೌಲ್ಯಗಳ ಸಂಕೇತವಾಗಿದ್ದಾಳೆ ಸುಸಂಸ್ಕೃತ–ಸುಶಿಕ್ಷಿತೆ, ಶೃಂಗದ ತುತ್ತ ತುದಿಗೇರುತ್ತಾಳೆ.

ಸೀತೆಯ ಸ್ವಭಾವಕ್ಕೆ ವಿರುದ್ಧವಾದುದು ಚಿನ್ನಮ್ಮನ ಸ್ವಭಾವ ಕಾರಣ ತಾಯಿಯಿಲ್ಲದೆ ಬೆಳೆದವಳು ಚಿಕ್ಕಂದಿನಲ್ಲಿಯೇ ಕುಸಂಸ್ಕೃತಿಯಲ್ಲಿ ಬೆಳೆದವಳು, ಕುಸಂಸ್ಕೃತಿಯಿಂದ ಸಂಸ್ಕೃತಿಯೆಡೆಗೆ ಸಾಗುತ್ತಾಳೆ. ಇವಳ ಕುಸಂಸ್ಕೃತಿ ಯಾವತ್ತು ಇವಳಿಗೆ ಅಡ್ಡಬರುವುದೇ ಇಲ್ಲ. ಮುಕುಂದಯ್ಯ ಚಿನ್ನಮ್ಮನ ಆಸೆಯಂತೆ ಹೂವಳ್ಳಿಯಲ್ಲಿಯೇ ಉಳಿಯುತ್ತಾನೆ. ಮದುವೆಯ ಮೊದಲೆ ಕೈಗೊಳ್ಳುವ ನಿರ್ಣಯ ಸಾಮಾಜಿಕ ನೀತಿಗೆ ವಿರುದ್ಧವಾಗಿದ್ದರೂ ಮುಕುಂದಯ್ಯ ಅದನ್ನು ನಿರ್ಲಕ್ಷಿಸುತ್ತಾನೆ. ಚಿನ್ನಮ್ಮನ ಆಸೆಯಂತೆ ಹೂವಳ್ಳಿಯಲ್ಲಿಯೇ ಉಳಿಯುತ್ತಾನೆ. ಚಿನ್ನಮ್ಮ ಎಲ್ಲ ವಿಧದಲ್ಲಿಯೂ ಅವನ ಹೆಂಡತಿಯಾಗಿರುತ್ತಾಳೆ. ಲೈಂಗಿಕ ಸಂಬಂಧವನ್ನು ಸಹಜವೆನ್ನುವಂತೆಯೇ ಚಿನ್ನಮ್ಮ–ಮುಕುಂದಯ್ಯ ಒಪ್ಪಿಕೊಂಡಿರುತ್ತಾರೆ. ಪ್ರಕೃತಿ–ಸಂಸ್ಕೃತಿಗಳ ಬೆಸುಗೆಯಿಂದಾಗಿ.

ಹೆಗ್ಗಡತಿಯಲ್ಲಿ ಸೀತೆ ಆಧ್ಯಾತ್ಮಿಕ ಸಂಗಾತಿಯಾಗಿ ಹೂವಯ್ಯನನ್ನು ಸೇರಿದರೆ, ಚಿನ್ನಮ್ಮ ವಾಸ್ತವ ಜೀವನದಲ್ಲಿ ಮುಕುಂದಯ್ಯನನ್ನೇ ಸೇರುತ್ತಾಳೆ. ಸೀತೆಯ ಬಾಳಿನಲ್ಲಿ ಮೂವರು ವ್ಯಕ್ತಿಗಳು ಬಂದರೆ, ಚಿನ್ನಮ್ಮನ ಜೀವನದಲ್ಲಿ ಬರುವುದು ಒಬ್ಬನೆ. ಅವನೇ ಮುಕುಂದಯ್ಯ, ಸುಶಿಕ್ಷಿತೆಯಲ್ಲದಿದ್ದರೂ ನೆಮ್ಮದಿಯ ಬದುಕು ಇವಳದು. ಸೀತೆಯ ಪಾತ್ರದಲ್ಲಿ ಆದರ್ಶ, ಸಂಯಮ, ಸದ್ಗುಣಗಳನ್ನೆ ತಂದ ಲೇಖಕರು ಚಿನ್ನಮ್ಮನ ಪಾತ್ರದಲ್ಲಿ ವಾಸ್ತವ, ವರ್ತಮಾನದ ಆಯಾಮ ಮೀರಿದ ಭವಿಷ್ಯತ್ತಿನ ಕಾಣಿಕೆ ಮತ್ತು ವಿಶಿಷ್ಟವಾದ ಶಕ್ತಿಯನ್ನು ತಂದಿದ್ದಾರೆ.

ಹೆಗ್ಗಡತಿಯಲ್ಲಿ ಬರುವ ಸುಬ್ಬಮ್ಮನ ಪಾತ್ರವನ್ನು ನೋಡುವುದಾದರೆ, ದಾರಿದ್ರ್ಯದಲ್ಲಿ ಹುಟ್ಟಿ, ದಾರಿದ್ರ್ಯದಲ್ಲಿ ಬೆಳೆದು ಅಸಂಸ್ಕೃತರಿಂದ ಪೋಷಿತವಾದವಳು ಸುಬ್ಬಮ್ಮ. ಆದ್ದರಿಂದಲೇ ಚಂದ್ರಯ್ಯಗೌಡರಂತಹ ಶ್ರೀಮಂತ ಮನೆಗೆ ಸೊಸೆಯಾದರೂ ಅಸಂಸ್ಕೃತಳಾಗಿಯೇ ಇರುತ್ತಾಳೆ. ಮದುಮಗಳಿನ ನಾಗಕ್ಕ ಕೂಡ ಕುಸಂಸ್ಕೃತಿಯಿಂದ ಬಂದರೂ ಸುಸಂಸ್ಕೃತ ವ್ಯಕ್ತಿತ್ವವುಳ್ಳವಳು. ತನ್ನ ಅತ್ತೆಯ ಮೋಸದಿಂದ ತಂದೆಯ ವಯಸ್ಸಿನವನಿಗೆ

ಸೀರುಡಿಕೆಯಾಗುತ್ತಾಳೆ. ಬಡತನದ ಕಾರಣದಿಂದಾಗಿ ಸುಬ್ಬಮ್ಮ ವಯಸ್ಸಾದ ಚಂದ್ರಯ್ಯಗೌಡನಿಗೆ ಮೂರನೆಯ ಪತ್ನಿಯಾಗುತ್ತಾಳೆ. ಈ ಇಬ್ಬರ ಸ್ಥಿತಿಗೂ ಬಡತನವೇ ಕಾರಣವಾದರೂ ಪರಿಸ್ಥಿತಿಯೂ ಹಾಗೆಯೇ ಕೆಲಸ ಮಾಡುತ್ತದೆ.

ಮದುಮಗಳಿನ ನಾಗಕ್ಕ ಸ್ವತಂತ್ರ ತೀರ್ಮಾನ ಕೈಗೊಳ್ಳುವ ವ್ಯಕ್ತಿತ್ವ ಹೊಂದಿದ್ದರೂ ನಾಗತ್ತೆಯ ಕಪಿಮುಷ್ಟಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವುದೇ ಇಲ್ಲ. ಕೃತಿಯ ಆರಂಭದಲ್ಲಿಯೇ ಈಕೆ ವಿಧವೆ. ಇವಳ ಬದುಕು ಒಂದು ರೀತಿಯಲ್ಲಿ ನಾವಿಕನಿಲ್ಲದ ದೋಣಿಯಂತೆ, ಯೌವ್ವನವೇ ಇವಳಿಗೆ ಮುಳ್ಳಿನ ಹಾದಿಯಂತೆ ಎಲ್ಲೆ ಹೋದರು ಇದರಿಂದಲೇ ಪುರುಷರ ಕ್ರೂರ ದೃಷ್ಟಿಗೆ ಬೀಳುತ್ತಾಳೆ. ಸಿಂಬಾವಿ ಹೆಗಡೆಗೆ ಎರಡನೆಯ ಹೆಂಡತಿಯಾಗಿ ಇವಳನ್ನು ಸೀರುಡಿಕೆ ಮಾಡಬೇಕೆಂದು ಇವಳತ್ತೆಗೆ ಆಸೆಯಿರುತ್ತದೆ, ಆದರೆ ಆ ಮೋಸ ತಂತ್ರದಿಂದ ಹೇಗೊ ಪಾರಾಗುತ್ತಾಳೆ. ತಾನು ಶೀಲವಂತೆಯಾಗಿ ಬಾಳಬೇಕೆಂದರೂ ಸಮಾಜದ ಹದ್ದಿನ ಕಣ್ಣಿನಿಂದ ತಪ್ಪಿಸಿಕೊಳ್ಳಲಾಗುವುದೇ ಇಲ್ಲ ವೆಂಕಟಣ್ಣನಿಂದ ಅತ್ಯಾಚಾರಕ್ಕೊಳಗಾಗುತ್ತಾಳೆ.

ಕಾನೂರಿನ ಸುಬ್ಬಮ್ಮನಂತೂ ಮನೆಯಲ್ಲಿ ಎಲ್ಲರೊಡನೆಯೂ ಅಸಂಸ್ಕೃತಿಯಿಂದಲೇ ನಡೆದುಕೊಂಡು ಹೆಗ್ಗಡತಿತನದ ಅಧಿಕಾರವನ್ನು ಚಲಾಯಿಸುತ್ತಾಳೆ. ಆದರೆ ಹೂವಯ್ಯನನ್ನು ನೋಡಿದಂದಿನಿಂದ ಬದಲಾಗಿ ಎಲ್ಲರ ಮೇಲೆ ಪ್ರೀತಿ ತೋರಿ ನಡೆದುಕೊಳ್ಳುತ್ತಾ ಗಂಡನಿಂದ ಅನುಮಾನಕ್ಕೂ, ಅವಮಾನಕ್ಕೂ ಒಳಗಾಗುತ್ತಾಳೆ. ಅವಳದು ಮಡ್ಡ ಪ್ರಕೃತಿ, ಅಸಂಸ್ಕೃತೆಯಾದರೂ ಹಳ್ಳಿಗರಿಗೆ ಸಹಜವಾದ ಮುಗ್ಧತೆ ಪರಿಶುದ್ಧತೆ ಇವೆ. ತನ್ನ ತಪ್ಪಿಲ್ಲದಿದ್ದರೂ ಗಂಡನಿಂದ ಅತಿಯಾದ ಶಿಕ್ಷೆಗೆ, ಹಿಂಸೆಗೆ ಒಳಪಡುತ್ತಾಳೆ. ಸೇರೆಗಾರರ ಶ್ವಾನ ಬುದ್ಧಿಗೊತ್ತಿದ್ದರಿಂದ ಅವನಿಂದ ಆದಷ್ಟು ದೂರವಿರುತ್ತಾಳೆ. ಆದರೆ ಗಂಡನಿರುವವರೆಗೂ ಮರ್ಯಾದೆಯಾಗಿಯೂ ಇದ್ದು ಅವನು ಸತ್ತ ನಂತರ ದರ್ಪ, ಅಹಂಕಾರ, ಛಲ, ಸ್ವಾರ್ಥಪರತೆ, ದುರಭಿಮಾನ ಈ ಎಲ್ಲವೂ ಹೆಡೆಯೆತ್ತಿ ನಿಂತು ಹೆಗ್ಗಡತಿ ಅಧಿಕಾರವನ್ನು ಚಲಾಯಿಸುವಂತೆ ಮಾಡುತ್ತದೆ. ಯಾರ ಮಾತನ್ನು ಕೇಳದೆ ಯೌವ್ವನದ ಮದದಿಂದಲೇ ಕಾಲು ಜಾರಿ ಅಸಹ್ಯವಾದ ಸಾವನ್ನು ಹೊಂದುತ್ತಾಳೆ.

ಮದುಮಗಳಿನ ನಾಗಕ್ಕ ಸುಬ್ಬಮ್ಮನಂತಹ ದರ್ಪಿಷ್ಟ ಹೆಣ್ಣಲ್ಲವಾದ್ದರಿಂದ ಮೋಸಕ್ಕೆ ಬಲಿಯಾಗಿ ವಯಸ್ಸಾದವನೊಂದಿಗೆ ಸೀರುಡಿಕೆ ಮಾಡಿಕೊಂಡು ಅವನ ಮಗಳಿಗೆ ತಾಯಿಯಾಗಿ, ಸ್ನೇಹಿತೆಯಾಗಿ ಬದುಕುತ್ತಾಳೆ. ಆದರೂ ಕೂಡ ಹೆಣ್ಣು-ಗಂಡು ಇಬ್ಬರಿಂದಲೂ

ಏಕಕಾಲದಲ್ಲಿಯೇ ಶೋಷಣೆಗೊಳಗಾದ ಪಾತ್ರ. ಸುಬ್ಬಮ್ಮ ಹೇಗೆ ಹೆಗ್ಗಡತಿಯಾದರೂ ವಯೋಸಹಜ ಗುಣದಿಂದ ಸ್ತ್ರೀ-ಪುರುಷರಿಬ್ಬರಿಂದಲೂ ಶೋಷಣೆಯಾಗುವಳೊ ಅಂತೆಯೇ, ವ್ಯತ್ಯಾಸವೆಂದರೆ ನಾಗಕ್ಕ ತನಗರಿವಿಲ್ಲದ ಮುಗ್ಧತೆಯಿಂದ ಬಲಿಯಾಗುತ್ತಾಳೆ. ಆದರೆ ಸುಬ್ಬಮ್ಮ ಬುದ್ಧಿಗೇಡಿಯಾಗಿ ಅಹಂಕಾರದಿಂದ ಅಧಃಪತನಕ್ಕಿಳಿಯುತ್ತಾಳೆ. ಈ ಎರಡೂ ಪಾತ್ರಗಳಲ್ಲಿ ಮದುವೆಯ ವಿಚಾರದಲ್ಲಿ ಹೋಲಿಕೆ ಕಂಡುಬರುತ್ತದೆ. ನಾಗಕ್ಕ ವಿಧವೆ ಎಂಬುದೊಂದನ್ನು ಬಿಟ್ಟರೆ. ಸ್ವಭಾವಗಳಲ್ಲಂತೂ ಅಜಗಜಾಂತರವಾದ ವ್ಯತ್ಯಾಸ ಮೃದು ಸ್ವಭಾವದ ನಾಗಕ್ಕ ಪಾಲಿಗೆ ಬಂದದ್ದೇ ಪಂಚಾಮೃತ ಎಂದು ವೆಂಕಣ್ಣನ ಮೋಸಕ್ಕೊಳಗಾದರೂ ಅವನ ಮನೆಯಲ್ಲಿಯೇ ನೆಲೆಸಿ ಅವನ ಹೆಂಡತಿಯಾಗಿ ಸುಖ ಕಾಣುತ್ತಾಳೆ. ಅಲ್ಲಿಯೂ ಅವಳಿಗೆ ವಿಧಿ ಮೋಸ ಮಾಡುತ್ತದೆ. ಮೊದಲಿದ್ದ ಸ್ಥಿತಿಗೆ ಹಿಂತಿರುಗುತ್ತಾಳೆ. ಸುಬ್ಬಮ್ಮ ತನ್ನ ಕೈಯಿಂದಲೇ ತನ್ನ ಭವಿಷ್ಯವನ್ನು ಹಾಳು ಮಾಡಿಕೊಳ್ಳುವಳು.

ಲಿಂಗಾಧಾರಿತ ಶೋಷಣೆಯನ್ನು ಅತ್ಯಂತ ಸೂಕ್ಷ್ಮಾತಿಸೂಕ್ಷ್ಮ ವ್ಯಂಗ್ಯದ ಒಳಧನಿಯನ್ನಿಟ್ಟು ಪ್ರತಿಪಾದಿಸುವಲ್ಲಿ ಕಾದಂಬರಿಕಾರರು ಯಶಸ್ವಿಯಾಗಿದ್ದಾರೆ. ಜಾತಿಯ ದೃಷ್ಟಿಯಿಂದ ಸುಬ್ಬಮ್ಮ-ನಾಗಕ್ಕ ಅತಿ ಶೋಷಿತರ ನೆಲೆಯಲ್ಲಿ ಸೇರುತ್ತಾಳೆ. ಹೀಗೆ ಈ ಇಬ್ಬರ ಪಾತ್ರಗಳನ್ನು ತೌಲನಿಕವಾಗಿ ನೋಡಿದಾಗ ಹೋಲಿಕೆ ವ್ಯತ್ಯಾಸಗಳು ಕಂಡುಬರುತ್ತವೆ.

ಈ ಕಾದಂಬರಿಗಳಲ್ಲಿ ಬರುವ ಖಳ ಪಾತ್ರಗಳೆಂದರೆ ನಾಗತ್ತೆ ಮತ್ತು ಗಂಗೆ, ಮದುಮಗಳಿನಲ್ಲಿ ಬರುವ ನಾಗತ್ತೆ ಅತ್ಯಂತ ಕೆಟ್ಟ ನೀಚ ಪಾತ್ರ. ತನ್ನ ಸ್ವಾರ್ಥಸಾಧನೆಗೆ ಎಂತಹ ಕೀಳುಮಟ್ಟಕ್ಕೂ ಇಳಿಯುವಂತಹವಳು. ತಾನು ಕೆಡುವುದಲ್ಲದೆ ತನ್ನ ಸೊಸೆಯನ್ನೂ ನಾಶಮಾಡಲು ಸಂಚು ಹೂಡುತ್ತಾಳೆ. ಮೇಲುವರ್ಗಕ್ಕೆ ಸೇರಿದವಳಾದರೂ ತೀರಾ ಕುಸಂಸ್ಕೃತ ವ್ಯಕ್ತಿ, ಸ್ವತಃ ಸಾಂಸ್ಕೃತಿಕ ವ್ಯವಸ್ಥೆಯಿಂದ ಸ್ವತಃ ಶೋಷಿತಳಾಗಿದ್ದರೂ ಆ ವ್ಯವಸ್ಥೆಯ ಒಡೆಯರೊಂದಿಗೆ, ಅವರ ಶೋಚಕ ವಿಚಾರಧಾರೆಯೊಂದಿಗೆ ರಾಜಿಮಾಡಿಕೊಂಡು, ಆ ವ್ಯವಸ್ಥೆಯ ಎಲ್ಲಾ ಶೋಷಕ ಅಂಶಗಳನ್ನು ಅಂತಸ್ಥವಾಗಿಸಿಕೊಂಡು, ತನಗಿಂತ ದುರ್ಬಲ ಸ್ತ್ರೀಯರನ್ನು ಪುರುಷರಂತೆಯೇ ಶೋಷಿಸುವವರು ನಾಗತ್ತೆ ಮತ್ತು ಗಂಗೆ.

'ಹೆಣ್ಣಿಗೆ ಹೆಣ್ಣೇ ವೈರಿ' ಎಂಬಂತೆ ಚಂದ್ರಯ್ಯಗೌಡರು ತನಗೆ ಪ್ರೀತಿತೋರಿಸದೆ ಸುಬ್ಬಮ್ಮನನ್ನು ಇಷ್ಟಪಡುತ್ತಾ ತನ್ನನ್ನು ಮರೆಯುತ್ತಾರೆಂದು ತಿಳಿದುಕೊಂಡು ಸುಬ್ಬಮ್ಮನನ್ನು ದ್ವೇಷಿಸುತ್ತಾಳೆ. ಮುಂದೆ ಅವಳಿಗೆ ಸ್ನೇಹಿತೆಯಾಗುವ ನಾಟಕವಾಡಿದರೂ ಅವಳ ಅಧಃಪತನಕ್ಕೆ ಕಾರಣಳಾಗುತ್ತಾಳೆ. ಅದರಿಂದಲೇ ಮೊದಲು ಸ್ನೇಹಿತೆಯಾಗಿದ್ದ ಈಕೆ ನಂತರ ವೈರಿಯಾದ

ನಂತರ ಸುಬ್ಬಮ್ಮ ತಂದೆ ಮನೆಯಿಂದ ಗಂಡನ ಮನೆ ಬಂದಾಗ ಗಂಗೆಯನ್ನು ನೋಡಿದೊಡನೆಯೆ ಅವಳ ಎದೆಯಲ್ಲಿ ಮಾತ್ಸರ್ಯ ದ್ವೇಷಗಳ ಉರಿ ಹೊತ್ತಿತ್ತು. ಕನ್ನಡ ಜಿಲ್ಲೆಯ ಆ ಹೆಂಗಸು ಗಟ್ಟದ ಮೇಲಿನವಳಂತೆ ಉಡುಗೆ ತೊಡುಗೆಗಳನ್ನೆ ಉಟ್ಟು ತೊಟ್ಟು ಮನೆಗೆ ತಾನೆ ಹೆಗ್ಗಡತಿ ಎಂಬಂತೆ ಆಚರಿಸುತ್ತಿದ್ದುದನ್ನು ಕಂಡಾಗ, ತನ್ನ ಕಷ್ಟ ಸಂಕಟಗಳಿಗೆ ಈ ಹಾದರಗಿತ್ತಿಯೆ ಮೂಲ ಕಾರಣವೆಂದು ನಿರ್ಣಯಿಸಿದಳು. ಇಲ್ಲಿ ಕಂಡು ಬರುವ ಅಂಶವೆಂದರೆ ಒಂದು ಹೆಣ್ಣು ಹೇಗೆ ಮತ್ತೊಬ್ಬ ಹೆಣ್ಣನ್ನು ಶೋಷಿಸುತ್ತಾಳೆ ಎಂಬುದು. ಸುಬ್ಬಮ್ಮನಿಗಿಂತ ಕೆಳವರ್ಗದವಳಾದರೂ ಹಣದ ಮದ ಗಂಗೆಯನ್ನು ಎಂತಹ ಮಟ್ಟಕ್ಕಿಳಿಸಿತ್ತು ಎನ್ನುವ ಅಂಶ.

ಮದುಮಗಳಲ್ಲಿನ ನಾಗತ್ತೆ ಕೂಡ ಹಣದ ದುರಾಸೆಯಿಂದ ಹೊರತಾಗಿರಲಿಲ್ಲ. ಇಬ್ಬರು ಗಂಡಂದಿರನ್ನು ಕಟ್ಟಿಕೊಂಡಿರುವ ಇವಳು ಲೈಂಗಿಕ ತೃಪ್ತಿಹೊಂದದೆ ಶ್ರೀಮಂತ ಮನೆತನವನ್ನೆ ಹುಡುಕುತ್ತಿರುತ್ತಾಳೆ. ಯೌವ್ವನದಲ್ಲಿರುವ ತನ್ನ ಸೊಸೆಯನ್ನು ಹಣವಂತರಿಗೆ ಸೀರುಡಿಕೆ ಮಾಡಲು. "ಹೇಗಾದರೂ ಸಿಂಬಾವಿ ಹೆಗ್ಗಡೇರಿಗೆ ತನ್ನ ಸೊಸೆಯನ್ನು ಕೂಡಿಕೆ ಮಾಡಿಸಿದರೆ ತನ್ನ ಸಾಲ-ಸೋಲಗಳೆಲ್ಲ ತೀರಿ ಹೋಗುತ್ತದೆ............ ಒಂದು ವೇಳೆ ಶ್ರೀಮಂತರೂ ದೊಡ್ಡ ಮನೆತನದವರೂ ಆದ ಹೆಗ್ಗಡೆಯವರಿಗೆ ಹೆಣ್ಣು ಕೊಡುವ ಸರಿಸಮಾನರು ಅನೇಕರಿದ್ದು, ತನ್ನ ಸೊಸೆಯೊಡನೆ ಸೀರುಡಿಕೆಯಂತಹ ಕೀಳು ಸಂಬಂಧಕ್ಕೆ ಅವರು ಒಪ್ಪದಿದ್ದರೂ ತನ್ನ ಸೊಸೆ ಅವರ ದೇಹಾಸಕ್ತಿಗೆ ಒಳಗಾದರೂ ಸಾಕು ತಾನು ತನ್ನ ಇಷ್ಟಾರ್ಥಗಳನ್ನೆಲ್ಲ ನೆರವೇರಿಸಿಕೊಳ್ಳುತ್ತೇನೆ ಎಂಬುದು ಅವಳ ಧೈರ್ಯ". ನಾಗತ್ತೆಯ ಈ ಕುತಂತ್ರವನ್ನು ಗಮನಿಸಿದಾಗ ಇವಳು ಮೇಲುಜಾತಿಗೆ ಸೇರಿದರೂ, ಕೆಳಜಾತಿಗೆ ಸೇರಿದ ಗಂಗೆಗಿಂತಲೂ ಕೀಳು. ತಾನು ಒಂಟಿಯಾಗಿದ್ದು ಜಂಟಿಬಾಳಗಾಗಿ ಊರೂರು ಅಲೆಯುತ್ತಿದ್ದಳೊ ಹಾಗೆಯೇ ಗಂಗೆ ಕೂಡ ಮೊದಲು ವಯಸ್ಸಾದವನನ್ನು ಮದುವೆಯಾಗಿ ತನ್ನ ಹಿಂದಿನ ಪ್ರೇಮಿಯೊಡನೆ ಸಂಬಂಧವಿಟ್ಟುಕೊಂಡು ಅವನು ಸತ್ತ ಮೇಲೆ ಊರಿಂದೂರಿಗೆ ಬಂದು ಸೇರೆಗಾರರೊಂದಿಗೆ ಸಂಬಂಧ ಹೊಂದಿದ್ದೇ ಅಲ್ಲದೆ ಚಂದ್ರಯ್ಯಗೌಡ, ಓಬಯ್ಯ ಮುಂತಾದವರನ್ನು ಬಲೆಗೆ ಬೀಳಿಸಿಕೊಂಡು ಅನೈತಿಕ ಬಾಳು ಬಾಳುತ್ತಿದ್ದಳು.

ಹೀಗೆ ಗಂಗೆ ಮತ್ತು ನಾಗತ್ತೆ ಒಂದೇ ನಾಣ್ಯದ ಎರಡು ಮುಖಗಳಂತೆ ವಯಸ್ಸಿನ ಅಂತರವಿದ್ದರೂ ಸ್ವಭಾವ ಒಂದೇ, ಪರಂಪರಾಗತ ದಾಸ್ಯಅಂಶಗಳ ವಿವಿಧ ಸ್ತರಗಳ ಪ್ರತಿನಿಧಿಗಳಷ್ಟೇ ಅಲ್ಲ. ಆ ದಾಸ್ಯವನ್ನು ಉಳಿಸಿಡುವ ವಾಹಕಗಳೂ ಆಗಿದ್ದಾರೆ. ಇಲ್ಲಿನ ವ್ಯಂಗ್ಯವೆಂದರೆ ತಮ್ಮ ಸ್ಥಿತಿಗೆ ನಿಜವಾದ ಕಾರಣವನ್ನು ಅರಿಯದ ಇವರು, ತಮ್ಮ ಹೆಣ್ಣುತನದ

ಬಂಡವಾಳದಿಂದ ಯಜಮಾನರನ್ನು ಓಲೈಸುತ್ತಾ, ಅವರ ಮೇಲೆ ಹಿಡಿತ ಸಾಧಿಸಲು ಯತ್ನಿಸುವಲ್ಲಿ, ಬೇರೆ ಹೆಣ್ಣುಗಳನ್ನು ಆ ಹೊಸ ಅಧಿಕಾರದ ನೆಲೆಯಿಂದ ಶೋಷಿಸುತ್ತಾ ಬದುಕುತ್ತಾರೆ. ನಾಗತ್ತೆ ಅತ್ತೆ ಎಂಬ ಅಧಿಕಾರದಿಂದ ಸೊಸೆಯನ್ನು ಶೋಷಿಸಿದರೆ, ಗಂಗೆ ತಾನು ಚಂದ್ರಯ್ಯಗೌಡರ ಪ್ರೇಯಸಿ ಎಂಬ ಅಧಿಕಾರದಿಂದ ಸುಬ್ಬಮ್ಮನನ್ನು ದ್ವೇಷಿಸುತ್ತಾಳೆ. ಶೋಷಣೆ ಮಾಡುತ್ತಾಳೆ.

ಈ ಇಬ್ಬರು ಖಳನಾಯಕಿಯರು ಧನಪಿಶಾಚಿಗಳು ಅಲ್ಲದೆ ತಮ್ಮದೆ ಆದ ಬಿರುದನ್ನು ಹೊಂದಿದ್ದವರು, ಗಂಗೆ 'ಮಾಯಗಾತಿ ಗಂಗೆ' ಎನಿಸಿದರೆ, ನಾಗತ್ತೆ 'ಸೀರುಡಿಕೆ ನಾಗತ್ತೆ' ಎಂದೇ ಪ್ರಸಿದ್ಧಳು. ಬಹುಶಃ ಇವಳಷ್ಟು ಸೀರುಡಿಕೆಯನ್ನು ಯಾರು ಮಾಡಿಕೊಂಡಿರಲಿಲ್ಲ ಎನ್ನಬಹುದು. ಅಲ್ಲದೆ ತನಗಿಂತಲೂ ಕೀಳು ಜಾತಿಯವನ ಜೊತೆ ಸಂಬಂಧವಿರಿಸಿಕೊಂಡಿದ್ದಳು. ಅದೂ ಕಾಮುಕ ವೆಂಕಣ್ಣನಿಗೂ ಅಸಹ್ಯ ತರುವಷ್ಟರಮಟ್ಟಿಗೆ. ಈ ಇಬ್ಬರೂ ಬೇರೆಯವರ ದುರಂತಕ್ಕೆ ಕಾರಣವಾಗುತ್ತಾರೆ. ಆದರೆ ಇವರಿಗೆ ಯಾವ ಅನ್ಯಾಯವು ಆಗುವುದಿಲ್ಲ. ಇವರ ಅಂತ್ಯ ಪಲಾಯನವೇ ಆಗಿದೆ. ಆದ್ದರಿಂದ ಮದುಮಗಳು ಮತ್ತು ಹೆಗ್ಗಡತಿ ಕೃತಿಗಳಲ್ಲಿ ಈ ಎರಡೂ ಪಾತ್ರಗಳು ಸ್ವಾರ್ಥಪರತೆಯಿಂದ ಮತ್ತೊಬ್ಬರ ಅವನತಿಗೆ ಕಾರಣರಾಗುತ್ತಾರೆ.

ಮದುಮಗಳಲ್ಲಿನ ಸಿಂಬಾವಿ ಅತ್ತಿಗೆಯರದು ಯಾವಾಗಲೂ ಕಚ್ಚಾಟವೇ. ಜಟ್ಟಮ್ಮ – ಲಕ್ಕಮ್ಮ ಇಬ್ಬರು ಒಬ್ಬರ ಸಮಾಧಾನಕ್ಕೊಬ್ಬರು ಬೈಯ್ದಾಡುತ್ತಲೇ ಇರುತ್ತಾರೆ. ಜಟ್ಟಮ್ಮನನ್ನು ಲಕ್ಕಮ್ಮ ಹಂದಿ ದೊಡ್ಡಿಯಿಂದ ಬಂದವಳೆಂದರೆ ಜಟ್ಟಮ್ಮ ಅದೇ ದೊಡ್ಡಿಗೆ ನೀನು ಹೋಗುವುದು ಎನ್ನುತ್ತಾಳೆ. ಇದು ಇವರು ಬೆಳೆದ ಅನಾಗರಿಕ ಪರಿಸರವನ್ನು ತೋರಿಸುತ್ತದೆ. ಇದೆ ಕೃತಿಯಲ್ಲಿ ಬರುವ ಹಳೆಮನೆಯ ಅತ್ತಿಗೆ ನಾದಿನಿಯರನ್ನು ನೋಡಿದಾಗ ಅವರು ಅನ್ಯೋನ್ಯವಾಗಿರುತ್ತಾರೆ. ದ್ವೇಷ, ಕೋಪದ ಬದಲಾಗಿ ಸ್ನೇಹ, ಪ್ರೀತಿ, ಕರುಣೆಯನ್ನು ಕಾಣಬಹುದು, ಅತ್ತಿಗೆಯಾದ ರಂಗಮ್ಮನಿಗೆ ಮಂಜಮ್ಮ ಎಲ್ಲಾ ರೀತಿಯಲ್ಲಿಯೂ ಸಹಾಯಕಳಾಗಿರುತ್ತಾಳೆ. ಹಳೆಮನೆಯ ಅಸಂಸ್ಕೃತಿಯ ಕೊಳಕು ವಾತಾವರಣದಲ್ಲೂ ಶುಚಿಯಾಗಿ ಬಾಳಿದವರು ಇವರಿಬ್ಬರು. ಮಂಜಮ್ಮ ಒಳ್ಳೆಯವಳಾದರೂ ತಂದೆಯ ಜಿಪುಣತನದಿಂದಾಗಿ ತನ್ನ ಆಸೆ ಆಕಾಂಕ್ಷೆಗಳನ್ನು ಬಲಿಕೊಟ್ಟು ಇಳಿವಯಸ್ಸಿನ ಭರಮೈಹೆಗ್ಗಡೆಗೆ ಎರಡನೆಯ ಹೆಂಡತಿಯಾಗುತ್ತಾಳೆ.

ಈ ಕಾದಂಬರಿಗಳಲ್ಲಿನ ಹೆಂಗಸರು ಪುರುಷನ ಹಾಗೆ ವಿದ್ಯೆ ಕಲಿಯಬೇಕೆನ್ನುವುದು ಸಾಧ್ಯವಿಲ್ಲ. ಹಾಗೇನಾದರೂ ಹೇಳಿದರೆ ಅದು ಗಂಡಸರು ಸೀರೆ ಉಡುವುದಕ್ಕಿಂತ ಹಾಸ್ಯಾಸ್ಪದ ಆದರೆ ದುಡಿಮೆಯಲ್ಲಿ ಮಾತ್ರ ಹೆಂಗಸರು ಗಂಡಸರ ಸರಿಸಮನಾಗಿಯೇ ಮಾಡಬೇಕು.

ಗಂಡನಿಗೆ ಎದುರಾಡುವ ಹಾಗಿಲ್ಲ. ಅವರುಗಳ ಜೋರೇನಿದ್ದರು ಅಡುಗೆಮನೆಯೊಳಗೆ ಮಾತ್ರ ಭರಮೈ ಹೆಗ್ಗಡೆಯ ಹೆಂಡತಿಗೆ ಗಂಡ ಮತ್ತೊಂದು ಮದುವೆಯಾಗುತ್ತಿದ್ದರೂ ಒಳಗೊಳಗೆ ಬೇಸರ ಮಾಡಿಕೊಳ್ಳುತ್ತಾಳೆ. ನೇರವಾಗಿ ಪ್ರತಿಭಟಿಸುವುದಿಲ್ಲ, ಪ್ರತಿಭಟಿಸಿದರೂ ಆಗ ಹೆಂಗಸರ ಮಾತಿಗೆ ಎಲ್ಲಿದೆ ಬೆಲೆ.

ಕಾನೂರು ಹೆಗ್ಗಡತಿಯಲ್ಲಿ ಹೆಚ್ಚು ಮೇಲುವರ್ಗದ ಸುಸಂಸ್ಕೃತ ಸ್ತ್ರೀಯರನ್ನು ಕಾಣುತ್ತೇವೆ. ನಾಗಮ್ಮ, ಸೀತೆ, ಪುಟ್ಟಮ್ಮ, ಗೌರಮ್ಮ, ಲಕ್ಷ್ಮಿ, ಇತ್ಯಾದಿ. ಆದರೆ ಕುಸಂಸ್ಕೃತರೂ ಇದ್ದಾರೆ ಸುಬ್ಬಮ್ಮ, ಗಂಗೆ, ಸೇರಿ ಮುಂತಾದವರು. ಮದುಮಗಳಿನಲ್ಲಿ ಹೆಚ್ಚು ಅಶಿಕ್ಷಿತರನ್ನು, ಅಸಂಸ್ಕೃತರನ್ನು ಕಾಣಬಹುದು. ನಾಗತ್ತೆ, ನಾಗಕ್ಕ, ಅಂತಕ್ಕ, ಅಕ್ಕಣಿ, ದೇಯಿ, ಜಟ್ಟಮ್ಮ, ಲಕ್ಕಮ್ಮ, ಮಂಜಮ್ಮ, ಇತ್ಯಾದಿ. ಚಿನ್ನಮ್ಮ, ಪೀಂಚಲು, ತಿಮ್ಮಿ ಇವರು ಅಶಿಕ್ಷಿತರಾದರೂ ಸುಸಂಸ್ಕೃತರಂತೆ ನಡೆದುಕೊಳ್ಳುತ್ತಾರೆ.

ಕಾನೂರು ಹೆಗ್ಗಡತಿಯ ಸ್ತ್ರೀ ಪಾತ್ರಗಳಿಗಿಂತ ಮಲೆಗಳಲ್ಲಿ ಮದುಮಗಳು ಕೃತಿಯಲ್ಲಿನ ಸ್ತ್ರೀ ಪಾತ್ರಗಳ ಸಂಖ್ಯೆ ಹೆಚ್ಚು ಎಂದೇ ಹೇಳಬಹುದು. ಒಂದೊಂದು ಪಾತ್ರವು ಒಂದರ ಸಂಕೇತಗಳಂತೆ, ಪ್ರತಿಮೆಗಳಂತೆ ಇವೆ. ಉದಾಹರಣೆಗೆ ಚಿನ್ನಮ್ಮನ ಅತೀಂದ್ರಿಯ ಶಕ್ತಿ, ತಿಮ್ಮಿಯ ಕನಸಿನ ಕಾಣ್ಕೆ, ದರ್ಶನ, ಪೀಂಚಲುವಿನ ಸ್ವತಂತ್ರತೆ, ಧೈರ್ಯವಂತಿಕೆ, ನಾಗಕ್ಕನ ಒಳ್ಳೆಯತನ- ಹೀಗೆ ಈ ಪಾತ್ರಗಳು ಸಮಾಜದಲ್ಲಿ ತಮಗೆ ದೊರಕಿದ ಸ್ಥಾನಮಾನಗಳನ್ನು ಅತ್ಯುತ್ತಮವಾದ ರೀತಿಯಲ್ಲಿ ನಿರ್ವಹಿಸಿವೆ ಎನ್ನಲು ಅಡ್ಡಿಯಿಲ್ಲ. ಸಮಾಜದೊಳಗಿದ್ದು ಕೆಲವೊಮ್ಮೆ ಸಮಾಜದ ರೀತಿ-ನೀತಿಗಳನ್ನು ಮೀರುತ್ತವೆ. ಸ್ವಂತಿಕೆಗೆ ಹೆಚ್ಚಿನ ಬೆಲೆಯನ್ನೆ ನೀಡುತ್ತವೆ. ಶಿಕ್ಷಣ ಅಥವಾ ಸುಸಂಸ್ಕೃತಿಗಿಂತಲೂ ಇವರಿಗೆ ತಮ್ಮ ಬದುಕೇ ಮುಖ್ಯವೆನಿಸುತ್ತದೆ.

ಕಾನೂರು ಹೆಗ್ಗಡತಿ, ಮತ್ತು ಮಲೆಗಳಲ್ಲಿ ಮದುಮಗಳು - ಈ ಎರಡೂ ಕೃತಿಗಳೂ ಮಲೆನಾಡ ಪರಿಸರವನ್ನೇ ಬಳಸಿಕೊಂಡಿವೆ. ಎರಡರಲ್ಲಿಯೂ ಪ್ರಕೃತಿ ವೈಭವ ಜೀವಂತವಾಗಿ ಚಿತ್ರಿತವಾಗಿದೆ. ಅಲ್ಲಿನ ಪ್ರಾಕೃತಿಕ ಸ್ವರೂಪದ ನಿಕಟ ಪರಿಚಯದಷ್ಟೇ ಅಲ್ಲಿನ ಬದುಕುವ ಜನರ ನಿತ್ಯ ಹೋರಾಟದ ಬದುಕಿನ ನೂರಾರು ವಿವರಗಳನ್ನು ತಿಳಿಸಿಕೊಡುತ್ತವೆ. ಪ್ರಕೃತಿ ಎಂದರೆ ಸ್ತ್ರೀ. ಅಂತಹ ಸ್ತ್ರೀ ಪಾತ್ರಗಳನ್ನಂತೂ ಪ್ರಕೃತಿಯ ಜೊತೆ ಜೊತೆಯಲ್ಲಿಯೇ ಅಷ್ಟೇ ಸಹಜವಾಗಿ ಎರಡೂ ಕಾದಂಬರಿಗಳೂ ತೆರೆದಿಡುತ್ತವೆ.

ಎರಡೂ ಕಾದಂಬರಿಗಳಲ್ಲಿ ಎದ್ದು ಕಾಣುವ ಪಾತ್ರ ಸೃಷ್ಟಿಯ ವೈವಿಧ್ಯ ಹಾಗೂ ಜೀವಂತಿಕೆ ಅಚ್ಚರಿಗೊಳಿಸುವಂತಹವು. ಎಲ್ಲಾ ಬಗೆಯ, ಎಲ್ಲಾ ವಯಸ್ಸಿನ, ಎಲ್ಲಾ ಸ್ತರದ ಜನರಿದ್ದಾರೆ, ಒಬ್ಬರಂತೆ ಮತ್ತೊಬ್ಬರಿಲ್ಲ. ತಮ್ಮ ತಮ್ಮ ಸ್ವಭಾವ ಸತ್ವಗಳಿಗನುಗುಣವಾಗಿ ವ್ಯವಹರಿಸುವ ಪಾತ್ರಗಳ ಕ್ರಿಯೆಯೇ ಕಥೆಯಾಗಿ ರೂಪುಗೊಳ್ಳುತ್ತದೆ. ಇಲ್ಲಿನ ಸ್ತ್ರೀ ಪುರುಷ ಪಾತ್ರಗಳು ಜೀವಂತ ಪಾತ್ರಗಳಂತೆಯೇ ಕಣ್ಣು ಮುಂದೆಯೇ ನಿಲ್ಲುತ್ತವೆ.

ಕಾಲದ ದೃಷ್ಟಿಯಿಂದ ಮಲೆಗಳಲ್ಲಿ ಮದುಮಗಳು, ಹೆಗ್ಗಡತಿಗಿಂತ ಮುಂದಿನದಾದರೂ, ಮದುಮಗಳಿನಲ್ಲಿ ಸಾಮಾಜಿಕ ಸನ್ನಿವೇಶದ ಹೊಸ ಕಾಲದಲ್ಲಿ ಹೊಸ ಪ್ರಭಾವಗಳು ಇನ್ನೂ ಇಣುಕುವುದರಲ್ಲಿರುವುದರಿಂದ, ಆಧುನಿಕತೆಯ ದೃಷ್ಟಿಯಿಂದ ಹಿಂದಿನದಾಗಿಯೇ ಕಾಣಿಸಿಕೊಳ್ಳುತ್ತವೆ. ಹಾಗೆಯೇ ಕಾನೂರು ಹೆಗ್ಗಡತಿಗಿಂತ ಮಲೆಗಳಲ್ಲಿ ಮದುಮಗಳಿನ ಜೀವನದ ಹರಹು ವಿಸ್ತಾರವಾದದ್ದು. ಆದರೆ ಅರ್ಥವಂತಿಕೆಯ ಆಳವೂ ಹೆಚ್ಚಿನದು, ವಾಸ್ತವಾನುಭವವೇ ಹೆಚ್ಚು ಆದರ್ಶಕ್ಕಿಲ್ಲಿ ಬೆಲೆಯಿಲ್ಲ, ಅದು ಅವರಿಗೆ ಬೇಕಾಗಿಯು ಇಲ್ಲ.

[೨]"ಹೆಗ್ಗಡತಿ ಮತ್ತು ಮದುಮಗಳು ಸ್ತ್ರೀ ಸಂಬಂಧಿತ ನೆಲೆಗಳನ್ನು ಸೂಚಿಸುವುದರಿಂದ, ಮದುಮಗಳು ಎಂಬುದು ಹೆಣ್ಣಿನ ಪರಂಪರಾಗತ ಕೌಟುಂಬಿಕ ನೆಲೆಯನ್ನು ಸೂಚಿಸಿದರೆ, ಹೆಗ್ಗಡತಿ ಎಂಬುದು ಈ ರೂಢಿಗತ ಅಧೀನ ನೆಲೆಯನ್ನು ಉಲ್ಲಂಘಿಸಿ ಅಧಿಕಾರಕ್ಕೇರಿದ ಹೆಣ್ಣಿನ ನೆಲೆಯ ಸೂಚಕವಾಗಿದೆ. ಹೆಣ್ಣು ಅಧೀನತೆಯಿಂದ ಸರಿದು ಅಧಿಕಾರದ ನೆಲೆಯತ್ತ ಸಾಗುವ ಸಾಂಸ್ಕೃತಿಕ ಪ್ರಕ್ರಿಯೆಯನ್ನು ಎರಡೂ ಕಾದಂಬರಿಯಲ್ಲೂ ಗುರುತಿಸಲು ಸಾಧ್ಯವಿದೆ. ಆದರೆ ಈ ಕ್ರಿಯೆ ಅಸಂಸ್ಕೃತಿ-ಕುಸಂಸ್ಕೃತಿ ಮತ್ತು ಸುಸಂಸ್ಕೃತಿಗಳ ನಡುವಿನ ಮುಖಾಮುಖಿಯಾಗಿ, ನೈತಿಕ ಹೋರಾಟವಾಗಿ ಕಾನೂರು ಹೆಗ್ಗಡತಿಯಲ್ಲಿ ದಾಖಲಾಗುತ್ತದೆ"[೨]- ಸುಮಿತ್ರಾಬಾಯಿ. ಮದುಮಗಳು ಕಾದಂಬರಿಯಲ್ಲಿ ಸಂಸ್ಕೃತಿ ಜಿಜ್ಞಾಸೆ ಕೇವಲ ಮಾನವ ಲೋಕವನ್ನಷ್ಟೆ ಕುರಿತದ್ದಲ್ಲ. ಎಲ್ಲಾ ಜೀವಿಗಳ ಅತ್ತ್ಯುನ್ನತ ವಿಕಾಸ ಸಾಧ್ಯತೆಗಳನ್ನು ಗುರುತಿಸುವ ಆಧ್ಯಾತ್ಮಿಕ ನೆಲೆಯಲ್ಲಿ ಮುಖ್ಯವಾಗಿ ಕೆಲಸ ಮಾಡುತ್ತದೆ.

ಈ ಎರಡೂ ಕಾದಂಬರಿಗಳಲ್ಲಿ ಹೆಣ್ಣಿನ ಬಗ್ಗೆ ಅಪನಂಬಿಕೆಗಳಿರುವುದೇ ಹೆಚ್ಚು. ಸುಬ್ಬಮ್ಮನ ಮೇಲೆ ಚಂದ್ರಯ್ಯಗೌಡ ಅನುಮಾನಿಸುವುದು ಕಾವೇರಿಯನ್ನು ದೇವಯ್ಯ ಅನುಮಾನಿಸುವುದು. ಚಿನ್ನಮ್ಮನನ್ನೆ ಜನರು ಆಡಿಕೊಳ್ಳುವುದು. ಹೀಗೆ ಕಾದಂಬರಿಗಳುದ್ದಕ್ಕೂ ಕಂಡು ಬಂದರೂ ಅದು ಅಂದಿನ ಸಾಮಾಜಿಕ ವ್ಯವಸ್ಥೆಯ ಪರಿಣಾಮವೇ ಆಗಿದೆ.

---

೨. ಕುವೆಂಪು ಕಾದಂಬರಿಗಳು - ಸಂ. ಗುರುಪಾದ ಮರಿಗುದ್ದಿ - ಪುಟ ೨೫೭

ಈ ಎರಡು ಕೃತಿಗಳಲ್ಲಿಯೂ ಪುರುಷ ಎಂತಹ ಮಟ್ಟಕ್ಕಿಳಿಯುತ್ತಾನೆಂದರೆ ಅವನಿಗೆ ವಯಸ್ಸಿನ ಅಂತರವಿದ್ದರೂ ತನ್ನ ತಪ್ಪನ್ನು ಮುಚ್ಚಿಹಾಕಲು ಯಾವ ಹೆಣ್ಣನ್ನಾದರು ಮದುವೆಯಾಗುತ್ತಾನೆ. ಸಿಂಬಾವಿ ಭರಮೈ ಹೆಗಡೆಯಾಗಬಹುದು ಅಥ್‌ವಾ ಕಾನೂರಿನ ಚಂದ್ರಯ್ಯಗೌಡನೇ ಆಗಿರಬಹುದು. ಈ ಇಬ್ಬರಿಗೂ ಸ್ತ್ರೀ ಕೇವಲ ಬೋಗವಸ್ತುವಷ್ಟೆ. ಆದರಿಂದಲೇ ಗುಹ್ಯರೋಗಿಯಾಗಿದ್ದರೂ ಭರಮೈ ಹೆಗಡೆ ಮಂಜಮ್ಮನನ್ನು ಮದುವೆಯಾಗುತ್ತಾನೆ. ಇವರಿಗೆ ಹೆಣ್ಣಿನ ಭಾವನೆ ಮುಖ್ಯವಲ್ಲ ಸಾಮಾಜಿಕ ಪ್ರತಿಷ್ಟೆಯೇ ಮುಖ್ಯ. ವೆಂಕಟಣ್ಣನಿಗೆ ವಯಸ್ಸಿನ ಮಗಳಿದ್ದರೂ, ಗಂಜಿ ಬೇಯಿಸಿ ಹಾಕಲು ಒಂದು ಹೆಣ್ಣು ಬೇಕು ಎಂದು ರೋಗಿಷ್ಟನಾದರೂ ಕೂಡಿಕೆಮಾಡಿಕೊಳ್ಳುತ್ತಾನೆ. ಹಾಗೆಯೇ ತಿಮ್ಮಪ್ಪ ಹೆಗ್ಗಡೆ ಕೆಳಜಾತಿಯ ಅನೇಕ ಸ್ತ್ರೀಯರ ಜೊತೆ ಅನೈತಿಕ ಸಂಬಂಧವಿಟ್ಟುಕೊಂಡಿದ್ದರೂ ಕೂಡ ಅವನು ಗಂಡಸು! ಇವನಿಗೆ ಹೆಣ್ಣು ಕೊಡಲು ಯಾರು ಮುಂದೆ ಬರದಿದ್ದರೂ ಇವನ ಕಾಮುಕ ಸ್ವಭಾವದಿಂದಾಗಿ ಯಾವ ಹೆಣ್ಣು ಸಿಕ್ಕರು ಸಾಕು. ಈ ಎಲ್ಲಾ ದೃಷ್ಟಿಯಿಂದಲೂ ಹೆಣ್ಣು ಗಂಡಿನ ಆಸ್ತಿಯೆಂದೇ ನೋಡುವ ಮನೋಭಾವ.

ಮದುಮಗಳುವಿಗೆ ಹೋಲಿಸಿದರೆ ಹೆಗ್ಗಡತಿಯಲ್ಲಿ ಸ್ತ್ರೀ ಶೋಷಣೆ ಕಡಿಮೆಯೆಂದೇ ಹೇಳಬೇಕು. ಸುಬ್ಬಮ್ಮ , ಸೀತೆಯನ್ನು ಬಿಟ್ಟರೆ ಅಷ್ಟಾಗಿ ಸ್ತ್ರೀಯರು ಕಷ್ಟಕ್ಕೆ ಗುರಿಯಾಗುವುದಿಲ್ಲ. ಆದರೆ ಎರಡೂ ಕಾದಂಬರಿಗಳಲ್ಲಿಯೂ ಬರುವ ಪುರುಷರಿಗೆ ಒಂದಕ್ಕಿಂತ ಹೆಚ್ಚು ಹೆಂಡತಿಯರಿರುವುದನ್ನು ಕಾಣಬಹುದು. ಇಲ್ಲಿ ಸ್ತ್ರೀಯರನ್ನು 'ಅದು' ಎಂದೇ ಸಂಭೋದಿಸುವುದು. ಹೆಗ್ಗಡತಿಗಿಂತ ಸ್ತ್ರೀಯರಿಗೆ ಮದುಮಗಳುವಿನಲ್ಲಿ ಸಮಾನತೆ ಸಿಕ್ಕಿದೆ ಎನ್ನಬಹುದು. ಚಿನ್ನಮ್ಮ-ಮುಕುಂದಯ್ಯನೊಡನೆ, ತಿಮ್ಮಿಗುತ್ತಿಯೊಡನೆ ಓಡಿ ಹೋಗುವ ಘಟನೆ ಒಂದೇ ಆದರೂ ತಿಮ್ಮಿ ಕೆಳಜಾತಿಯವಳು. ಚಿನ್ನಮ್ಮ ಮತ್ತು ತಿಮ್ಮಿಯರು ಸ್ತ್ರೀಯರಾಗಿರುವುದರಿಂದ ಅವರಿಗೆ ಭಯವಿದ್ದರೂ, ಬಯಸಿದ್ದನ್ನು ಪಡೆದವರಾಗಿ, ಹೆಗ್ಗಡತಿಯ ಸೀತೆಗಿಂತ ಹೆಚ್ಚು ಸಫಲವಾದವರು, ವಾಸ್ತವವನ್ನು ಎದುರಿಸುವುದರ ದೃಷ್ಟಿಯಿಂದಲೂ ಸಾಮಾಜಿಕ ಲಿಂಗಸಮಾನತೆಯ ಸಾಧ್ಯತೆಯನ್ನು ಪ್ರತಿನಿಧಿಸಿದವರು ಇಲ್ಲಿನ ಪೀಂಚಲುವಿನ ಪಾತ್ರವಂತೂ ಅಂದಿಗೂ, ಇಂದಿಗೂ ಎಂದೆಂದಿಗೂ ಸವಾಲನ್ನು ಒಡ್ಡುವಂತಹದ್ದಲ್ಲದೆ, ಅತ್ಯಂತ ವಿಶಾಲ ಮನೋಭಾವ, ಸ್ವಾತಂತ್ರ್ಯ, ಪರಸ್ಪರ ಗೌರವಕ್ಕೆ ಅರ್ಹವಾದ ಆದರ್ಶ ಪಾತ್ರವಾಗಿದ್ದು, ಅವಳ ದಾಂಪತ್ಯವೂ ಆದರ್ಶವಾದದ್ದು. ಇವಳ ಚಲನಶೀಲ ವ್ಯಕ್ತಿತ್ವವೇ ಎಲ್ಲಾ ಸ್ತ್ರೀಯರಿಗೂ ಮಾದರಿಯಾದಂತಹದ್ದು. ಸ್ತ್ರೀ ಅಧೀನ ನೆಲೆಯಿಂದ ಸಮನತೆಯತ್ತ ಹೆಜ್ಜೆ ಇಡಲು ಸಹಾಯಕಾರಿಯಾದುದು.

ಮದುಮಗಳಲ್ಲಿನ ಕೆಳಜಾತಿಯ ಸೇಸಿ, ಹೆಗ್ಗಡತಿಯ ಮೇಲುಜಾತಿಯ ನಾಗಮ್ಮನಿಗಿಂತಲೂ ಉನ್ನತ ಪಾತ್ರವಾಗಿ ಬೆಳೆದಿದ್ದಾಳೆ. ಎಲ್ಲ ದಿಗ್ಭಂದನವನ್ನು ಮೀರಿ ಮಾತೃತ್ವ ಶಕ್ತಿಯ ಪ್ರತೀಕವಾಗಿ ಅನ್ಯಾಯವನ್ನು ಪ್ರತಿಭಟಿಸುತ್ತಾಳೆ. ಹೊಲತಿಯಾದ ಇವಳು ಗೌಡರನ್ನು ಬೇಡುವುದು ಸುಲಭವಲ್ಲ, ಆದರೂ ಧೈರ್ಯದಿಂದಲೇ ಮುನ್ನುಗ್ಗುತ್ತಾಳೆ. ಎಂತಹ ಕೆಳವರ್ಗದ ಪಾತ್ರವಾದರೂ ಕುವೆಂಪು ಅವರು ಜೀವ ತುಂಬುತ್ತಾರೆಂಬುದಕ್ಕೆ ಸೇಸಿಯೇ ನಿದರ್ಶನ.

ಹೀಗೆ ಮಲೆಗಳಲ್ಲಿ ಮದುಮಗಳು ವಿವಿಧ ಸ್ತರದ ಭಿನ್ನ ಭಿನ್ನವಾದ ಕುಟುಂಬಗಳ ಒಳ ಹೊರಗುಗಳನ್ನೇ ವಿವರವಾಗಿ ಚಿತ್ರಿಸುತ್ತದೆ. ಕಥಾ ಸಂವಿಧಾನ, ಪಾತ್ರ ರಚನೆ, ವಸ್ತು ನಿರೂಪಣೆಯಲ್ಲಿ ಹೊಸಹಾದಿ ತುಳಿದ ಕಾದಂಬರಿಯಾಗಿದ್ದು, ಈ ಕಾದಂಬರಿಯ ಮುಖ್ಯ ಉದ್ದೇಶವೇ ಲೈಂಗಿಕ ತೃಪ್ತಿ ಹಾಗೂ ಅತೃಪ್ತಿ. ಗಂಡು ಹೆಣ್ಣಿನ ಸಂಬಂಧವನ್ನೇ ವಿವರವಾಗಿ ತೋರಿಸುವುದು. ಈ ಪ್ರಣಯ ವೃತ್ತದ ಕೇಂದ್ರಬಿಂದುವೇ ಹೆಣ್ಣು. ಇಲ್ಲಿನ ಸ್ತ್ರೀಯರು ಕಾನೂರು ಹೆಗ್ಗಡತಿಯಲ್ಲಿ ಕಂಡುಬರುವ ಸ್ತ್ರೀಯರಿಗಿಂತ ಒಂದು ಹೆಜ್ಜೆ ಮುಂದಿದ್ದಾರೆ. ನಾಗರಿಕ ಪ್ರಭಾವಕ್ಕೊಳಗಾಗುತ್ತಿದ್ದ ಅಂದಿನ ಕುಟುಂಬಗಳಲ್ಲಿ ಸ್ತ್ರೀ ಅನಿವಾರ್ಯತೆಗೆ ಶರಣಾಗಿದ್ದಾಳೆ. ಮೇಲು ಕೀಳೆನ್ನದೆ ಎಲ್ಲ ಸ್ತ್ರೀಯರೂ ಒಂದೇ ಮಟ್ಟದಲ್ಲಿ ನಿಂತಿದ್ದಾರೆ.

ಎರಡೂ ಕಾದಂಬರಿಗಳಲ್ಲಿಯೂ ಸ್ತ್ರೀಯರು ತಮ್ಮ ಕುಟುಂಬದಲ್ಲಿನ ಸ್ಥಾನಮಾನಕ್ಕಾಗಿ ಹೋರಾಟ ಮಾಡಿದವರು. ಮೇಲುವರ್ಗದವರಾದ ಸಿಂಬಾವಿ ಜಟ್ಟಮ್ಮ, ಲಕ್ಕಮ್ಮ, ರಂಗಮ್ಮ, ಮಂಜಮ್ಮ, ಸೀತಮ್ಮ, ದೇವಮ್ಮ, ಎಲ್ಲರೂ ಮೌನವಾಗಿ ಪ್ರತಿಭಟಿಸಿದವರು. ಮೇಲುವರ್ಗದವರಂತೆ ಕೆಳವರ್ಗದವರಾದ ಪೀಂಚಲು, ತಿಮ್ಮಿ, ಸೇಸಿ, ಅಕ್ಕಣಿ ಎಲ್ಲರು ಯಾವ ಭೇದವು ಇಲ್ಲದೆ ತಮ್ಮ ಸ್ಥಾನಮಾನ ಉಳಿಸಿಕೊಂಡವರು.

ಈ ಎರಡೂ ಕೃತಿಗಳ ಸ್ತ್ರೀ ಪಾತ್ರಗಳನ್ನು ನೋಡಿದಾಗ ಇಲ್ಲಿನ ಸ್ತ್ರೀಯರು ಪರಿಸ್ಥಿತಿಯೊಂದಿಗೆ ರಾಜಿ ಮಾಡಿಕೊಂಡವರು ಮೇಲುವರ್ಗ-ಕೆಳವರ್ಗ ಎನ್ನದೆ ಎಲ್ಲರೂ ಮುಖ್ಯರೆನಿಸುತ್ತಾರೆ ಮತ್ತು ಶೋಷಿತ ಸ್ತ್ರೀಯರಲ್ಲಿಯೇ ಎರಡು ವರ್ಗ ಒಂದು ವರ್ಗದ ಸ್ತ್ರೀಯರು ಪುರುಷರಿಂದ ಲೈಂಗಿಕ ಶೋಷಣೆಗೆ ಒಳಗಾದರೆ, ಮತ್ತೊಂದು ವರ್ಗದ ಸ್ತ್ರೀಯರು ಸ್ತ್ರೀಯರಿಂದಲೇ ಶೋಷಣೆಗೆ ಒಳಗಾಗುತ್ತಾರೆ.

ಹೀಗೆ ಎಲ್ಲಾ ದೃಷ್ಟಿಯಿಂದ ನೋಡಿದರೂ ಮಲೆಗಳಲ್ಲಿ ಮದುಮಗಳು, ಹೆಗ್ಗಡತಿಗಿಂತ ಪ್ರಬುದ್ಧವಾದ ಕಲಾಕೃತಿ, ಅದು ಬರಿಯ ವ್ಯಕ್ತಿಗಳ ಕಥೆಯಲ್ಲ, ಸಮಷ್ಟ ಜೀವನದ ಕಥೆ, ಅದರಲ್ಲಿ ವಾಸ್ತವಿಕತೆ ತನ್ನ ಪರಮಾವಧಿ ಪರಿಮಾಣದಲ್ಲಿ ಪ್ರಕಟವಾಗಿ ಪಾತ್ರಗಳು ರಕ್ತ, ಮಾಂಸ, ಶ್ವಾಸ ಸಹಿತವಾಗಿ ಓಡಾಡುತ್ತವೆ. ಇಲ್ಲಿ ಸ್ತ್ರೀ ಪುರುಷರೆಂಬ ಭೇದವಿಲ್ಲ.

ಅಧ್ಯಾಯ – ೬

ಸ್ತ್ರೀ ಪಾತ್ರ ಚಿತ್ರಣದಲ್ಲಿ ವ್ಯಕ್ತವಾಗುವ ಕೃತಿಕಾರನ ಮನೋಧರ್ಮ.

[೩]"ಮಾನವ ದೇಹದಲ್ಲಿ ಪ್ರಾಣಕ್ಕಿರುವ ಮಹತ್ವ ಕಾದಂಬರಿಗಳಲ್ಲಿ ಪಾತ್ರಗಳಗಿರುತ್ತದೆ. ಪಾತ್ರಗಳು ಸಜೀವವಾಗಿ ಕಂಡಷ್ಟು ಕಾದಂಬರಿ ಯಶಸ್ವಿಯಾಗುತ್ತದೆ. ನಾಟಕ ನಡೆದಿರುವಾಗ ನಟ-ನಟಿಯರು ತಮ್ಮ ತಮ್ಮ ಪಾತ್ರಗಳಲ್ಲಿ ತಾದಾತ್ಮ್ಯ ಹೊಂದಿ ಅಭಿನಯಿಸುತ್ತಿದ್ದರೆ ಮಾತ್ರ ಪ್ರೇಕ್ಷಕರು ಅದರಲ್ಲಿ ತಲ್ಲೀನರಾಗಿರುವರು. ಅದೇ ರೀತಿಯಾಗಿ ಕಾದಂಬರಿಯಲ್ಲಿನ ಪಾತ್ರಗಳು ಕಲ್ಪನೆಯ ಗೊಂಬೆಗಳಾಗಿ ಉಳಿಯದೆ ಜೀವಂತ ವ್ಯಕ್ತಿಗಳಂತೆ ಕಂಡುಬಂದರೆ ಮಾತ್ರ ವಾಚಕರು ಅದರಲ್ಲಿ ತಲ್ಲೀನರಾಗುವರು. ಲೇಖಕರಲ್ಲಿ ಚಿತ್ರಣಶಕ್ತಿ ಇದ್ದಷ್ಟೂ ಈ ಕಾರ್ಯ ಸುಲಭ"[೩] – ಬಸವರಾಜ ಕಟ್ಟೀಮನಿ.

[೪]"ಕುವೆಂಪು ಅವರ ಪೂರ್ಣ ಸತ್ವವು ಇಡಿಯಾಗಿ ಶಕ್ತಿಗೊಂಡಿರುವುದು ಅವರ ಮೂರು ಬೃಹತ್ ಕೃತಿಗಳಲ್ಲಿ ಎನ್ನಬಹುದು. ಅವು ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಮತ್ತು ಶ್ರೀ ರಾಮಾಯಣ ದರ್ಶನಂ"[೪] – ಕೆ.ವಿ.ಸುಬ್ಬಣ್ಣ

ಈ ಮೇಲಿನ ಮಾತನ್ನು ಪುಷ್ಟೀಕರಿಸುವುದಾದರೆ, ಈ ಮೂರು ಬೃಹತ್ ಕೃತಿಗಳಲ್ಲಿಯೂ ಕುವೆಂಪು ಹೆಣ್ಣಿನ ಸಹಜ ಭಾವನೆಗಳನ್ನು ತಮ್ಮದೇ ಆದ ದೃಷ್ಟಿಕೋನದಲ್ಲಿ ಸೃಷ್ಟಿಸಿದ್ದಾರೆ. 'ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹದ್ವ್ಯೂಹ ರಚನೆಯೊಳ್' ಎಂದು ಮಂಥರೆಯಂತಹ ಕುರೂಪಿಗೂ ಜೀವ ತುಂಬಿದ ಕವಿ, ಸರ್ವೋದಯ, ಸಮಾನತೆಯ ತತ್ವವನ್ನು ಎತ್ತಿಹಿಡಿದಿದ್ದಾರೆ. ಹಾಗೆಯೇ ಈ ಎರಡೂ ಕಾದಂಬರಿಗಳಲ್ಲಿ ಕೃತಿಕಾರರ ಮನೋಧರ್ಮ ಹರಳುಗಟ್ಟಿರುವುದು ಪಾತ್ರಗಳಲ್ಲಿ. ಅದರಲ್ಲಿಯೂ ಸ್ತ್ರೀ ಪಾತ್ರಗಳಲ್ಲಿ ವ್ಯಕ್ತವಾಗಿರುವ ಮನೋಧರ್ಮ, ಚಿತ್ರಿಸಿರುವ ವಿಧಾನ ಅಪೂರ್ವವಾಗಿದೆ.

ಮಲೆನಾಡಿನಂತಹ ಸಾಂಸ್ಕೃತಿಕ ಪರಿಸರದಂತಹ ಹಿನ್ನೆಲೆಯಿಂದ ಬಂದ ಲೇಖಕರು ಪ್ರಕೃತಿಯಷ್ಟೇ ಸಹಜವಾಗಿ ಹೆಣ್ಣನ್ನು, ಅವಳ ಭಾವನೆಗಳನ್ನು ಬಿಂಬಿಸುತ್ತಾರೆ. ಸಾಮಾಜಿಕ ಸಂದರ್ಭದಲ್ಲಿ ಸ್ತ್ರೀ ಬದುಕಿನೊಡನೆ ಹೊಡೆದಾಡುವ, ಹೊಂದಿಕೊಳ್ಳುವ ಮನಸ್ಥಿತಿಯನ್ನು ಹೊಂದಿದ್ದಾಳೆ. ಅಲ್ಲದೆ ಸ್ತ್ರೀ ಆ ರೀತಿ ನಡೆದುಕೊಳ್ಳಲು ಇರುವ ಪ್ರಮುಖ ಕಾರಣಗಳೇನು,

೩. ಕೃತಿ ವಿಮರ್ಶೆ. ಸಂ. ಅರವಿಂದ ಮಾಲಗತ್ತಿ – ಪುಟ ೫೫೩
೪. ಕೃತಿ ವಿಮರ್ಶೆ. ಸಂ. ಅರವಿಂದ ಮಾಲಗತ್ತಿ – ಪುಟ ೫೩೭

ಅವಳು ಬೆಳೆದ ಕುಟುಂಬ ಅಥವಾ ಪರಿಸರ ಅವಳ ಮೇಲೆ ಎಂತಹ ಪರಿಣಾಮವನ್ನು ಉಂಟುಮಾಡಿದೆ. ವೈಯಕ್ತಿಕವಾದ ಬದುಕು ಅವಳಿಗಿದೆಯೇ ಇಲ್ಲವೆ, ಪುರುಷನ ಕಪಿಮುಷ್ಟಿಯಿಂದ, ಸಂಪ್ರದಾಯಬದ್ಧ ವ್ಯವಸ್ಥೆಯಿಂದ ಹೊರಬರಲು ಒದ್ದಾಡುವ ಪರಿ ಅಥವಾ ಸಂಪ್ರದಾಯದೊಳಗೆ ಅದಕ್ಕೆ ಶರಣಾಗುವ ಮನೋಭಾವ ಈ ಎಲ್ಲಾ ರೀತಿಯ ವ್ಯಕ್ತಿತ್ವಗಳನ್ನು ಚಿತ್ರಿಸಿದ್ದಾರೆ.

ಈ ಎರಡೂ ಕಾದಂಬರಿಗಳು ಮಲೆನಾಡಿನ ಕತೆಗಳೇ ಆಗಿರುವುದರಿಂದ ಈ ಮಲೆನಾಡಿನ ಪುಟ್ಟ ಪ್ರಪಂಚದಲ್ಲಿ ವಿವಿಧ ವರ್ಗ, ಜಾತಿ, ಗುಣ, ಸ್ವಭಾವಗಳ ನೂರಾರು ಮಂದಿ ಚಿತ್ರವಿಚಿತ್ರ ಜನರಿದ್ದಾರೆ, ಅವರ ಚಿತ್ರವಿಚಿತ್ರ ನಡಾವಳಿಗಳಿವೆ. ಮನುಷ್ಯರಷ್ಟೆ ಸಹಜವಾಗಿ, ಪ್ರಾಣಿಗಳ ಚಿತ್ರಣವಿದೆ. ಹೆಗ್ಗಡತಿಯಲ್ಲಿ ನಾಯಕ, ನಾಯಕಿ ಎಂದೂ ಗುರ್ತಿಸಬಹುದಾದರೆ, ಮದುಮಗಳಿನಲ್ಲಿ ಯಾವ ನಾಯಕ, ನಾಯಕಿ ಪಾತ್ರವಿಲ್ಲ. ಏಕೆಂದರೆ, ಇಲ್ಲಿ ಯಾರು ಮುಖ್ಯರಲ್ಲ, ಯಾರೂ ಅಮುಖ್ಯರೂ ಅಲ್ಲ ಎಲ್ಲರು ಸಮಾನರು ಅದು ಹೆಣ್ಣಿರಲಿ ಅಥವಾ ಗಂಡಿರಲಿ, ಗಂಡಿನ ದರ್ಪ, ಅಹಂಕಾರ, ಅಧಿಕಾರ ತುಸು ಹೆಚ್ಚೇ ಎನಿಸಿದರೂ ಸ್ತ್ರೀ ಅವನಿಗೆ ಅಧೀನಳಾದರೂ ಕೃತಿಕಾರರ ಧೋರಣೆಯಲ್ಲಿ ಅವಳಿಗೂ ವಿಶಿಷ್ಟ ಸ್ಥಾನಮಾನವಿದೆ. ಆದರೆ ಅವಳು ಅಂದಿನ ಸಮಾಜದ ನೀತಿ ನಿಯಮಗಳಿಗನುಣವಾಗಿ ರೂಪಿತವಾಗಿದ್ದಾಳೆ. ಎಷ್ಟೇ ಶತಮಾನಗಳೂ ಕಳೆದರೂ ಕೂಡ ಸ್ತ್ರೀಯರನ್ನು ಪುರುಷವರ್ಗ ಅಡುಗೆಮನೆಯೊಳಗೆ ಕಾಣಲು ಬಯಸುತ್ತಾರೆಯೋ ಹೊರತು. ಅಧಿಕಾರ ಚಲಾಯಿಸಲು ಅಲ್ಲ. ಒಂದು ವೇಳೆ ಅಧಿಕಾರ ಚಲಾಯಿಸ ಹೊರಟರೆ ಅಲ್ಲಿಯೂ ಪುರುಷರ ದಬ್ಬಾಳಿಕೆಗೆ ಟೀಕೆಗೆ ಗುರಿಯಾಗುತ್ತಾಳೆ. ಸ್ತ್ರೀಗೆ ಸ್ವಾತಂತ್ರ್ಯ, ಸಮಾಜದಲ್ಲಿ ಸ್ಥಾನಮಾನ ದೊರೆಯಬೇಕಾದರೆ. ಪುರುಷರ ಮನೋಭಾವ ಬದಲಾಗಬೇಕು ಪುರುಷನ ಸಹಕಾರ ದೊರಕಬೇಕು ಎಂಬುದನ್ನು ಕಾದಂಬರಿಗಳು ಸೂಚಿಸುತ್ತವೆ. ಅಂತಹ ಸ್ವಾತಂತ್ರ್ಯ ಇಲ್ಲದೆಯೇ ಕೆಲವು ಸ್ತ್ರೀ ಪಾತ್ರಗಳು ಎಲ್ಲರಿಗೂ ಮಾದರಿ ಎನಿಸುತ್ತವೆ.

ಮದುಮಗಳು ಮತ್ತು ಹೆಗ್ಗಡತಿಯಲ್ಲಿನ ಸ್ತ್ರೀ ಪಾತ್ರಗಳಲ್ಲಿ ಲೇಖಕರ ಮನೋಧರ್ಮವನ್ನು ಈ ಕೆಳಕಂಡ ಅಂಶಗಳಿಂದ ಗುರುತಿಸಬಹುದು.

೧. ಪಾತ್ರ ಚಿತ್ರಣದಲ್ಲಿ ಕಾದಂಬರಿಕಾರರ ದೃಷ್ಟಿ.

೨. ಪಾತ್ರಗಳಲ್ಲಿ ಕಂಡು ಬರುವ ವೈವಿಧ್ಯ.

೩. ವೈವಿಧ್ಯತೆಗೆ ಕಾರಣಗಳು.

೧. ಪಾತ್ರ ಚಿತ್ರಣದಲ್ಲಿ ಕಾದಂಬರಿಕಾರರ ದೃಷ್ಟಿ :

ಪಾತ್ರ ಚಿತ್ರಣದಲ್ಲಿ ಕಾದಂಬರಿಕಾರರ ದೃಷ್ಟಿಯನ್ನು ತೆಗೆದುಕೊಂಡಾಗ ಗಮನಿಸಬೇಕಾದಂತಹ ಅಂಶವೆಂದರೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ದೃಷ್ಟಿಕೋನಗಳಿಂದ ನೋಡಿದರೆ ಈ ಎರಡೂ ಕಾದಂಬರಿಗಳಲ್ಲಿ ಹಲವಾರು ಸ್ತರಗಳ ಹೆಣ್ಣು ಮಕ್ಕಳು ಕಾಣಿಸಿಕೊಳ್ಳುತ್ತಾರೆ. ಇವರನ್ನು ವಿಂಗಡಿಸಿದಾಗ ಮೇಲುವರ್ಗದ ಸ್ತ್ರೀಯರು, ಕೆಳವರ್ಗದ ಸ್ತ್ರೀಯರು, ಅತಿಕೆಳವರ್ಗದ ಶೂದ್ರ ಸ್ತ್ರೀಯರು, ಹಾಗೂ ಗ್ರಾಮೀಣ ಮತ್ತು ಸುಶಿಕ್ಷಿತ ಸ್ತ್ರೀಯರು ಎಂತಲೂ ವಿಭಾಗಿಸಬಹುದು.

ಅಂದಿನ ಪರಿಸರ ಮತ್ತು ಕಾಲದ ದೃಷ್ಟಿಯಿಂದ ನೋಡಿದರೆ ಮೇಲುವರ್ಗ ಅಥವಾ ಕೆಳವರ್ಗದ ಸ್ತ್ರೀಯರಲ್ಲಿ ವ್ಯತ್ಯಾಸಗಳಿವೆ, ಅವರು ಮಾತನಾಡುವ ಭಾಷೆ, ಹಾಕಿಕೊಳ್ಳುವ ಬಟ್ಟೆ, ಬಳಸುವ ಆಹಾರ, ಇತ್ಯಾದಿ ಆಚಾರ ವಿಚಾರಗಳಲ್ಲಿಯೂ ಬದಲಾವಣೆಗಳನ್ನು ಕಾಣಬಹುದು.

ಕಾದಂಬರಿಕಾರರು ಪಾತ್ರ ಚಿತ್ರಣದಲ್ಲಿ ಎಷ್ಟು ಸೂಕ್ಷ್ಮಪ್ರಜ್ಞೆಯನ್ನು ಮೆರೆದಿದ್ದಾರೆ ಎಂಬುದನ್ನು ಗಮನಿಸುವುದು ಅನಿವಾರ್ಯ. ಹೆಗ್ಗಡತಿಯಲ್ಲಿ ಬರುವ ಮೇಲುವರ್ಗದ ಸ್ತ್ರೀಯರಾದ ಗೌರಮ್ಮ, ನಾಗಮ್ಮ, ಸುಬ್ಬಮ್ಮ, ಸೀತೆ, ಲಕ್ಷ್ಮಿ, ಚಿನ್ನಮ್ಮ – ಈ ಪಾತ್ರಗಳಲ್ಲಿ ನಾಗಮ್ಮ, ಗೌರಮ್ಮ, ಮುಂತಾದ ಪಾತ್ರಗಳು ಹಳೆಯ ಕಾಲದ ಗೊಡ್ಡು ನಂಬಿಕೆಗಳನ್ನೆ ನಿಜವೆಂದು ಭಾವಿಸುತ್ತವೆ. ಇಂತಹ ನಂಬಿಕೆಗಳನ್ನು ಚಿತ್ರಿಸುತ್ತಾ ಲೇಖಕರು, ನಾಗಮ್ಮನ ಪಾತ್ರದಲ್ಲಿ ಅವಳಿಗೆ ಅನಾರೋಗ್ಯ ಉಂಟಾಗಿ ಮಗ ಹೋತವನ್ನು ಬಲಿಕೊಡಲಿಲ್ಲವೆಂದು ಅದಕ್ಕೆ ತನಗೆ ಈ ರೀತಿಯಾಯ್ತೆಂದು, "ಎಲ್ಲಾ ಭೂತರಾಯನ ಚೇಷ್ಟೆ ಕಣೋ! ಅದಕ್ಕೆ ಕೊಡೋ ಆಯಾರಾನ ಕೊಡದೆ ಮೋಸಮಾಡಿ ಇಟ್ಟುಕೊಂಡಿಯಲ್ಲೋ! ಅದಕ್ಕೆ ಬದಲಾಗಿ ನನ್ನ ತಗೊಂಡು ಹೋಗ್ಧೆ ಇರ್ತದೇನೋ? ಸಾಕುಬಿಡೋ ನಿನ್ನ ಔಸ್ತಿ! ಔಸ್ತಿಯಿಂದ ಏನಾಗ್ತದೊ? .... ನಾನು ಹೋದ್ರೂ ಚಿಂತೆಯಿಲ್ಲ ಕಣೋ! ನೀನು ನಿನ್ನ ಹೋತ ಸುಖವಾಗಿರ್ರೋ" ಎಂದು ಮೊದಲಾಗಿ ದೀರ್ಘವಾಗಿ ನರಳಲಾರಂಭಿಸಿದರು. – ಈ ಚಿತ್ರಣವನ್ನು ಲೇಖಕರು ನಾಗಮ್ಮನ ಪಾತ್ರದಲ್ಲಿ ತಂದಿರುವುದು. ಒಬ್ಬ ಸಮರ್ಥ ತಾಯಿಯಾದರೂ ಈಕೆ ಸಂಪ್ರದಾಯವೆಂಬ ಗೊಡ್ಡು ನಂಬಿಕೆಗಳಿಂದ ಹೊರಬರಲಾರದವಳು. ಇದಕ್ಕೆ ಕಾರಣ ಅಶಿಕ್ಷಿತಳಾಗಿ ಬೆಳೆದ ಪರಿಸರ, ಬದಲಾಗದ ಮನೋಭಾವ, ಮತ್ತೊಮ್ಮೆ ನಾಗಮ್ಮ ತಮ್ಮ ಎಡತೋಳಿನ ಮೇಲೆ ಒಂದು ಬಿಲ್ಲೆಯಗಲದ ಹಸಿರುಮಚ್ಚೆ ಮೂಡಿದುದನ್ನು ಮಗನಿಗೆ ತೋರಿಸುತ್ತಾ "ದೆಯ್ಯ ಆಯುಸ್ಸೆಷ್ಟಿದೆ ಅಂತಾ ಮೂಸಿ ನೋಡಿಕೊಂಡು ಹೋಗ್ಯದೆ. ಇನ್ನೇನು ನನ್ನ ಕಾಲ ಹತ್ತಿರ ಬಂತು" ಎನ್ನುತ್ತಾರೆ. ಇದು ದುರ್ಬಲ ಮನಸ್ಥಿತಿಯನ್ನು ತೋರಿಸುತ್ತದೆ. – ಈ ಪಾತ್ರ ಕಾಲದ

ದೃಷ್ಟಿಯಿಂದ ಬಹಳ ಮುಖ್ಯವಾದುದು. ಇವಳು ಸಂಪ್ರದಾಯ ಶೀಲಶರಣೆ ಎಂಬುದು ಕೃತಿಕಾರರ ದೃಷ್ಟಿಕೋನವಾಗಿದೆ. ಕುವೆಂಪು ಅವರು ಈ ಪಾತ್ರದಲ್ಲಿ ಆದರ್ಶವನ್ನೇನು ತರಲು ಹೊರಟಿಲ್ಲ. ಬದಲಾಗಿ ಎಲ್ಲಾ ಸ್ತ್ರೀಯರಿಗಿರುವ ಕೋಪ, ಮತ್ಸರ, ಅಸೂಯೆ ಎಲ್ಲವನ್ನು ಈ ಪಾತ್ರದಲ್ಲಿಯೂ ತಂದಿದ್ದಾರೆ. ಇದೇ ವಯಸ್ಸಿನ ಸಂಪ್ರದಾಯಬದ್ಧ ಮತ್ತೊಂದು ಪಾತ್ರ ಗೌರಮ್ಮನದು. ಲೇಖಕರ ದೃಷ್ಟಿಯಲ್ಲಿ ಮೂಡಿರುವುದು ಹೀಗೆ. ಗೌರಮ್ಮನವರಲ್ಲಿ ತರಳೆಯ ವಯ್ಯಾರವು ಪರಿಪಕ್ವವಾಗಿ ಗರತಿಯ ಗಾಂಭೀರ್ಯಕ್ಕೆ ತಿರುಗಿದ್ದಿತು. .... ತಾರುಣ್ಯದ ರಾಗ ವೇಗಗಳೆಲ್ಲ ಮಾಯವಾಗಿ ತುಂಬು ಯೌವ್ವನದ ಪಾವನ ಸ್ನೇಹ, ನಿಃಸ್ವಾರ್ಥತೆ, ಸಹಿಷ್ಣುತೆ ಸಂಯಮಗಳು ಮೈದೋರಿದ್ದವು........... ಇವರನ್ನು ನೋಡಿದರೆ ಕದಳಿಯ ನೆನಪಾಗುತ್ತಿತ್ತು. ಇಂತಹ ಗೌರಮ್ಮ ಮಗಳ ರೋಗದ ಸಂದರ್ಭದಲ್ಲಿ, ಮಗಳ ಶೋಚನೀಯ ಸ್ಥಿತಿಯನ್ನು ಕಂಡ ತಾಯಿಯ ಮನದಲ್ಲಿ ಮರುಕವೂ ಭಯವೂ ಮೂಡಿದ್ದುವು. ಇನ್ನೇನು ಕೆಲದಿನಗಳಲ್ಲಿಯೆ ಮದುವೆಯಾಗಿ ಸಂಸಾರದ ಸುಖ-ಸಂತೋಷಗಳನ್ನು ಅನುಭವಿಸುತ್ತಾಳೆ ಎಂದು ಹಾರೈಸಿದ್ದ ತಮ್ಮ ನೆಚ್ಚಿನ ಕುವರಿಗೆ ಏನು ಅಮಂಗಳವೊದಗುವುದೋ ಎಂದು ಗೌರಮ್ಮನವರಿಗೆ ಶಂಕೆ. ತಾಯಿ ತಂದೆಗಳಿಬ್ಬರೂ ತಮ್ಮ ಕೈಲಾದ ಮಟ್ಟಿಗೆ ಮಗಳ ರೋಗ ನಿವಾರಣೆಗಾಗಿ ಮಾಡುವ ಕಾರ್ಯಗಳನ್ನೆಲ್ಲ ಮಾಡಿದ್ದರು. ವೈದ್ಯರಿಂದ ಔಷಧಿ ಕೊಡಿಸಿದ್ದರು, ಜೋಯಿಸರಿಂದ ಮಂತ್ರ ಹಾಕಿಸಿದ್ದರು, ಗಣಮಗನನ್ನು ಕೇಳಿ ಭೂತಕ್ಕೆ ರಕ್ತಬಲಿ ಹಾಕಿಸಿದ್ದರು. ಧರ್ಮಸ್ಥಳ, ತಿರುಪತಿ, ಸಿಬ್ಬಲುಗುಡ್ಡೆ, ಮೊದಲಾದ ಪವಿತ್ರ ಸ್ಥಾನಗಳ ದೇವರುಗಳಿಗೆ ಮುಡಿಪು ಕಟ್ಟಿದ್ದರು....... ಗೌರಮ್ಮ ಬೆಳ್ಳಿಯ ಎರಡಾಣೆಯನ್ನು ತೊಳೆದು ಸೀತೆಗೆ ಸುತ್ತುಬರಿಸಿ ತಿರುಪತಿ ತಿಮ್ಮಪ್ಪನಿಗೆ ಮುಡಿಪು ಕಟ್ಟಿದರು. – ಗೌರಮ್ಮ ಲೇಖಕರೇ ಹೇಳುವಂತೆ ಸದ್ಗೃಹಿಣಿ. ಅವಳು ಬೆಳೆದ ಕುಟುಂಬ, ಪರಿಸರ, ಅಂದಿನ ಕಾಲ ಅವಳ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರಿತು. ಅದರಿಂದಲೇ ಕೃತಿಕಾರರ ದೃಷ್ಟಿಯಲ್ಲಿ ಈ ರೀತಿ ಮೂಡಿಬಂದಿದೆ. ನಾಗಮ್ಮ ಮತ್ತು ಗೌರಮ್ಮರ ವ್ಯಕ್ತಿತ್ವಗಳು, ಸ್ವಭಾವಗಳು ಅಂದಿನ ಕಾಲಮಾನಕ್ಕೆ ತಕ್ಕ ಹಾಗೆಯೇ ಇತ್ತು.

ಮಲೆಗಳಲ್ಲಿ ಮದುಮಗಳು ಕೃತಿಯಲ್ಲಿ ಬರುವ ಮದುಮಗಳಾದ ಚಿನ್ನಮ್ಮನ ಪಾತ್ರವು ಕೃತಿಕಾರರ ಕೈಮೀರಿ ಬೆಳೆದಿದೆ. ಅವರು ನೋಡಿದ ದೃಷ್ಟಿಕೋನ ಬಾಲ್ಯದಲ್ಲಿಯೇ ಚಿನ್ನಮ್ಮ-ಮುಕುಂದಯ್ಯರು ಬಾಳ ಸಂಗಾತಿಯಾಗುವುದನ್ನು ಸೂಚ್ಯವಾಗಿ ತಿಳಿಸುತ್ತದೆ. ಈ ಪಾತ್ರದ ಚಿತ್ರಣದಲ್ಲಿ ಲೇಖಕರ ಮನೋಧರ್ಮ ವಿಶಿಷ್ಟವಾಗಿಯೇ ಬೆಳೆದಿದೆ. ಇವಳ ಚಿಕ್ಕಂದಿನ ಪರಿಸರ ಕುಸಂಸ್ಕೃತಿಯಿಂದ ಬೆಳೆದಿದ್ದರೂ, ಯೌವ್ವನಕ್ಕೇ ಬಂದಂತೆ ಆಕೆಯ ಚಿತ್ರಣವೇ ಬದಲಾಗುತ್ತದೆ. ಕಾದಂಬರಿಯ ಬೆಳವಣಿಗೆಯಲ್ಲಿ ಬಹಳ ಮುಖ್ಯವೆನಿಸುತ್ತದೆ. ಅಜ್ಜಿಯೊಡನೆ ಕೋಣೂರಿಗೆ

ಹೋಗುವಾಗ ತಾನೆ ದಾರಿ ತಿಳಿದಂತೆ ನಡೆಯುವುಧು, ಮುಕುಂದಯ್ಯ ಯಾರೆಂದು ಕೋಣೂರಮ್ಮ ಕೇಳಿದಾಗ 'ಅವರು' ಎಂಬುದು, ಕೋಣೂರ ಮನೆಯನ್ನು ನಮ್ಮ ಮನೆ ಬಂತಲ್ಲ ಎಂಬುದು, ಇದು ಅತ್ಯಂತ ವಾಸ್ತವವಾಗಿ ಚಿತ್ರಿತವಾಗಿದೆ. ಪೀಂಚಲು ಜೊತೆ ಬಂದಂತಹ ಚಿನ್ನಮ್ಮ ಮಾರಮ್ಮನ ಗುಡಿಯಲ್ಲಿ ನಮಸ್ಕರಿಸುವುದು, ದೀರ್ಘಕಾಲದವರೆಗೂ ಏಳದಿದ್ದಾಗ, ಪೀಂಚಲು ಗಾಬರಿಯಾಗುವುದು, ಮುಂದೆ ಮುಕುಂದಯ್ಯನು ಬಂದಾಗಲೂ ಸಂಪೂರ್ಣ ಎಚ್ಚರವಾಗದೆ, ಯವುದೋ ದಿವ್ಯ ಅತೀತ ಶಕ್ತಿಯ ಅಧೀನದಲ್ಲಿಯೆ ವರ್ತಿಸುವಂತೆ ಇರುವುದು. ಈ ಎಲ್ಲಾ ಅಂಶಗಳಲ್ಲಿ ಲೇಖಕರ ದೃಷ್ಟಿಕೋನ ಬೇರೆ ಪಾತ್ರಗಳಿಗಿಂತ ವಿಭಿನ್ನವಾಗಿ ವ್ಯಕ್ತವಾಗಿರುವುದನ್ನು ಕಾಣಬಹುದು. ಕಾದಂಬರಿಕಾರರು ಅದನ್ನು ಅರ್ಥಪೂರ್ಣವಾಗಿ ಉಪಯೋಗಿಸಲು ಶಕ್ತರಾಗಿಲ್ಲ. ಎಂಬ ವಿಮರ್ಶೆಯಿದೆ. ಆದರೆ ಚಿನ್ನಮ್ಮ-ಮುಕುಂದಯ್ಯರ ಪಾತ್ರದಲ್ಲಿ ಜನ್ಮಾಂತರದಂತಹ ಅತೀಂದ್ರಿಯ ವಿಷಯಗಳನ್ನು ಲೇಖಕರು ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ. ಚಿನ್ನಮ್ಮ ಮಾರಮ್ಮನ ದೇವಸ್ಥಾನದಲ್ಲಿ ಅಡ್ಡಬೀಳುವಾಗ ಇತ್ತ ಕಲ್ಕತ್ತಾದ ವರಾಹನಗರ'ದಲ್ಲಿದ್ದ ಸನ್ಯಾಸಿಗೆ ಆಗುವ ಅನುಭವ. "ನಿಜವಾಗಿಯೂ ತನ್ನ ಸುತ್ತಲೂ ಭಯಂಕರ ಅರಣ್ಯ! ಮಳೆ ಬೀಳುತ್ತಿದೆ! ಗಾಳಿ ಬೀಸುತ್ತಿದೆ! ಭವತಾರಿಣಿಯ ಪೂಜಾಮೂರ್ತಿಯಿದ್ದೆಡೆ ಮಣ್ಣಿನ ಅರ್ಧಗೋಡೆಯ, ಓಡು ಹೆಂಚು ಹೊದಿಸಿದ, ಒಂದು ಗುಡಿ ಕಾಣಿಸುತ್ತಿದೆ! ಒಂದು ಹಣತೆಯ ಸೊಡರು, ಬೆಳಕಲ್ಲದ ಬೆಳಕು ಬೀರಿ, ಗಾಳಿಗೆ ನಡುಗುತ್ತಿದೆ! ಹುಡುಗಿಯ ಆಕಾರವೊಂದು ವಿಗ್ರಹದ ಕಲ್ಲಿಗೆ ಅಡ್ಡಬಿದ್ದಿದೆ! ಪಕ್ಕದಲ್ಲಿ ಇನ್ನೊಂದು ಹುಡುಗಿಯ ಆಕಾರ ನಿಂತಿದೆ!.............. ತಾನು ಕಂಡ ಆ ಹೆಣ್ಣು ಮಗಳ ಸಂಕಟ ಏನಿದ್ದರೂ ಪರಿಹಾರವಾಗಿ, ಆಕೆಗೆ ತಾಯಿ ಕೃಪೆಮಾಡಲಿ! ಎಂದು ಮನದಲ್ಲಿಯೆ ಹರಸಿ ತಾನು ಕಂಡ ಆ ಹೆಣ್ಣುಮಗಳ ಮೊಮ್ಮಕ್ಕಳಲ್ಲಿ, ಅಂದರೆ ಮಗಳ ಮಕ್ಕಳಲ್ಲಿ ಒಬ್ಬಾತನು ತನ್ನಿಂದಲೇ ದೀಕ್ಷೆ ಪಡೆದು ಮಹಾಸಂಘದ ಸಂನ್ಯಾಸಿ ಸದಸ್ಯನಾಗುತ್ತಾನೆ. ಹೀಗೆ ಚಿನ್ನಮ್ಮನ ಪಾತ್ರದಲ್ಲಿನ ಅತೀಂದ್ರಿಯ ವಿಷಯವನ್ನು ಸೂಕ್ಷ್ಮವಾಗಿ ತುಂಬಿದ್ದಾರೆ.

ಶ್ರೀ ರಾಮಯಣದರ್ಶನಂನಲ್ಲಿ ರಾವಣನ ಸಂದರ್ಭದಲ್ಲಿ ಬಳಸಿಕೊಂಡಿರುವ ಪುನರ್ಜನ್ಮದ ಕಲ್ಪನೆ ಚಿನ್ನಮ್ಮನಿಗೆ ಹುಟ್ಟುವ ಮಗುವಿನ ವಿಚಾರದಲ್ಲಿಯೇ ಬಳಕೆಯಾಗಿದೆ.

ಇದೇ ರೀತಿಯ ಕಾದಂಬರಿಯ ಮತ್ತೊಬ್ಬ ಮದುಮಗಳಾದ ತೀರಾ ಕೆಳಜಾತಿಯ ಹೆಣ್ಣು ತಿಮ್ಮಿ, ಕೆಳವರ್ಗದ ಪಾತ್ರವನ್ನು ಉತ್ತುಂಗಕ್ಕೇರಿಸಿರುವುದು ಕುವೆಂಪು ಅವರ ಸೋಪಜ್ಞತೆಗೆ ಸಾಕ್ಷಿಯಾಗಿದೆ. ಗುತ್ತಿಯೊಡನೆ ಹುಲಿಕಲ್ಲು ನೆತ್ತಿಯಲ್ಲಿ ತಂಗಿದಾಗ, ಅವಳು ಕಾಣುವ ದರ್ಶನ. ಚಿನ್ನಮ್ಮನನ್ನು ನೆನೆಸಿಕೊಂಡು ಮಲಗಿರುವಾಗ, "ತಿಮ್ಮಿ ಬೆರಗಾಗಿ ನೋಡುತ್ತಾಳೆ, ಕಲ್ಲುಮಂಟಪದ ಇದಿರಿನಲ್ಲಿದ್ದ ಹಾಸುಬಂಡೆಯ ಮೇಲೆ ಒಂದು ಕುದುರೆ ನಿಂತಿದೆ! ಸೈನಿಕ ವೇಷದಲ್ಲಿರುವ ಒಬ್ಬ ಸವಾರ ಅದರ ಮೇಲೆ ಕೂತು ಲಗಾಮು ಹಿಡಿದಿದ್ದಾನೆ. ಯಾರನ್ನೋ ನಿರೀಕ್ಷಿಸುವಂತೆ ಎಡಕ್ಕೂ ಬಲಕ್ಕೂ ನೋಡುತ್ತಿದ್ದಾನೆ, ಅಷ್ಟರಲ್ಲಿ ತರುಣಿಯೊಬ್ಬಳು ಕುದುರೆಯೆಡೆಗೆ ಓಡಿ ಬಂದು ಕೈನೀಡುತ್ತಾಳೆ. ಅವಳು ಬಾಸಿಂಗ ಕಟ್ಟಿ, ಒಡವೆ ತೊಟ್ಟು ಮದುಮಗಳ ವೇಷದಲ್ಲಿದ್ದಾಳೆ. ಸವಾರನು ಬಾಗಿ ಅವಳನ್ನೆತ್ತಿ ತನ್ನ ಮುಂದೆ ಕುದುರೆಯ ಮೇಲೆ ಕೂರಿಸಿಕೊಂಡೊಡನೆ ಕುದುರೆ ಹಾಸುಬಂಡೆಯ ಮೇಲೆ ಖುರಪುಟ ಧ್ವನಿಯೆಳುವಂತೆ ಚಿಮ್ಮಿನೆಗೆದು ಓಡಿ ಕಣ್ಮರೆಯಾಗುತ್ತದೆ". – ಇದು ತಿಮ್ಮಿಯನ್ನು ನಡುಗಿಸುವ ಘಟನೆ. ಆದರೆ ಮುಂದೆ ಚಿನ್ನಮ್ಮನ ಜೀವನದಲ್ಲಾಗುವ ಘಟನೆಯನ್ನೇ ಇದು ಧ್ವನಿಸುತ್ತದೆ. ಅವಳ ಮುಗ್ಧಮನಸ್ಸಿಗೆ ಇದು ಅರ್ಥವಾಗದಿದ್ದರೂ ಒಂದೇ ಹೋಲಿಕೆಯ, ಒಂದೇ ಮನೋಧರ್ಮದಲ್ಲಿ ಲೇಖಕರಲ್ಲಿ ಕೇಂದ್ರೀಕೃತವಾಗಿವೆ. ತಿಮ್ಮಿಯು ಸೂರ್ಯೋದಯವನ್ನು ನೋಡುವ ಅದಕ್ಕೆ ಸ್ಪಂದಿಸುವ ರೀತಿ, ಅವಳ ಮನಸ್ಸಿನಾನಂದ, ಅದ್ಭುತವಾಗಿ ಮೂಡಿವೆ, ತೀರಾ ಸಾಮಾನ್ಯವಾದ ಪಾತ್ರಗಳೂ ಕೂಡ ಜನಾಂಗದ ಶ್ರೀಮಂತ ಸುಪ್ತಸ್ಮೃತಿಗಳಿಗೆ ವಾರಸುದಾರರಾಗುವ ನಿಗೂಢದ ಬಗ್ಗೆ ಗಾಢವಾದ ಪ್ರೀತಿಯನ್ನು ವಿಸ್ಮಯವನ್ನು ಕುವೆಂಪು ತೋರಿಸುತ್ತಾರೆ. ಅವರ ಪಾತ್ರಗಳು ವೈಯಕ್ತಿಕ ಬದುಕಿನ ಮಿತಿಗಳನ್ನು ಮೀರುತ್ತ ಅಗಾಧವಾದ ರೀತಿಯಲ್ಲಿ ಹೊಸಹುಟ್ಟು ಪಡೆಯುತ್ತಾ ಹೋಗುತ್ತದೆ.

ಬದುಕಿನ ಅನಾವರಣ ಮಾಡಲು ಹೊರಟಿರುವ ಕುವೆಂಪು ಅವರು ನಿಸ್ಸಂಶಯವಾಗಿಯೂ ವಾಸ್ತವ ಬದುಕನ್ನು ಹಿಡಿದಿರುವಲ್ಲಿ ಯಶಸ್ವಿಯಾಗಿದ್ದಾರೆ. ಪೀಂಚಲುವಿನ ಪಾತ್ರದಲ್ಲಿ ತಿಮ್ಮಿಯ ಪಾತ್ರದಲ್ಲಿರುವಂತೆ ಯಾವ ದರ್ಶನ/ಕಾಣ್ಕೆ ಇಲ್ಲದಿದ್ದರೂ, ಸರಳ, ಸುಂದರ, ಚಲನಶೀಲ ವ್ಯಕ್ತಿಯಾಗಿ ನಿಂತಿದ್ದಾಳೆ. ಎಷ್ಟು ಸಹಜವಾಗಿ ಪಾತ್ರವನ್ನು ತರಲು ಸಾಧ್ಯವೋ ಅಷ್ಟೇ ಸರಳವಾಗಿ/ಸಹಜವಾಗಿ ವಾಸ್ತವಕ್ಕೆ ಹತ್ತಿರವಾದಂತೆ ತರುತ್ತಾರೆ. ಅವಳು ಗಂಡನೊಂದಿಗಿರುವ ರೀತಿ ಅಶ್ಲೀಲತೆಯ ಸೋಂಕಿಲ್ಲದ ಜೀವನ, ನಿಷ್ಕಲ್ಮಶ ಪ್ರೇಮ, ತನ್ನನ್ನೆ ಅರ್ಪಿಸಿಕೊಳ್ಳುವುದು, ಜಾತಿಯಿಂದ ಕೀಳಾದರೂ ಎಲ್ಲರಿಗೂ ಮಾದರಿ ಇವಳು.

ಚಿಕ್ಕಂದಿನಿಂದಲೂ ಗಂಡುಬೀರಿಯಂತಿದ್ದರೂ ವಯೊಸಹಜ ಗುಣಗಳು ಇವಳಲ್ಲಿವೆ. ಕೆಳವರ್ಗದ ಪಾತ್ರವಾದರೂ ಕೃತಿಕಾರರ ದೃಷ್ಟಿಯಲ್ಲಿ ಮೇಲುವರ್ಗಕ್ಕೂ ಸವಾಲೆಸೆಯುವಂತಿದ್ದಾಳೆ. ಅವಿದ್ಯಾವಂತೆಯಾದರೂ ಸುಸಂಸ್ಕೃತೆ. ಐತ ಪೀಂಚಲುವನ್ನು ಅನುಮಾನಿಸಿದಾಗ....... ತಾನು ಪೀಂಚಲುವನ್ನು ಮದುವೆಯಾಗುವ ಮುನ್ನ ಪೀಂಚಲು ಪರವಾಗಿದ್ದ ಮುಕುಂದಯ್ಯನ ವರ್ತನೆಯನ್ನು ಚಿಂತಿಸಿದನು......... ಮುಕುಂದಯ್ಯ ಪೀಂಚಲು ಅವರ ಪರಸ್ಪರವಾದ ಸರಳ ಸ್ನೇಹ ವರ್ತನೆಯನ್ನು ಸಂಶಯಕ್ಕೊಳಗಾದ ಮನಸ್ಸು, ಹೇಗೆ ಬೇಕಾದರೂ ಯೋಚಿಸಬಹುದಿತ್ತು......... ತನ್ನಿಂದ ಪೀಂಚಲು ಏನನ್ನೋ ಮುಚ್ಚಿಡುತ್ತಿದ್ದಾಳೆ ಎನಿಸಿ, ಪರೀಕ್ಷೆ ಮಾಡಲು ಹೋಗುತ್ತಾನೆ. ಅದರಲ್ಲಿ ಸೋತು ಪಶ್ಚಾತಾಪ ಪಡುತ್ತಾನೆ. ಏಕೆಂದರೆ ಪೀಂಚಲುವಿನದು ಕೆಳಜಾತಿಯಾದರೂ ಪರಿಶುದ್ಧವಾಗ ವ್ಯಕ್ತಿತ್ವ. ಹೀಗೆ ಕೃತಿಕಾರನ ದೃಷ್ಟಿಕೋನ ಚಿತ್ರಿತವಾಗಿದೆ.

ಹೆಗ್ಗಡತಿಯಲ್ಲಿ ಸೀತೆಯ ಪಾತ್ರದಲ್ಲಿ ಕುವೆಂಪುರವರ ದೃಷ್ಟಿ ಆದರ್ಶಪ್ರಿಯತೆ, ಭಾವನಾ ಜೀವನ ತುಸು ಹೆಚ್ಚೆಂದೇ ಹೇಳಬೇಕು. ಮುತ್ತಳ್ಳಿಯಂತಹ ಹಳ್ಳಿಯ ಸುಸಂಸ್ಕೃತ ಮನೆತನದವಳಾದ ಈಕೆ ತನ್ನ ಮನಸ್ಸಿನಲ್ಲಿರುವುದನ್ನೆ ಈಡೇರಿಸಿಕೊಳ್ಳಲಾರದೆ ಮನೋರೋಗಿಯಾಗುತ್ತಾಳೆ. ಕುವೆಂಪು ಇಲ್ಲಿ ಮನಃಶಾಸ್ತ್ರದ ಹಿನ್ನೆಲೆಯ ದೃಷ್ಟಿಕೋನದಿಂದ ನೋಡುತ್ತಾರೆ. ಯಾವುದೇ ವ್ಯಕ್ತಿ ಏನನ್ನಾದರೂ ಬಹುವಾಗಿ ಮನಸ್ಸಿಗೆ ಹಚ್ಚಿಕೊಂಡು ಅದರಿಂದ ನೋವಾದಾಗ/ದೂರವಾದಾಗ ಆಗುವ ದುಃಖ ಅಪಾರವಾದುದು. ಆಗ ಆ ವ್ಯಕ್ತಿಯ ಕಣ್ಣಿಗೆ ಎಷ್ಟೇ ಸುಂದರವಾದ ಪರಿಸರವೂ ಭಯಂಕರವಾಗಿಯೂ ಸುತ್ತಮುತ್ತಲಿನವರೂ ಕ್ರೂರಿಗಳಾಗಿ ಕಾಣಿಸುತ್ತಾರೆ. ಕುವೆಂಪು ಸೀತೆಯ ಪಾತ್ರದಲ್ಲಿ ತಂದಿರುವುದು ಇದನ್ನೆ. ಹೂವಯ್ಯನನ್ನೆ ಪ್ರೀತಿಸಿ ಮದುವೆಯಾಗುತ್ತೇನೆಂದು ಕನಸು ಕಂಡವಳಿಗೆ ಒಂದೇ ಕ್ಷಣಕ್ಕೆ ಕನಸೆಲ್ಲಾ ಭಗ್ನವಾದಾಗ, ಅವಳು ಭಗ್ನಪ್ರೇಮಿ. ಅವಳು ಬೆಳೆದ ಪರಿಸರದ ದೃಷ್ಟಿಯಿಂದ ನೋಡಿದರೆ, ಯಾವುದೇ ಆಸೆ ಆಕಾಂಕ್ಷೆಗಳನ್ನು ವ್ಯಕ್ತಪಡಿಸಲಾಗದ ಸಂದಿಗ್ಧತೆ ಕೃಷ್ಣಪ್ಪನೊಡನೆ ಮದುವೆ ನಿಶ್ಚಯವಾದಾಗಲೇ ರೋಗ ಶುರುವಾಗುತ್ತದೆ ಅದು ಕನಸಾಗಿ ಬಂದು ಕಾಡುತ್ತದೆ. ಸೀತೆ ಮಲಗಿರುವಾಗ ಕಾಡಿನಲ್ಲಿ ತಾನೊಬ್ಬಳೆ ಹೋದಂತೆ, ತನ್ನನ್ನು ಎಲ್ಲರು ಕಾಡುಪಾಲು ಮಾಡಿದಂತೆ ಕನಸುಕಾಣುತ್ತಾಳೆ. ಅಷ್ಟೇ ಅಲ್ಲದೆ ಮುಂದೆ...... ಸೀತೆಯ ಹೃದಯ ಬಾಯಿಗೆ ಬಂದಂತಾಗಿ ನೋಡುತ್ತಾಳೆ. ಭೀಷಣವಾದ ಭೀಮಾಕಾರದ ಹೆಬ್ಬುಲಿಯೊಂದು ಮನುಷ್ಯನೊಬ್ಬನನ್ನು ಅರೆಯಟ್ಟಿ ಬರುತ್ತಿದೆ. ಹೆಬ್ಬುಲಿ ಆರ್ಭಟಿಸುತ್ತಿದೆ, ಅಟ್ಟುತ್ತಿದೆ. ಮನುಷ್ಯ ನಿಸ್ಸಹಾಯಕನಾಗಿ ಕೂಗುತ್ತಾ ಓಡುತ್ತಿದ್ದಾನೆ. ಸೀತೆ ಕಲ್ಲಾಗಿ ನಿಂತು ರೆಪ್ಪೆಹಾಕದೆ

ನೋಡುತ್ತಿದ್ದಾಳೆ. ಹಾ! ಓಡುತ್ತಿರುವವನು ಸೀತೆ ಮನೆ ಸಿಂಗಪ್ಪಗೌಡರ ಮಗ ಕೃಷ್ಣಪ್ಪನಲ್ಲವೆ! ಅಯ್ಯೋ, ಆಗಿ ಹೋಯಿತು! ಇನ್ನೇನು ಹುಲಿ ಹಿಡಿದು ಬಿಡುತ್ತದೆ! ಇಲ್ಲ! ಕೃಷ್ಣಪ್ಪ ಪಕ್ಕಕ್ಕೆ ಬಳುಕಿ ನೆಗೆದು ತಪ್ಪಿಸಿಕೊಂಡು ಓಡುತ್ತಿದ್ದಾನೆ! ಅಯ್ಯಯ್ಯೋ ಸೀತೆಯ ಕಡೆಗೆ ಬರುತ್ತಿದ್ದಾನೆ...... ಓಡುತ್ತಿರುವವನು ಕೃಷ್ಣಪ್ಪನಲ್ಲ! ಮತ್ತಾರು? ಕಾನೂರು ಚಂದ್ರಯ್ಯಗೌಡರ ಮಗ ರಾಮಯ್ಯ! ಸೀತೆ ಇದ್ದಕ್ಕಿದ್ದ ಹಾಗೆ "ರಾಮಯ್ಯ ಭಾವ!" ಎಂದು ಕೂಗಿಕೊಂಡಳು. – ಹೀಗೆ ಸೀತೆಯ ಕನಸು ವಾಸ್ತವಕ್ಕೆ ಎಷ್ಟು ಹತ್ತಿರವಾಗಿದೆ ಎಂದರೆ ಅವಳ ಜೀವನದಲ್ಲಿ ಬರುವ ವ್ಯಕ್ತಿಗಳನ್ನೆ ಕನಸಿನಲ್ಲಿಯೂ ಕಾಣುವುದಲ್ಲದೆ. ಕೃಷ್ಣಪ್ಪನನ್ನು ಹುಲಿ ತಿನ್ನುವ ಘಟನೆಯೂ ನಿಜ ಜೀವನದಲ್ಲಿ ಸಂಭವಿಸುತ್ತದೆ. ಕನಸುಗಳು ಸುಪ್ತ ಮನಸ್ಸಿನ ಸ್ಪಷ್ಟ ಚಿತ್ರಗಳು ಎಂಬಂತೆ ಮುಂದೆ ರಾಮಯ್ಯನು ಆಸರೆಯಾಗುವುದಿಲ್ಲ, ಹೂವಯ್ಯನೆ, ಆಸರೆಯಾಗುವವನು ಎಂಬುದನ್ನು ಸ್ಪಷ್ಟವಾಗಿ ಕಾದಂಬರಿ ತಿಳಿಸುತ್ತದೆ.

ಲೇಖಕರೆ ಹೇಳಿದಂತೆ ಮನುಷ್ಯನ ಜಾಗ್ರದವಸ್ಥೆಯ ಜೀವನ ಮಹಾದ್ಭುತವಾಗಿದೆ. ಆದರೆ ಸ್ವಪ್ನ ಜಗತ್ತು ಅದ್ಭುತಕರವಾದುದು....... ಕಲ್ಪನೆಗೂ ಅಸಾಧ್ಯವಾದ ಸನ್ನಿವೇಶಗಳು, ಘಟನೆಗಳು ಸ್ವಪ್ನರಾಜ್ಯದಲ್ಲಿ ನಿರಂಕುಶವಾಗಿ ಸಾಗಿಹೋಗುತ್ತವೆ...... ಜಾಗ್ರತಾವಸ್ಥೆಯ ಬಯಕೆಗಳು ಭಯಗಳಿಗೆ ನಿದ್ದೆಯ ಲೋಕದಲ್ಲಿ ಕನಸುಗಳ ರೀತಿಯಲ್ಲಿ ಜರುಗಿ ಕೈಗೂಡುತ್ತವೆ ಎಂದು ಮನಶಾಸ್ತ್ರಜ್ಞರ ಅಭಿಪ್ರಾಯ, ಪ್ರಾಯ್ಡ್‌ನ ಮನಃಶಾಸ್ತ್ರ ವಿಶ್ಲೇಷಣೆಯನ್ನು ತರುತ್ತಾರೆ. ಸೀತೆಯ ಪಾತ್ರದಲ್ಲಿ ಪ್ರೇಮಭಂಗವು ಅನೇಕ ಅನಾಹುತಗಳಿಗೆ, ಉನ್ಮಾದಗಳಿಗೆ ಕಾರಣವಾಗುತ್ತದೆ. ಅದಕ್ಕಾಗಿಯೇ ಆತ್ಮಹತ್ಯೆಯಂತಹ ವಿಫಲಯತ್ನವೂ ನಡೆಯುತ್ತದೆ ಅವಳ ಬಾಳಿನಲ್ಲಿ. ಭಾವಜೀವಿಯಾದ ಈಕೆ, ಹೂವಯ್ಯನೆತ್ತರಕ್ಕೆ ಏರಿ, ಅವನ ಭಾವನೆಗಳಿಗೂ ಸ್ಪಂದಿಸುತ್ತಾಳೆ.

ಸುಬ್ಬಮ್ಮನದು ಪ್ರಯತ್ನಗಳ ಕತೆಯಾದರೆ. ಸೀತೆಯದು ಪರಿಣಾಮದ ಕಥೆ. ಸೀತೆಯ ಭಾವವಿಕಾಸ ಹೂವಯ್ಯನ ಪ್ರಭಾವದ ಪರಿಣಾಮವೆಂಬಂತೆ ಮೂಡುವ ಕತೆ. ಸೀತೆ–ಹೂವಯ್ಯನ ಸಂಬಂಧ ಒಂದು ಸ್ತರದಲ್ಲಿ ಪ್ರೇಂಮಿಗಳ ಸಂಬಂಧವಾಗಿದ್ದರೆ, ಇನ್ನೊಂದು ಸ್ತರದಲ್ಲಿ ಗುರು–ಶಿಷ್ಯಯರದು. ಅನುಕರಣದಿಂದ ಆರಂಭವಾಗಿ ತನ್ನ ವ್ಯಕ್ತಿತ್ವಕ್ಕೆ ಒಗ್ಗುವಷ್ಟು ಅರಗಿಸಿಕೊಂಡು ಗಟ್ಟಿಯಾಗಿ, ದಿಟ್ಟವಾಗಿ ಬೆಳೆಯುವ ಸೀತೆಯ ವ್ಯಕ್ತಿತ್ವ ಹೂವಯ್ಯನ ಆದರ್ಶಗಳ ಭರವಸೆಯೆಂಬಂತಿದೆ. ಬಲವಂತದ ಮದುವೆಯ ಸಂದರ್ಭದಲ್ಲೆಲ್ಲ ಅವಳ ವ್ಯಕ್ತಿತ್ವ ಅವಳಿಗರಿವಿಲ್ಲದಷ್ಟು ಉಗ್ರವಾಗಿ ಪ್ರತಿಭಟಿಸಿದೆ. ಸೀತೆಯ ಪ್ರಬುದ್ಧತೆಯು ಹೂವಯ್ಯನನ್ನು ಮೀರಿಸುವಷ್ಟು ಬೆಳೆದಿದೆ ಎಂದರೆ ತಪ್ಪಾಗಲಾರದು. ಲೇಖಕರು ಹೊಸ ತಲೆಮಾರಿನಲ್ಲಿ, ಆಧುನಿಕ ದೃಷ್ಟಿಕೋನದಿಂದ ಆದರ್ಶ ವ್ಯಕ್ತಿತ್ವವನ್ನೇ ಸೀತೆಯಲ್ಲಿ ಕಾಣುತ್ತಾರೆ.

ಅತ್ಯಂತ ಸಂಯಮ, ಸಹನೆಯ ಜೀವನ ನಡೆಸಿದ ಇವಳು ಕಾದಂಬರಿಯಲ್ಲಿ ಉತ್ತುಂಗ ಶಿಖರಕ್ಕೇರುವ ಪಾತ್ರವಾಗುತ್ತಾಳೆ. ಹೂವಯ್ಯನ ಸಂಗದಿಂದ ಸುಸಂಸ್ಕೃತೆ ಸುಶೀಕ್ಷಿತೆಯಾಗಿ ಗೃಹಸ್ಥಜೀವನ ತ್ಯಜಿಸಿದ ತ್ಯಾಗಮಯಿ ಈಕೆ. ಶ್ರೀ ರಾಮಾಯಣದ ಸೀತೆಯಷ್ಟೆ ಸಹನೆಯನ್ನು ಇವಳಲ್ಲಿ ತುಂಬಿದ್ದಾರೆ ಕುವೆಂಪು. ಹಳೆಯ ಗೊಡ್ಡು ಸಂಪ್ರದಾಯವನ್ನು ತೊಡೆದು, ಹೊಸ ಕಾಲದ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಧೀರೆ.

ಸುಬ್ಬಮ್ಮನ ಪಾತ್ರದಲ್ಲಂತೂ ಕುವೆಂಪು ಅವರು ಹೆಗ್ಗಡತಿಗಿರಬೇಕಾದ ಗುಣಾವಗುಣಗಳನ್ನು ಸೂಕ್ಷ್ಮವಾಗಿ ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ. ಅಂದಿನ ಸಮಾಜಿಕ ಪರಿಸರ ಒಂಟಿ ಹೆಣ್ಣನ್ನು ನೋಡುವ ದೃಷ್ಟಿಯನ್ನು ಅತ್ಯುತ್ತಮವಾಗಿ ಬಿಂಬಿಸಿದ್ದಾರೆ. ಯಾರಿಗೆ ಆದರೂ ಅಧಿಕಾರ ಸಿಕ್ಕರೆ ಅದರ ಮದ ಸುಮ್ಮನೆ ಬಿಡುವುದಿಲ್ಲ ಎಂಬುವ ಅಂಶವನ್ನು ತಂದಿದ್ದಾರೆ. ಬಡತನದಿಂದ ಶ್ರೀಮಂತಿಕೆಯ ರುಚಿ ನೋಡಿದವರ ತಲೆ ಹೇಗೆ ತಿರುಗುತ್ತದೆ ಎಂಬುದನ್ನು ಹೆಜ್ಜೆಹೆಜ್ಜೆಗೂ ಸುಬ್ಬಮ್ಮನಲ್ಲಿ ಅತ್ಯಂತ ಸೂಕ್ಷ್ಮವಾಗಿ, ಸರಳವಾಗಿ ಹಿಡಿದಿಡುತ್ತಾರೆ.

ಹೀಗೆ ಕೃತಿಕಾರನ ದೃಷ್ಟಿಕೋನ ಪಾತ್ರ ಚಿತ್ರಣದಲ್ಲಿ ಒಂದೊಂದು ರೀತಿಯಲ್ಲಿ ವ್ಯಕ್ತವಾಗಿರುವುದನ್ನು ಕಾಣಬಹುದು ಅತಿ ಚಿಕ್ಕ ಪಾತ್ರಗಳಾದ ಕಾವೇರಿಯ ತಾಯಿ ಅಂತಕ್ಕ, ತಿಮ್ಮಿಯ ತಾಯಿ ಸೇಸಿ, ರಂಗಮ್ಮ, ಅಕ್ಕಣಿ ಹೀಗೆ ಒಂದೊಂದು ತನ್ನದೇ ಆದ ರೀತಿಯಲ್ಲಿ ಕುಡಿಹೊಡೆದಿವೆ.

೨. **ಪಾತ್ರಗಳಲ್ಲಿ ಕಂಡು ಬರುವ ವೈವಿಧ್ಯ :** ಪಾತ್ರಗಳೇ ಕೃತಿಯ ಜೀವಾಳ. ಆದ್ದರಿಂದಲೇ ಪಾತ್ರ ಸೃಷ್ಟಿಯಲ್ಲಿಯೇ ಕೃತಿಕಾರನ ಜಾಣ್ಮೆ ಅಡಗಿರುವುದು. ಯಾವುದೇ ಕೃತಿಯಾದರೂ ಅದು ವಿಭಿನ್ನವಾಗಿರಬೇಕು, ಹಾಗಿದ್ದರೆ ಮಾತ್ರ ಕೃತಿ ಯಶಸ್ಸು ಕಾಣಲು ಸಾಧ್ಯ. ಈ ಎರಡೂ ಕಾದಂಬರಿಗಳು ಯಶಸ್ವಿಯಾಗಲು ಕಾರಣ ಇಲ್ಲಿನ ಪಾತ್ರಗಳ ವೈವಿಧ್ಯದಿಂದ. ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಮಾನವ ಸಹಜ ಪ್ರವೃತ್ತಿಗಳ ಅಭಿವ್ಯಕ್ತಿಯನ್ನು ಕಾಣಬಹುದು. ಜೀವನವನ್ನು ಯಥಾವತ್ತಾಗಿ ನೋಡುವ ಅನುಭವಿಸುವ ಮತ್ತು ಕಲೆಯಾಗಿ ರೂಪಿಸುವ ಪ್ರಾಮಾಣಿಕ ಪ್ರಯತ್ನ ಇಲ್ಲಿದೆ. ಹಾಗೆಯೇ ಮಲೆನಾಡಿನ ದಟ್ಟ ಕಾಡಿನ ನಡುವೆ ಬದುಕುತ್ತಿರುವ ಇಲ್ಲಿನ ಪಾತ್ರಗಳು ಮಣ್ಣಿನ ಮಕ್ಕಳೇ ಆಗಿದ್ದಾರೆ. ಯಾವ ಕೃತಕತೆಯ ಸೋಂಕು ಇಲ್ಲದ ಪಾತ್ರಗಳು ಜೀವಂತವೆನಿಸುತ್ತವೆ.

ಕಾನೂರು ಹೆಗ್ಗಡತಿ ಮದುಮಗಳಿಗಿಂತ ಹಿಂದಿನದಾದರೂ ಇಲ್ಲಿನ ಪಾತ್ರಗಳು, ವಾಸ್ತವವಾದಿಗಳು ಜೊತೆಗೆ ಭಾವನಾಲೋಕದ ಆದರ್ಶವಾದಿಗಳು. ಈ ಎರಡೂ ಕೃತಿಗಳಿಗೂ ದಶಕಗಳ ಅಂತರವಿದ್ದರೂ, ಎರಡರಲ್ಲಿಯೂ ಪರಿಸರವೇ ಅಥವಾ ಪ್ರಕೃತಿಯೇ ಪ್ರಮುಖ ಪಾತ್ರವಹಿಸಿದ್ದರೂ, ಹೆಗ್ಗಡತಿಯಲ್ಲಿ ಶಿಕ್ಷಣದ ಪ್ರಭಾವವಿದೆ, ಮದುಮಗಳಿನಲ್ಲಿ ಶಿಕ್ಷಣಕ್ಕೆ ಅಷ್ಟಾಗಿ ಮಹತ್ವವಿಲ್ಲ.

ಪಾತ್ರಗಳ ವೈವಿಧ್ಯದಲ್ಲಿ ಮೇಲುವರ್ಗ, ಕೆಳವರ್ಗ ಎರಡನ್ನು ಗಮನಿಸಿದಾಗ ಕುವೆಂಪುರವರ ಸೃಜನಶೀಲ ಪ್ರತಿಭೆಯಲ್ಲಿ ಎರಡೂ ವರ್ಗದ ಪಾತ್ರಗಳು ಕೂಡ ಬಹಳ ಅದ್ಭುತವಾಗಿ ಮೂಡಿ ಬಂದಿವೆ. ಸಾಮಾಜಿಕ, ಸಾಂಸ್ಕೃತಿಕ, ಕೌಟುಂಬಿಕ ಹಿನ್ನೆಲೆಯಲ್ಲಿ ಇಲ್ಲಿನ ಪಾತ್ರಗಳ ವೈವಿದ್ಯವನ್ನು ಗಮನಿಸಬೇಕಾಗುತ್ತದೆ. ಹೆಗ್ಗಡತಿಯ ಸುಬ್ಬಮ್ಮ ನೆಲ್ಲುಹಳ್ಳಿಯಲ್ಲಿ ಸುಬ್ಬಿಯಾಗಿ, ಕುಸಂಸ್ಕೃತಿಯಲ್ಲಿ ಬೆಳೆದವಳು ಹೀಗೆ ಬೆಳೆಯಲು ಕೌಟುಂಬಿಕ ಹಿನ್ನೆಲೆಯೇ ಕಾರಣ, ಅದರೆ ಮುಂದೆ ಹೆಗ್ಗಡತಿಯಾಗಿ ಸುಬ್ಬಮ್ಮನಾಗುತ್ತಾಳೆ. ಪರಿಸರ ಎಂತಹ ವ್ಯಕ್ತಿಯನ್ನು ಬದಲಾಯಿಸಿಬಿಡುತ್ತದೆ ಎಂಬುದಕ್ಕೆ ಪ್ರತ್ಯಕ್ಷ ಸಾಕ್ಷಿ ಇವಳು.

ಕೃತಿಕಾರರು ಅವಳ ಪಾತ್ರವನ್ನು ನೋಡುವುದು ಹೀಗೆ, ಸುಬ್ಬಮ್ಮನಲ್ಲಿ ನಯವಿನಯ ಒಂದಿನಿತೂ ಇರಲಿಲ್ಲ. ಆದಕಾರಣ ಅದುವರೆಗೂ ಅವಕಾಶ ಸಿಕ್ಕದೆ ಸುಪ್ತವಾಗಿದ್ದ ಅಹಂಕಾರ, ಛಲ, ದರ್ಪ, ಸ್ವಾರ್ಥಪರತೆ, ದುರಭಿಮಾನ ಮೊದಲಾದ ಕಾಡುಭಾವಗಳು ಆಕೆ ಯಜಮಾನರ ಪತ್ನಿಯಾಗಿ ಕಾನೂರಿಗೆ ಹೆಗ್ಗಡತಿಯಾದ ಕೂಡಲೆ ಹೆಡೆಯೆತ್ತಿನಿಂತವು. ಈ ಪಾತ್ರ ಕಾದಂಬರಿಯಲ್ಲಿ ತುಂಬಾ ವೈವಿಧ್ಯವಾದಂತಹ ಪಾತ್ರ. ಸೀತೆಯಲ್ಲಿ ಮೃದುತನವಿದ್ದರೆ, ಸುಬ್ಬಮ್ಮನಲ್ಲಿ ಒರಟುತನವಿರುವುದನ್ನು ಕಾಣಬಹುದು. ಸೀತೆಯಂತಹ ಆದರ್ಶ ಪಾತ್ರವನ್ನು ಸೃಷ್ಟಿಸಿರುವ ಲೇಖಕರು ಸುಬ್ಬಮ್ಮನಂತಹ ಅಹಂಕಾರವುಳ್ಳ ಪಾತ್ರವನ್ನೇ ಸೃಷ್ಟಿಸಬಲ್ಲರು.

ಮದುಮಗಳು ಕೃತಿಯಲ್ಲಿ ಕಂಡು ಬರುವ ಸ್ತ್ರೀಯರಾದ ಅಂತಕ್ಕಸೆಟ್ಟಿ ಮತ್ತು ಸೇರೆಗಾರರ ಜಾತಿಯ ಅಕ್ಕಣಿಯನ್ನು ನೋಡಿದಾಗ, ಅಂತಕ್ಕ ಸ್ವಲ್ಪ ನಾಗರೀಕಳಾಗಿ ಕಂಡು ಬಂದು ಇತರ ಸ್ತ್ರೀಯರಿಗಿಂತ ವಿಭಿನ್ನಳಾದವಳು ಅಲ್ಲದೆ ದೇವಯ್ಯನಂತಹ ವ್ಯಕ್ತಿಯ ಜೊತೆ ಮಗಳು ಸಲಿಗೆಯಿಂದಿರುವಾಗ ಎಚ್ಚರಿಸುತ್ತಾಳೆ. ವ್ಯಾಪಾರ ವೃತ್ತಿಯವಳಾದ್ದರಿಂದ ವ್ಯವಹಾರ ಚತುರತೆಯೂ ಚೆನ್ನಾಗಿಯೇ ಇದೆ. ಆದರೆ ಮಗಳು ಕಾವೇರಿ ಅತ್ಯಾಚಾರಕ್ಕೊಳಗಾದರೂ ಅವಳು ಅದನ್ನು ಒಪ್ಪಿಕೊಳ್ಳಲು ಸಿದ್ಧಳಿಲ್ಲ. ಅದು ಅವಮಾನಕರ ಆಪಾದನೆಯೆಂದೆ ಭಾವಿಸಿ, ಮಗಳ ಮೈಮೇಲಿನ ಗಾಯಗಳನ್ನು ಕಲ್ಲುಹೊಡೆದದ್ದೆಂದು ಸಮರ್ಥಿಸುತ್ತಾಳೆ. ಎಂತಹ ತಾಯಿಗಾದರೂ ಮಗಳು ಕಳಂಕಿತೆಯಾಗಿ ಸಾಯುವುದನ್ನು ಸಹಿಸಲು ಆಗುವುದೇ? ಹೀಗೆ ಒಂಟಿ ಹೆಣ್ಣಾದರೂ ಸಮಾಜವನ್ನು ಎದುರಿಸುವುದು ವಿಭಿನ್ನವಾಗಿ ಮೂಡಿಬಂದಿದೆ.

ಕೆಳಜಾತಿಯಲ್ಲಿ ಬರುವ ಸೇಸಿ, ತಿಮ್ಮಿ, ಪೀಂಚಲು, ಕಾಡಿ, ಸಣ್ಣಬೀರನ ಹೆಂಡತಿ ಹೊಟ್ಟೆ ಲಕ್ಕಿ / ಲಕ್ಕಿ, ಹೂವಿ ಒಂದೊಂದು ವಿಶಿಷ್ಟವಾಗಿ ಮೂಡಿ ಬಂದಿವೆ. ಕುವೆಂಪು ದಲಿತ ಪಾತ್ರಗಳನ್ನು ಎಷ್ಟು ಸೂಕ್ಷ್ಮವಾಗಿ ತರುತ್ತಾರೆಂದರೆ, ಅವುಗಳ ಆಳದಲ್ಲಿಳಿಯುತ್ತಾರೆ. ಇಲ್ಲಿ ಯಾವುದು ಯಕಶ್ಚಿತವಲ್ಲ, ಗುತ್ತಿಯ ನಾಯಿ ಹುಲಿಯನ ಪಾತ್ರವೂ ಮಹತ್ವಪಡೆದಿದೆ. ತಿಮ್ಮಿಯಂಥ ಕೆಳವರ್ಗದ ಹೆಣ್ಣು ಒಮ್ಮೆ ಸೂರ್ಯೋದಯದ ಸೌಂದರ್ಯವನ್ನು ಸವಿಯಬಲ್ಲವಳು, ಸಣ್ಣಬೀರನ ತಾಯಿ ಸೇಸಿ ಭೂಮಾನುಭೂತಿಯನ್ನು ಉಂಟುಮಾಡಬಲ್ಲವಳಾಗುತ್ತಾಳೆ. ಪೀಂಚಲುವಂತೂ ಅತ್ಯಂತ ಸಹಜ ವಾಸ್ತವಿಕ, ವಿಭಿನ್ನ ನೆಲೆಯಿಂದ ವಿಶಿಷ್ಟಳೆನಿಸಿದ್ದಾಳೆ. ಹೀಗೆ ಎಲ್ಲಾ ಪಾತ್ರವನ್ನು ಒಂದೇ ಬಗೆಯ ತನ್ಮಯತೆಯಿಂದ ಚಿತ್ರಿಸುತ್ತಾರೆ ಕುವೆಂಪು.

ಕೆಳಜಾತಿಯ ತಿಮ್ಮಿಯ ಅಣ್ಣ ಸಣ್ಣಬೀರನ ಹೆಂಡತಿಯಾದ ಹೊಟ್ಟೆಲಕ್ಕಿಯ ಪಾತ್ರವಂತೂ ಎಷ್ಟು ಸಹಜವಾಗಿದೆ ಎಂದರೆ, ಆಕೆ ತನ್ನ ಗಂಡನಿಗೆ ಹೊನ್ನಳ್ಳಿ ಹೊಡೆತ ಬಿತ್ತು ಎಂದು ತಿಳಿದಾಗ ಮರುಕ ಪಡುವ ಬದಲು, ಮೂತಿಚೂಪಗೆ ಮಾಡಿಕೊಂಡು ಹಂಗಾಗಬೇಕು ಅವರಿಗೆ! ಬೀಳಲಿ ಇನ್ನೂ ಎರಡೂ ಕನಾತಿ! ನಂಗೆ ಬೆನ್ನ ಮೇಲೆ ಇಕ್ಕಡಿಸ್ತಾರಲ್ಲ! ನಂಗೆ ಹೆಂಗೆ ನೋವಾಗ್ತದೆ ಅನ್ನಾದು, ಈಗ್ಲಾದ್ರು ಗೊತ್ತಾಗ್ಲಿ! ಎಂದು ಮೂದಲಿಸಿದ್ದಳು. ಇದು ಕೆಳಜಾತಿಯ ಜನರಾದರೂ ತನಗಾದ ಶೋಷಣೆ, ತನ್ನ ಗಂಡನಿಗಾದರೆ ಅವನು ತನ್ನನ್ನು ಹೊಡೆಯುವುದನ್ನು ಬಿಡಬಹುದು ಎಂಬ ಭಾವನೆ. ಸ್ತ್ರೀ ಸಹಜವಾದ ಮತ್ಸರ ಇವಳಲ್ಲಿ ಹೇಗೆ ತುಂಬಿದೆ ಎಂದರೆ ತಾನೇನಾದರೂ ತನ್ನ ಅತ್ತೆಯ ಜೊತೆ ಸಿಂಬಾವಿಗೆ ಹೋದರೆ ತಾನಿಲ್ಲದ ಹೊತ್ತಿನಲ್ಲಿ ತನ್ನ ಮೈದುನನ ಹೆಂಡತಿ ತನ್ನ ಬಿಡಾರವನ್ನು ಸೇರಿಬಿಡುತ್ತಾಳೆ ಎಂಬುದು. ಹೀಗೆ ಪುಟ್ಟ ಪಾತ್ರವಾಗಿಯೂ ವಿಭಿನ್ನವಾಗಿದೆ.

ಪಿಜಿಣನ ಹೆಂಡತಿ ಅಕ್ಕಣಿಯು ರೋಗಗ್ರಸ್ತ ಗಂಡನಾದರೂ, ಅವನ ಸೇವೆ ಮಾಡುತ್ತಾಳೆ. ಚೀಂಕ್ರನ ಹೆಂಡತಿ ದೇಯಿ ಸತ್ತಾಗ ಅವಳ ಮಕ್ಕಳನ್ನೇ ಮಾತೃಸಹಜವಾದ ವಾತ್ಸಲ್ಯದಿಂದಲೇ ಸಲಹುತ್ತಾಳೆ. ಚೀಂಕ್ರನ ಕೂಣಿಗೆ ಇವಳು ಬೀಳಲು ಕಾರಣ ಮೊದಲಿನಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಕಾಯಿಲೆ ಬೀಳುತ್ತಿದ್ದು ಕೃಶನೂ, ಅಶಕ್ತನೂ ಆಗಿದ್ದ ಪಿಜಿಣನಿಂದ ಅವಳಿಗೆ ಅರೋಗ ದೃಢಕಾಯಳಾದ ತರುಣಿಗೆ ದೊರೆಯಬೇಕಾದ ಲೈಂಗಿಕ ತೃಪ್ತಿ ದೊರೆಯುತ್ತಿರಲಿಲ್ಲ. ಅದಕ್ಕಾಗಿಯೇ ಚೀಂಕ್ರನೊಂದಿಗೆ ಸಂಬಂಧವಿರಿಸಿಕೊಂಡಿದ್ದಳು. ಸಂಪ್ರದಾಯ ಶರಣೆಯಾದರೂ ಈ ಕೆಲಸಕ್ಕಿಳಿದಿರುವುದು

ಅವಳಿಗೆ ತಪ್ಪೆನಿಸುವುದಿಲ್ಲ. ಚೀಂಕ್ರನಿಂದ ತನಗೂ, ತನ್ನ ಗಂಡನಿಗೂ ಆಗುತ್ತಿದ್ದ ಸಹಾಯಕ್ಕೆ ಉಪಕಾರಕ್ಕೆ ಒಂದು ರೀತಿಯ ಋಣ ತೀರಿಸುವ ಪ್ರತ್ಯುಪಕಾರವಾಯಿತೆಂದು ಭಾವಿಸಿದ್ದಳು, ಪೀಂಚಲು ಮತ್ತು ಅಕ್ಕಣಿ ಪಾತ್ರವನ್ನು ಗಮನಿಸಿದಾಗ ಜಾರುವ ಸಂದರ್ಭವಿದ್ದರೂ ಎಂತಹ ಪರಿಸ್ಥಿತಿಯಲ್ಲಿಯೂ ಎಡವದ ಪೀಂಚಲು ದೊಡ್ಡ ವ್ಯಕ್ತಿ ಎನಿಸುತ್ತಾಳೆ. ಆದರೆ ಅಕ್ಕಣಿ ಕಾಲು ಜಾರುವುದಕ್ಕೆ ಕಾರಣ ಸಮಯ, ಸನ್ನಿವೇಶ ಮತ್ತು ದಾಕ್ಷಿಣ್ಯ. ಮುಂದೆ ಚೀಂಕ್ರನಿಂದ ದೂರವಾದರೂ, ಮತ್ತೊಬ್ಬನ ಸೆರೆಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಾಳೆ. ರಂಗಪ್ಪಗೌಡರಿಗೆ ಆಕೆ ದೇಹ ಒಪ್ಪಿಸಲೂ ಪರಿಸ್ಥಿರಿಯೇ ಕಾರಣವಾಗುತ್ತದೆ. ಆಕೆಯ ಜೀವನವನ್ನೇ ಕೇವಲ ವಯಕ್ತಿಕ ಜೀವನವೆಂದು ಗಣಿಸದೆ ಕಾದಂಬರಿಯ ವಸ್ತುವಿನ ಬೆಳವಣಿಗೆಗೆ ಸಹಕಾರಿಯಾಗಿದೆ ಎನ್ನಬಹುದು. ಇದರಿಂದ ವ್ಯಕ್ತವಾಗುವ ಅಂಶವೆಂದರೆ, ಸ್ತ್ರೀಯರು ಸ್ವಾತಂತ್ರ್ಯವನ್ನು ಬಯಸುತ್ತಿರಲಿಲ್ಲ. ಬದಲಾಗಿ ಉತ್ತಮ ಬಾಳನ್ನಷ್ಟೆ ಬಯಸಿದ್ದರು ಎನ್ನಬಹುದು.

ಮದುಮಗಳಿಗೆ ಚಿನ್ನಮ್ಮನ ಅಜ್ಜಿ, ಕೋಣೂರಿನ ಮುಕುಂದಯ್ಯನ ತಾಯಿ, ರಂಗಪ್ಪಗೌಡರ ಹೆಂಡತಿ, ಈ ಎಲ್ಲಾ ಪಾತ್ರಗಳು ಒಂದೇ ರೀತಿಯ ಗುಣ-ಸ್ವಭಾವಗಳನ್ನೊಂದಿವೆ. ಕಾರಣ ಈ ಎಲ್ಲರು ಹೆಚ್ಚು ಕಡಿಮೆ ಒಂದೇ ಸಂಪ್ರದಾಯವನ್ನು ಅಳವಡಿಸಿಕೊಂಡಿದ್ದರು.

ಸೇರೆಗಾರರೊಂದಿಗೆ ಅನೈತಿಕ ಸಂಬಂಧವನ್ನೊಂದಿರುವ ಗಂಗೆ ಪಾತ್ರ ವೈವಿಧ್ಯದಿಂದ ಕೂಡಿದೆ. ಇಡೀ ಕಾದಂಬರಿಯಲ್ಲಿ ಎಲ್ಲರ ಅವನತಿಗೆ ಕಾರಣವಾಗುವಂತಹದ್ದು. ವೇಶ್ಯೆಯಾದವಳು ಹೇಗೆ ಕುಟುಂಬದ ನಾಶಕ್ಕೆ ಕಾರಣವಾಗುತ್ತಾಳೆ. ಹಣದಾಸೆಗಾಗಿ ಎಷ್ಟು ತಂತ್ರ ಹೂಡುತ್ತಾಳೆ ಎಂಬುದನ್ನು ವಿವರವಾಗಿ ತಂದಿದ್ದಾರೆ. ಅವಳ ಮನೋಧರ್ಮವೇ, ಪ್ರವೃತ್ತಿಯೇ ಹಣ ಸಂಪಾದನೆ, ಕೆಟ್ಟ ಸಂಬಂಧವನ್ನು ಹೊಂದುವುದು ಇತ್ಯಾದಿ. ಓಬಯ್ಯನಂತಹ ವಯಸ್ಸಿನ ವ್ಯಕ್ತಿಯನ್ನು ತನ್ನ ಬಲೆಗೆ ಬೀಳಿಸಿಕೊಳ್ಳುತ್ತಾಳೆ. ತನ್ನ ದೇಹದಾಸೆ ತೀರಿಸಿಕೊಳ್ಳಲು ಇವಳಿಗೆ ಒಬ್ಬ ಗಂಡು ಸಿಕ್ಕರೆ ಸಾಕು, ಆದರೆ ಮದುಮಗಳಿನ ಕಾವೇರಿಯದು ಗಂಗೆಯ ರೀತಿಯ ಸ್ವಭಾವವಾದರೂ ದೇವಯ್ಯನ ಮೇಲೆ ಜೀವವಿಟ್ಟು ಕೊಂಡವಳು. ಅವನಿಗಾಗಿ ಮತಾಂತರ ಹೊಂದಲೂ ಸಿದ್ಧಳು. ಆದರೆ ಗಂಗೆಯಂತೆ ನೀಚತನಕ್ಕಿಳಿಯುವವಳಲ್ಲ. ಇವಳ ಮನೋಧರ್ಮ ಉತ್ತಮನನ್ನು ಮದುವೆಯಾಗಬೇಕೆಂದು, ಕಿಟ್ಟಪ್ಪನಂತಹ ಕುರೂಪಿಯನ್ನಲ್ಲ, ದೇವಯ್ಯನಂತಹ ಸುಂದರವಾದವನನ್ನು ಮಾತ್ರ. ಹೀಗೆ ವೈವಿಧ್ಯಮಯವಾದ ಪಾತ್ರಗಳಿಂದ ತುಂಬಿರುವ ಈ ಕೃತಿಗಳು ಜೀವನದರ್ಶನವನ್ನೆ ಮಾಡಿಕೊಡುತ್ತವೆ.

೩. **ವೈವಿಧ್ಯತೆಗೆ ಕಾರಣಗಳು :** ಈ ಕಾದಂಬರಿಗಳಲ್ಲಿ ಪಾತ್ರಗಳು ವೈವಿಧ್ಯಮಯವಾಗಿರಲು ಹಲವಾರು ಅಂಶಗಳನ್ನು ಕಾಣಬಹುದು. ಯಾವುದೇ ಕೃತಿಯಲ್ಲಿ ಪಾತ್ರಗಳು ವಿಭಿನ್ನವಾಗಿರದೆ ಒಂದೇ ಬಗೆಯಾಗಿದ್ದರೆ ಆ ಕೃತಿ ಅಷ್ಟೊಂದು ಮಹತ್ವವೆನಿಸುವುದಿಲ್ಲ. ಅದರಲ್ಲಿಯೂ ಇಂತಹ ಮಹಾಕೃತಿಗಳಂತೂ ಈ ವೈವಿಧ್ಯತೆಯಿಂದ ನವನವೀನತೆಯಿಂದಲೇ ಕೂಡಿರಬೇಕು.

ವೈವಿಧ್ಯಮಯವಾದ ಪಾತ್ರಗಳು ರೂಪಿತವಾಗಲು ಅಲ್ಲಿನ ಪರಿಸರ, ಕೌಟುಂಬಿಕ ಜೀವನ, ಅಂದಿನ ಕಾಲ, ಸಾಮಾಜಿಕ ಹಿನ್ನೆಲೆ ಅಲ್ಲದೆ ಇನ್ನಿತರ ಹಿನ್ನೆಲೆಯೂ ಕಾರಣವಾಗುತ್ತದೆ. ಅದರಿಂದಲೇ ಈ ಕೃತಿಗಳಲ್ಲಿ ಗ್ರಾಮೀಣರಾದರೂ ಸುಶಿಕ್ಷಿತರನ್ನೂ, ಉತ್ತಮ ಕುಟುಂಬದಲ್ಲಿದ್ದರೂ ಅಶಿಕ್ಷಿತರನ್ನು ಕಾಣಬಹುದು. ಸೀತೆ, ಚಿನ್ನಮ್ಮ, ಪೀಂಚಲು, ನಾಗಕ್ಕ, ಮೊದಲಾದವರು ಮೊದಲನೆಯ ವರ್ಗಕ್ಕೂ ಸುಬ್ಬಮ್ಮ, ಅಕ್ಕಣಿ, ಗಂಗೆ, ನಾಗತ್ತೆ ಮೊದಲಾದವರು ಎರಡನೆಯ ವರ್ಗದಲ್ಲಿ ಬರುತ್ತಾರೆ.

ಯಾವುದೇ ಹೆಣ್ಣಿನ ಜೀವನದಲ್ಲಿ ಅವಳ ಜೀವನದಷ್ಟೆ ನಿಕಟವಾದ ಪರಿಸರ ಪ್ರಮುಖವಾಗಿ ಕೆಲಸ ಮಾಡುತ್ತದೆ. ಸನ್ನಡತೆಯಿಂದ ಬೆಳೆಯಲು ಪರಿಸರವೇ ಕಾರಣ ಆಕೆ ಕೆಟ್ಟವಳಾಗಲು ಪರಿಸರವೇ ಕಾರಣಯಾವುದೇ ಸುಸಂಸ್ಕೃತ ವ್ಯಕ್ತಿಯಿಂದ ಮಾತ್ರ ಸುಸಂಸ್ಕೃತ ಸಮಾಜ ರೂಪುಗೊಳ್ಳುವುದು, ಎಂಬಂತೆ, ಅಂತಹ ಶುದ್ಧ ಸಮಾಜ ಎಲ್ಲರ ಜೀವನದಲ್ಲಿ ತನ್ನದೇ ಆದಂತಹ ಮಹತ್ವದ ಪಾತ್ರವಹಿಸುತ್ತದೆ. ಹೆಗ್ಗಡತಿಯ ಸುಬ್ಬಮ್ಮ ಆ ರೀತಿ ವರ್ತಿಸಲು ಕಾರಣ ಆವಳು ಬೆಳೆದ ಕುಸಂಸ್ಕೃತ ಸಮಾಜ ಅಥವಾ ಪರಿಸರ. ಕಾದಂಬರಿಕರರು ಸುಬ್ಬಮ್ಮನ ಬೇರೆ ರೀತಿಯಲ್ಲಿ ಅಂದರೆ ತುಂಬಾ ಸುಶಿಕ್ಷಿತೆಯಾಗಿ ಚಿತ್ರಿಸಿದ್ದರೆ ಅದಕ್ಕೆ ಮಹತ್ವವೇ ಇರುತ್ತಿರಲಿಲ್ಲ. ಅವಳ ಹಿನ್ನೆಲೆಯನ್ನೇ ನೋಡಿದಾಗ ಒಂದು ವೇಳೆ ಅವಳಿಗೆ ಬಡತನವಿಲ್ಲದ್ದರೆ ಚಂದ್ರಯ್ಯಗೌಡನಿಗೆ ಹೆಂಡತಿಯೂ ಆಗುತ್ತಿರಲಿಲ್ಲ. ಕಾನೂರಿಗೆ ಹೆಗ್ಗಡತಿಯೂ ಆಗುತ್ತಿರಲಿಲ್ಲ. ಆದ್ದರಿಂದ ಈ ಪಾತ್ರದಲ್ಲಿ ಕಾದಂಬರಿಕಾರರ ನಿಲುವು ಧೋರಣೆ ಎಂದರೆ, ಆ ಕಾಲದಲ್ಲಿ ಜನರಿದ್ದಂತಹ ಸಂಪ್ರದಾಯ, ಕಟ್ಟುಪಾಡುಗಳನ್ನೇ ಮೀರಲು ಸಾಧ್ಯವಾಗುತ್ತಿರಲಿಲ್ಲವೆಂಬುದು ಸೀತೆಯು ಬೆಳೆದ ಪರಿಸರ, ಕುಟುಂಬ ಉತ್ತಮವಾಗಿದೆ. ಅವಳು ಸುಶಿಕ್ಷಿತೆಯಾದರೂ ಕಾಲದ ಹಿನ್ನೆಲೆಯನ್ನೆ, ಸಾಮಾಜಿಕ ಹಿನ್ನೆಲೆಯನ್ನು ಗಮನಿಸಿದಾಗ ಅವಳು ಹೂವಯ್ಯನನ್ನು ಮದುವೆಯಾಗಬೇಕೆಂದುಕೊಂಡರೂ, ಧೈರ್ಯವಾಗಿ ಹೇಳಲಾಗುತ್ತಿರಲಿಲ್ಲ. ಹೆಣ್ಣಿನ ಭಾವನೆಗಳಿಗೆ ಅಂದಿನ ಸಮಾಜದಲ್ಲಿ ಬೆಲೆಯಿರಲಿಲ್ಲ. ಆಕಸ್ಮಿಕ ಘಟನೆಗಳಿಂದ ಅವಳು ಗಂಡನಿಂದ ದೂರವಾದರೂ, ಮತ್ತೆ ಮದುವೆಯಾಗಲು ಸಾಧ್ಯವಾಗುವುದೇ ಇಲ್ಲ. ಹೂವಯ್ಯನ ಜೀವನ ಸಂಗಾತಿಯಾಗುವ ಬದಲು ಸಖಿಯಾಗುತ್ತಾಳೆ. ಕಾಲದ ದೃಷ್ಟಿಯಿಂದ ಇಂಗ್ಲೀಷ್ ಪ್ರಭಾವ ಕಂಡು ಬಂದರೂ ಸಮಾಜ ಮಾತ್ರ ಹಿಂದುಳಿದು ಜಡವಾಗಿತ್ತು.

ಮದುಮಗಳಲ್ಲಿನ ಪರಿಸರ ಕೌಟುಂಬಿಕ ಹಿನ್ನೆಲೆಯನ್ನು ಗಮನಿಸಿದಾಗ ಇಲ್ಲಿ ಚಿನ್ನಮ್ಮ ಬೆಳೆದ ಸಮಾಜ, ಕುಟುಂಬ ಸುಸಂಸ್ಕೃತವಲ್ಲದಿದ್ದರೂ, ವ್ಯಕ್ತಿಸ್ವಾತಂತ್ರ್ಯಕ್ಕೆ ಬೆಲೆಯಿರುವುದು ತಿಳಿದು ಬರುತ್ತದೆ. ಶಿಕ್ಷಣವಿಲ್ಲದಿದ್ದರೂ ವಯಕ್ತಿಕ ಜೀವನಕ್ಕೆ ಹೆಚ್ಚಿನ ಮಹತ್ವವಿದೆ.

ತಿಮ್ಮ, ಪೀಂಚಲು ಬೆಳೆದ ಪರಿಸರ ಚಿನ್ನಮ್ಮನ ಪರಿಸರಕ್ಕಿಂತ ಸ್ವಲ್ಪ ಬೇರೆಯೇ ಆಗಿರುವುದರಿಂದ ಅದು ಸ್ವಭಾವಗಳಲ್ಲಿಯೂ ವ್ಯಕ್ತವಾಗುತ್ತದೆ. ಇಡೀ ಕೃತಿಯಲ್ಲಿ ಬರುವ ಕಾವೇರಿ, ದೇವಮ್ಮ, ಮುಂತಾದ ಪಾತ್ರಗಳು ನಡೆದುಕೊಳ್ಳುವ ರೀತಿಯನ್ನು ಗಮನಿಸಿದಾಗ ಅಂದಿನ ಸಮಾಜ ವ್ಯವಸ್ಥೆಯ ಅರಿವಾಗುತ್ತದೆ.

ಹೀಗೆ ಕುವೆಂಪು ಅವರ ಮನೋಧರ್ಮದಲ್ಲಿ ಪಾತ್ರ ಚಿತ್ರಣ ಮೂಡಿಬರಲು ಅಂದಿನ ಕಾಲ, ಸಮಾಜ, ಪರಿಸರವೇ ಕಾರಣವಾಗಿದೆ.

ಅಧ್ಯಾಯ – ೭

ಭಾಷೆ ಮತ್ತು ಅಭಿವ್ಯಕ್ತಿ

ಕುವೆಂಪು ಅವರ ಕೃತಿಗಳು ಯಶಸ್ವಿಯಾಗಲು ಕಾರಣ ಅವರು ಬಳಸುವ ಭಾಷೆ. ಮಹಾಕಾವ್ಯದ ಭಾಷೆ ಒಂದು ತೆರನಾದರೆ, ನಾಟಕದ ಭಾಷೆಯೇ ಮತ್ತೊಂದು ರೀತಿ, ಭಾಷೆಯನ್ನು ತಮ್ಮ ಯಾವುದೇ ಸಾಹಿತ್ಯ ಪ್ರಕಾರದಲ್ಲಿಯೂ ಚೆನ್ನಾಗಿ ದುಡಿಸಿಕೊಳ್ಳುವ ಜಾಣ್ಮೆಯುಳ್ಳ ಕವಿ ಕುವೆಂಪು ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ೨೧ನೆಯ ಶತಮಾನದಲ್ಲಿಯೂ ಕೂಡ ಮಹಾಕಾವ್ಯಕ್ಕೆ ಹಳಗನ್ನಡ, ನಡುಗನ್ನಡ, ಹೊಸಗನ್ನಡವನ್ನು ಬಳಸಿ ಸಂಪೂರ್ಣ ಯಶಸ್ವಿಯಾದರು. ಕನ್ನಡಕ್ಕೊಂದು ಓಜಸ್ವಿಯಾದ ಶೈಲಿಯನ್ನು ಕೊಟ್ಟರೆಂದೇ ನೆನೆಯಬೇಕು. ಸಂಸ್ಕೃತ ಪದ ಪ್ರಚುರವಾದ, ಆದರೆ ಕ್ಲಿಷ್ಟವಲ್ಲದ ದೀಪ್ತ ಬಂಧುರ ಶೈಲಿ ಅವರದು. ಮಲೆನಾಡಿನ ಕವಿಯಾದ ಇವರು ತಮ್ಮ ಎರಡೂ ಮಲೆನಾಡಿನ ಕೃತಿಗಳಿಗೆ ಅಲ್ಲಿಯ ಭಾಷೆಯೊಂದಿಗೆ ಶಿಷ್ಟಭಾಷೆಯನ್ನೂ ಬಳಸಿದ್ದಾರೆ. ಅವರ ಭಾಷೆಯ ಬೆಡಗು, ದೇಸಿಯ ಕಸುವಿನಿಂದ ಕಂಗೊಳಸುತ್ತದೆ. ಸ್ವಾತಂತ್ರ್ಯ ಪೂರ್ವದ ಕತೆಯಾದ್ದರಿಂದ ಆಯಾ ಪರಿಸರ ಕಾಲಘಟ್ಟತನ್ವಯವಾಗಿ ಭಾಷೆಯನ್ನು ಬಳಸಿದ್ದಾರೆ. ಕೆಲವೊಮ್ಮೆ ಸಾಂಪ್ರದಾಯಕವಾಗಿದ್ದರೆ ಮತ್ತೆ ಕೆಲವೆಡೆ ಶಿಷ್ಟವಾದ ಶೈಲಿಯಲ್ಲಿ ಬಳಸಲಾಗಿದೆ.

ಈ ನಿಬಂಧದಲ್ಲಿ ಸ್ತ್ರೀ ಪಾತ್ರಗಳಿಗೆ ಹೆಚ್ಚಿನ ಮಹತ್ವ ನೀಡಿರುವುದರಿಂದ ಇಲ್ಲಿ ಪುರುಷರ ಭಾಷೆಗಿಂತ ಸ್ತ್ರೀಯರ ಭಾಷೆಯ ಕಡೆಗೆ ಕೇಂದ್ರಿಕರಿಸುವುದು ಸೂಕ್ತವೆನಿಸುತ್ತದೆ. ಈ ಎರಡೂ ಕೃತಿಗಳಲ್ಲಿ ಸ್ತ್ರೀಯರೂ ಶಿಕ್ಷಿತರಾಗಿರುವುದಕ್ಕಿಂತಲೂ ಅವಿದ್ಯಾವಂತರೇ ಹೆಚ್ಚು ಅದರಿಂದ ಅವರು ಬಳಸುವ ಭಾಷೆ ಹೇಗಿದೆ ಎಂಬ ಅಂಶವನ್ನೆ ಗಮನಿಸಬೇಕು. ಕಾನೂರು ಹೆಗ್ಗಡತಿಗಿಂತ ಮದುಮಗಳಿನ ಭಾಷೆ ಹೆಚ್ಚು ದೇಸಿ ಸೊಬಗಿನಿಂದ ಕೂಡಿದೆ.

ಹೆಗ್ಗಡತಿಯಲ್ಲಿ ಬರುವ ಸುಬ್ಬಮ್ಮನ ಅಸಂಸ್ಕೃತಿಗೆ ತಕ್ಕ ಹಾಗೆಯೇ ಅವಳ ಭಾಷೆಯಿದೆ. ವಾಸು ಉಪ್ಪಿಟ್ಟು ಕೇಳಿದಾಗ ಹಾಕದೆ ಅವನಿಂದ ಬೈಸಿಕೊಂಡು, ನಾಗಮ್ಮನನ್ನು ನೋಡಿ ಸಿಡಿಮಿಡಿಗುಟ್ಟುತ್ತಾ, "ಗಂಡನ್ನ ಕಳಕೊಂಡ ಮುಂಡೇರ ಹಣೇಬರವೇ ಹಿಂಗೆ .... ಅವರ ಕಣ್ಣು ಇಂಗೇ ಹೋಗಲಿ......... ಸುಳ್ಳು ಸುಳ್ಳು ಹೇಳಾದು, ಚಾಡಿ ಹೇಳಾದು........ ಅವರ ನಾಲಗೆ ಬಿದ್ದು ಹೋಗಲಿ..... ನಾನೀ ಹಾಳುಮನೆಗೆ ಯಾಕೆ ಬಂದೆನೋ. ದೇವರ ಕಣ್ಣಿಗೆ ಒರಲೆ ಹಿಡಿದು ಹೋಗಾಕೆ! ಗಂಜಿ ಕುಡ್ಕುಂಡಿರ್ತಿದ್ದೆ. .... ಅವರ ಬಾಯಿಗೆಲ್ಲ ಹುಳ ಬಿದ್ದು ಹೋಗಾಕೆ .... ಏನು ಉರಿಸ್ತಾರೋ........ ಏನು ಉರೀತಾರೋ........... ಇಬ್ಬರನ್ನು ತಿಂದ ಮಾರಿ

ಮೂರ್ನೇಯವಳನ್ನೂ ತಿನ್ನಾಕೆ ನೋಡ್ತದೆ......... ಮುಖಕ್ಕೆ ಬೆಂಕಿ ಹಾಕ........ ಹುಡುಗರು ಮಕ್ಕಳೆಲ್ಲಾ ನನ್ನ ಮೇಲೆ ಎತ್ತಿಕಟ್ಟಿ ಬಾಯಿಗೆ ಬಂದಂಗೆ ಬಯ್ತ್ಯೋದೆ! ಹೀಗೆ ಉದುರುತ್ತವೆ ಇವಳ ಬಾಯಿಂದ ನುಡಿಮುತ್ತುಗಳು. ಆದರೆ ಇದಕ್ಕೆ ಸುಸಂಸ್ಕೃತಿಯ ನಾಗಮ್ಮನೇನು ಹೊರತಲ್ಲ ಯಾರೆ ಎತ್ತಿ ಕಟ್ಟಿದ್ದು ಯಾವಾಗ್ಲೆ! .... ಬಾಯಿಗೆ ಬಂದಂಗ್ಲೆ ಬಯ್ತೀಯೆದಿಂಡೆ ಬಸವಿ.

ಪುಟ್ಟಮ್ಮನಿಗೂ ಸುಬ್ಬಮ್ಮನಿಗೂ ನಡೆಯುವ ಜಗಳದಲ್ಲಿ ಸುಬ್ಬಮ್ಮನನ್ನು ನಾಯಿ ಎಂದು "ದೊಡ್ಡಮ್ಮ ಸುಮ್ಮನಿರೆ! ಆ ನಾಯಿ ಕೈಲಿ ಏನು ಮಾತು?" ಸುಬ್ಬಮ್ಮ ಸೌದಿಡಿದು ಬಂದಾಗ, "ಬಾ! ನೋಡಾನ! ಎಂಬುದು. ಮುಂದುವರಿದು ಸುಬ್ಬಮ್ಮ ಕೋಪದಿಂದ ಗಡಿಗೆ ಹೊಡೆದಾಗ, ಪುಟ್ಟಮ್ಮ "ಅದರ ಓಡಿನಲ್ಲೇ ತಲೇ ಕೆರೀಬೇಕು ಹಿಡ್ಕೊಂಡು ಎಂದರೆ. "ನಿನ್ನಜ್ಜ ಬರ್ಬೇಕು" ಎಂಬ ಸುಬ್ಬಮ್ಮನ ಮಾತಿಗೆ ಪುಟ್ಟಮ್ಮನು ನನ್ನಜ್ಜ ಹೇತು ಬಂದಲ್ಲಿ ನಿಂಗೆ ಕೂತು ಬರಾಕೆ ಯೋಗ್ಯತೆಯಿಲ್ಲೇ! ತಡೀ ಅಪ್ಪಯ್ಯನಿಗೆ ಹೇಳಮಾಡಿಸ್ತೀನಿ. ಇಲ್ಲಿ ಪುಟ್ಟಮ್ಮನ ಶ್ರೀಮಂತಿಕೆಯು ವ್ಯಕ್ತವಾಗಿದೆ.

ಈ ಕೃತಿಯ ನಾಯಕಿಯಾದ ಸೀತೆಯ ಪರಿಸರಕ್ಕನುಗುಣವಾಗಿಯೇ ಮೃದುವಾದ ಭಾಷೆಯು ಬಳಕೆಯಾಗಿದೆ. ಸೀತೆ ಹೂವಯ್ಯರಿಗೆ ನಡೆಯುವ ಸಂಭಾಷಣೆ

"ಏನೇನು ಚಿತ್ರ ನೋಡಿದೆ?"

ನೋಡಿದೆ ಗೊತ್ತಾಗಿಲ್ಲ

ನನ್ನ ಕೇಳಿದ್ದರೆ ಹೇಳ್ತಿದ್ದೆ

ಸೀತೆ ಸಂತೋಷದಿಂದ "ನೀವು ಕಣ್ಣು ಮುಚ್ಚಿಕೊಂಡಿದ್ರಿ, ಬೆನ್ನು ನೋವು ಹೆಚ್ಚಾಗಿದೆ ಅಂತ ಕೇಳಲಿಲ್ಲ .... ಹೌದು ಅತ್ತೆಮ್ಮ, ವಾಸು, ಪುಟ್ಟತ್ತಿಗಮ್ಮ ಬರ್ತಾರಂತೆ. ಹೀಗೆ ಈ ಮೇಲಿನ ಸಂಭಾಷಣೆಯಲ್ಲಿ ಸೀತೆಯಲ್ಲಿ ಮೃದು ಮದುರ ಧೋರಣೆಯಿದೆ.

ಹೀಗೆ ಭಾಷೆಯು ಕೆಳವರ್ಗದವರಲ್ಲಿ ಬೇರೆಯ ರೀತಿ ಮೇಲುವರ್ಗದವರಲ್ಲಿ ಒಂದು ಬಗೆಯಲ್ಲಿ ಬಳಕೆಯಾಗುವುದರ ಜೊತೆಗೆ ಸಂಸ್ಕೃತವೂ ಹೆಚ್ಚಿನ ಸ್ಥಾನ ಪಡಿದಿದೆ. ಸ್ತ್ರೀಯರ ಪಾತ್ರಗಳಿಗೆ ಹೆಚ್ಚಿನ ಶಿಕ್ಷಣವಿಲ್ಲದೆ ಪುರುಷರು ಸುಶಿಕ್ಷಿತರಾಗಿಯೂ ಕಾಣುವುದರಿಂದ ಹೂವಯ್ಯ, ರಾಮಯ್ಯರ ವಿದ್ಯಾಭ್ಯಾಸದ ಪರಿಣಾಮ ಅವರ ಭಾಷೆಯು ಬಳಸುವ ರೀತಿಯು ವಿಶಿಷ್ಟವಾಗಿದೆ. ಕಾವ್ಯಾತ್ಮಕ ಶೈಲಿಯಲ್ಲಿದೆ. ಹೂವಯ್ಯ ಸೀತೆಯೊಡನೆ ಮಾತನಾಡುವಾಗ,

"ಪ್ರಾರ್ಥನೆ ಮಾಡಬೇಕು, ಸೀತೆ, ಪ್ರಾರ್ಥನೆ ಮಾಡಬೇಕು. ನೋಡು ದೇವರು ಪ್ರಪಂಚವನ್ನೆಲ್ಲ ನಿರ್ಮಿಸಿದ್ದಾನೆ. ನನ್ನನ್ನು, ನಿನ್ನನ್ನೂ, ಇತರರನ್ನು ನಿರ್ಮಿಸಿದ್ದಾನೆ. ನಮಗೆಷ್ಟು ಸುಖ-ಸಂತೋಷಗಳನ್ನು ಕೊಟ್ಟಿದ್ದಾನೆ! .... ನಿನ್ನ ಮನೋಹರವಾದ ಕಣ್ಣುಗಳನ್ನು ಅವನೇ ಮಾಡಿದ್ದಾನೆ". ಹೀಗೆ ಸುಸಂಸ್ಕೃತವಾಗಿಯೇ ಸಾಗುತ್ತದೆ.

ಪ್ರಕೃತಿಯ ಚಿತ್ರಣದಲ್ಲೂ ಮತ್ತಷ್ಟು ಕಾವ್ಯಾತ್ಮಕವಾಗಿಯೇ ಬಳಕೆಯಾಗಿದೆ. ಸಂಜೆಯಾಗುತ್ತಿದೆ. ನೆತ್ತರಿನ ಬಣ್ಣದ ಕೆಂಪು ಕಿರಣದ ಸೂರ್ಯಬಿಂಬ, ಪಶ್ಚಿಮ ಪರ್ವತದ ಅರಣ್ಯದ ಹಿಂಗಡೆ ಪ್ರಜ್ವಲಿಸುತ್ತಾ ಮೆಲ್ಲೆಮೆಲ್ಲನೆ ಮುಳುಗುತ್ತದೆ. ನೋಡುನೋಡೆ ಕಾಲುಭಾಗ ಮರೆಯಾಯ್ತು. ಸಂಧ್ಯಾಕಾಂತಿ ಕಾಡು ಬೆಟ್ಟಗಳ ಮೇಲೆ ಕೆಂಗಾವಿಯರಚಿತ್ತು. ಕವಿ ಹೃದಯ ಕಾದಂಬರಿಯಲ್ಲಿಯೂ ವಿಶಿಷ್ಟವಾಗಿ ಕೆಲಸ ಮಾಡಿದೆ.

ಪ್ರಕೃತಿ ವರ್ಣನೆಯಲ್ಲಿ, ವ್ಯಕ್ತಿಗಳ ಸ್ವಭಾವದ ಚಿತ್ರಣದಲ್ಲಿ, ಪುರುಷರ ಅಭಿವ್ಯಕ್ತಿಯಲ್ಲಿ, ಮನೆಯ ಚಿತ್ರದಲ್ಲಿ ಹೀಗೆ ಒಂದೊಂದು ಬಗೆಯಲ್ಲಿ ಬಳಕೆಗೊಂಡಿದೆ. ನಾಗಮ್ಮ ಹೂವಯ್ಯನಿಗೆ ಮದುವೆಯಾಗಲು ಒತ್ತಾಯಿಸುವಾಗ. ಸಿಟ್ಟಿನಿಂದ ಮಾತನಾಡುತ್ತ "ಹೋಗಲಿ ಬಿಡು. ಅವರ ಹೆಣ್ಣು ನಮಗ್ಯಾಕೆ? ಅವರೆ ಎಬ್ಬೆಗೆಹಾಕಿ ಹಣ್ಣು ಮಾಡಿಕೊಳ್ಳಲಿ.......... ನಿನಗೇನು ಹೆಣ್ಣಿಗೆ ಬರಗಾಲವಲ್ಲ! ಹ್ಞೂ ಅಂದರೆ ಕಾಲಿಗೆ ಬಿದ್ದು ಹೆಣ್ಣುಕೊಡೋರು ಹವಣ ಜನ ಇದ್ದಾರೆ....... ನನ್ನ ಹತ್ತಿರ ಆ ಪಸ್ರಾ್ತಪನೂ ಎತ್ತಿದ್ದಾರೆ......... ಆ ಅತ್ತಿಗದ್ದೆ ಹಿರಿಯಣ್ಣ ಗೌಡರ ಮಗಳು ರಂಗಮ್ಮ ಇದ್ದಾಳಲ್ಲಾ ಏನಾಗಿದ್ದಾಳೆ? ಸ್ವಲ್ಪ ಬಾಯಿ ಉಗ್ಗಾದರೆ ಏನಂತೆ ದುಂಡುಮುಖ, ಬಿಳಿ ಮೈ, ಕಣ್ಣು, ಮೂಗು, ಬಾಯಿ ಎಲ್ಲಾ ನೆಟ್ಟಗಿಲ್ಲೇನು? ಈ ಪಾತ್ರದಷ್ಟೆ ಸಹಜವಾಗಿ ಭಾಷೆ ಮೂಡಿದೆ. ಇಲ್ಲಿ ಬಳಸುವ ಮಲೆನಾಡಿನ ಪದಪುಂಜಗಳು ವೈವಿಧ್ಯದಿಂದ ಕೂಡಿವೆ.

ಅಲ್ಲಿನ ಬೈಗುಳಗಳು, ಗಾದೆಗಳು, ನುಡಿಗಟ್ಟುಗಳು, ರೂಪಕಗಳು ವಿಭಿನ್ನವಾಗಿ ರೂಪುಗೊಂಡಿವೆ. ಗಂಗೆಯೊಡನೆ ಸುಬ್ಬಮ್ಮ ಮಾತನಾಡುತ್ತಾ ನಾಗಮ್ಮನನ್ನು ಬಯ್ಯುವುದು. "ಅವರ ಕೈ ಕುಸಿದು ಬೀಳಾಕೆ. ಎಲ್ಲ ಅನಾಗಿ ಇದ್ದಾಳಲ್ಲಾ. ಆ ಹಾಳುಮುಂಡೆ ಅವಳ ದೆಸೆಯಿಂದ.

"ಆ ಗಂಡಸರನ್ನ ನಾ ಚೆನ್ನಾಗಿ ಬಲ್ಲೆ .... ನಾನೂ ನಿಮ್ಮ ಹಾಗೆ ಒಬ್ಬರನ್ನ ನೆಚ್ಚಿ ಮತ್ತೊಬ್ಬರ ಕೈ ಸೇರ್ದೆ".........

ಸುಬ್ಬಮ್ಮ ಪುಟ್ಟಣ್ಣನು "ನಿನ್ನ ತಲೆಗೆ ಬೆಂಕಿ ಹಾಕ", ನಿನ್ನ ಹೆಣಕ್ಕೆ ಹಾಕಿರೊ, ಇವು ಅವಳ ವ್ಯಕ್ತಿತ್ವಕ್ಕೆ ಸೂಕ್ತವಾದ ಪದಗಳಾಗಿವೆ. ನಿಮ್ಮ ಮುಖಕ್ಕೆ ಬೆಂಕಿಹಾಕಿ! ಬ್ಯಾಡ ಅಂದ್ರೂ ಕೇಳ್ದೆ ನನ್ನ ಕೊಂದು ಹಾಕಕ್ಕೆ ಮಾಡಿದ್ರಲ್ಲ! ಹೀಗೆ ಕಾದಂಬರಿಯ ಪ್ರಮುಖ ಸ್ತ್ರೀ ಪಾತ್ರವಾದ ಸುಬ್ಬಮ್ಮನಲ್ಲಿ ಭಾಷೆ ಸ್ಥಾನ ಪಡೆದಿದೆ.

ಲಕ್ಷ್ಮಿಯ ಪಾತ್ರದಲ್ಲಿ ಅವಳ ಅಳುವೇ ಭಾಷೆಯಾಗಿ ಸೀತೆಯ ಭವಿಷ್ಯವನ್ನು ಸೂಚಿಸುತ್ತಿದೆ. ಕಾಲಮಾನಕ್ಕನುಗುಣವಾಗಿ ಭಾಷೆಯು ಹೇಗೆ ಬದಲಾವಣೆಯಾಗುವ ಸ್ಥಿತಿ, ಹಿಂದೆ ಇದ್ದ ಸೀತೆ ಬಳಸುವ ಭಾಷೆಗೂ ಬದಲಾದ ಸೀತೆ ಬಳಸುವ ಭಾಷೆಗೂ ವ್ಯತ್ಯಾಸವಿದೆ. ಕಾದಂಬರಿಕಾರರು ಚಿತ್ರಿಸಿರುವ ನೂರಾರು ಪಾತ್ರಗಳಲ್ಲಿ ಒಂದು ಮತ್ತೊಂದರಂತಿಲ್ಲ. ಒಂದೊಂದರ ಚಿತ್ರಣಕ್ಕೂ ಬಳಸುವ ಭಾಷಾದ್ರವ್ಯ ಬೇರೆ ಬೇರೆಯಾಗಿದೆ ಎನ್ನುವುದು ಗಮನಿಸಬೇಕಾದ ಅಂಶ ಪಾತ್ರ ಸನ್ನಿವೇಶ ಘಟನೆಗಳಿಗೆ ತಕ್ಕಂತೆ ವರ್ತಿಸುವ ಹೊಂದಿಕೊಳ್ಳುವ ಸ್ವರೂಪ ಸ್ವಧರ್ಮ ಪರಾವರ್ತನ ಶಕ್ತಿ ಶಬ್ದಗಳಿಗಿರುವುದರಿಂದಲೇ ಇಂಥ ವ್ಯಕ್ತಿ ಚಿತ್ರಣ ಸಾಧ್ಯ. "ಸೀತೆ ತಳತಳನೆ ಹೊಳೆಯುತ್ತಿದ್ದ ಬೆಳ್ಳಿಯ ಪಂಚಪಾತ್ರೆಯಲ್ಲಿ ಅದಕ್ಕಿಂತಲೂ, ಬೆಳ್ಳಗಿದ್ದ ಹಾಲನ್ನು ತುಂಬಿಕೊಂಡು ಅವುಗಳೆರಡನ್ನು ಮೀರಿದ ಮುಖ ಪ್ರಸನ್ನತೆಯಿಂದ, ಸೀತೆಯ ನಿರಿನಿರಿ ಮರ್ಮರ ಗೈಯುತ್ತಿರಲು ಬಳ್ಳಿಯಂತೆ ಬಳುಕಿ ನಡೆದು ತಂದೆಯ ಬಳಿಗೆ ಬಂದಳು" ಅಲಂಕಾರ ಚಮತ್ಕಾರಗಳಿಂದ ಮುಕ್ತವಾಗಿದ್ದರೂ ಈ ಸಾಲುಗಳು ಸೀತೆಯ ಮುಗ್ಧತೆಯನ್ನು ಪರಿಶುದ್ಧತೆಯನ್ನು ಮನಮುಟ್ಟುವಂತೆ ರಂಜಿಸುತ್ತವೆ.

ಕಾದಂಬರಿಯಲ್ಲಿ ಭಾಷೆಯು ಕಾಲದಿಂದ ಕಾಲಕ್ಕೆ ಸ್ಥಿತ್ಯಂತರ ಹೊಂದುತ್ತಿರುವುದನ್ನು ಸೂಚಿಸುತ್ತದೆ. ಆಯಾಯ ಪಾತ್ರಕ್ಕನುಗುಣವಾಗಿ ಬಳಕೆಯಾಗಿದೆ.

ಅಭಿವ್ಯಕ್ತಿ : ಈ ಕಾದಂಬರಿಯು ಯಶಸ್ವಿಯಾಗಿರುವುದೇ ಅದರೆ ಅಭಿವ್ಯಕ್ತಿ ವಿಧಾನದಿಂದ, ಕೃತಿಯಲ್ಲಿ ಅಧ್ಯಾಯಗಳಿಗೆ ಶೀರ್ಷಿಕೆಯನ್ನು ಕೊಡುತ್ತಾ ಹೋಗಿರುವ ಲೇಖಕರು ಅದು ಒಂದಕ್ಕೊಂದು ಸಂಬಂಧವಿರುವಂತೆ ಬಹಳ ಜಾಣ್ಮೆಯಿಂದ ಜೋಡಿಸಿದ್ದಾರೆ. ಸಾಂಕೇತಿಕತೆ ಮತ್ತು ಪ್ರಾತಿಮಿಕತೆ ಸಾಹಿತ್ಯಭಿವ್ಯಕ್ತಿಯ ಶ್ರೇಷ್ಟಸಾಧನಗಳಾಗಿರುವುದರಲ್ಲಿ ಅನುಮಾನವಿಲ್ಲ. ಈ ಕೃತಿಯಲ್ಲಿ ಸಂಕೇತ ಪ್ರಜ್ಞೆ ಕ್ರಿಯಾಶೀಲವಾಗಿದೆ. ಆರಂಭದಲ್ಲಿ ಹೂವಯ್ಯ ರಾಮಯ್ಯರು ಗಾಡಿಯಲ್ಲಿ ಬರುವಾಗ ಗಾಡಿ ಹಳ್ಳದಲ್ಲಿ ಬೀಳುವುದು ಹೂವಯ್ಯನಿಗೆ ಗಾಯವಾಗುವುದು. ಅದು ಮುಂದೆ ಅವನ ಜೀವನದಲ್ಲಾಗುವ ಘಟನೆಯನ್ನು ಸಂಕೇತಿಸುತ್ತದೆ, ಮುಂದುವರಿದು ಕಾನೂರಿಗೆ ಹೋಗಬೇಕಾದ ಗಾಡಿ ಮುತ್ತಳ್ಳಿಗೆ ಬರುವುದು ನಾಗಮ್ಮ, ಪುಟ್ಟಮ್ಮ ಮತ್ತು ವಾಸುವನ್ನೆ ಕೂರಿಸಿಕೊಂಡು ಮುತ್ತಳ್ಳಿಗೆ ಹೊರಡಬೇಕಾದ ಅನಿವಾರ್ಯತೆ ಕಾನೂರಿಗೂ ಮುತ್ತಳ್ಳಿಗೂ ಘಟಿಸಲಿರುವ ಸಂಬಂಧದ ಮೇಲೆ ಬೆಳಕು ಚೆಲ್ಲುತ್ತದೆ.

ಸೀತೆಯೇ ಬದುಕಿನ ವಿವರಗಳನ್ನೆ ಪ್ರತಿಮಾವಿಧಾನದಿಂದ ಹೇಳಿರುವ ರೀತಿ ಹಲ್ಲಿಯ ಕೃಪೆ ಎಂಬ ಅಧ್ಯಾಯದಲ್ಲಿ ಬರುತ್ತದೆ. ಗೋಡೆಯ ಮೇಲೆ ಬರೆದ ಸೀತೆಯ ಪ್ರೇಮ ಶಾಸನವನ್ನು ಅಳಿಸುವುದು. ಮುಂದೆ "ಮುತ್ತಳ್ಳಿಯ ಶಾಮಯ್ಯಗೌಡರ ಮನೆಯ ಜಗಲಿಯಲ್ಲಿ ಪ್ರಕಾಶಮಾನವಾಗಿ ಉರಿಯುತ್ತಿದ್ದ ಲ್ಯಾಂಪಿನ ಬೆಳಕಿಗೆ ಮೋಹಿತವಾಗಿ ನಾಲ್ಕಾರು ದೀಪದ ಹುಳುಗಳು ಹಾರಾಡುತ್ತಿದ್ದವು". ಇಲ್ಲಿ ಬರುವ ವಾಕ್ಯ ಸೀತೆಯ ಜೀವನದಲ್ಲಿ ಬರುವ ಮೂವರು ಪುರುಷರನ್ನು ಕುರಿತೇ ಸಂಕೇತಿಸುತ್ತದೆ.

ಸಿಂಗಪ್ಪಗೌಡ ಮತ್ತು ಲಕ್ಷ್ಮಿಯರ ಸಂವಾದದಲ್ಲಿರುವ ಮುಗ್ಧತೆ. ಸೀತೆಯ ಅಂತರಂಗದ ಮೇಲೆ ಪ್ರಭಾವ ಬೀರುತ್ತದೆ. ಲಕ್ಷ್ಮಿಯ ಅಳು ಸೀತೆಯ ಮನಸ್ಸಿನ ಅನುರಾಗ ಅದು ಹೊರಬಾರಲಾರದ ಒತ್ತಡ. ಹೀಗೆ ಇವಳ ಅಳುವೇ ಸೀತೆಯ ಅಂತರಂಗಕ್ಕೆ ಹಿಡಿದ ಬಹಿರಂಗ ಪ್ರತಿಮೆಯಾಗಿರುತ್ತದೆ.

ಬೈರ ಮತ್ತು ಗಂಗ ಹೊಂಡವನ್ನು ತೆಗೆಯುವಾಗ ಮೀನು ಇದೆಯೋ ಇಲ್ಲವೊ ಎಂಬುದನ್ನು ಪರೀಕ್ಷಿಸುವುದು. "ಸ್ವಲ್ಪ ಕಾಲದಲ್ಲಿಯೇ ಹೊಂಡದ ನೀರು ಬತ್ತಿದಂತೆಲ್ಲ ಹೆಚ್ಚು, ಹೆಚ್ಚು ಬಗ್ಗಡವಾಯಿತು" ಇದು ಸೀತೆಯಲ್ಲಿ ಶಾರೀರಿಕವಾಗಿ ಆಗುತ್ತಿದ್ದ ಬದಲಾವಣೆಯನ್ನು ವರ್ಣಿಸುತ್ತದೆ. ಹೊಂಡವನ್ನೇ ಸಂಪೂರ್ಣವಾಗಿ ಬರಿದು ಮಾಡಿ ತಮಗೆ ಬೇಕಾದ ಮೀನು, ಏಡಿ, ಚಟ್ಟಂಗಿ ಮುಂತಾದ ಜಲಜಂತುಗಳನ್ನೆ ಸೋಸಿ ತೆಗೆಯುತ್ತಿರುವುದು ಸೀತೆಯ ಬದುಕಿನ ಶೋಷಣೆಯನ್ನೇ ಅತಿ ಮಾರ್ಮಿಕವಾಗಿ ಪೂಜಿಸುತ್ತದೆ. ಶಶಪ್ರಸಂಗ, ರಾಮಯ್ಯನ ಬದುಕನ್ನು ಪ್ರತಿಧ್ವನಿಸುತ್ತದೆ. ಗಂಗನಿಗೆ ನೀರು ಹಾವು ಕಚ್ಚುವುದು. ಕೈಗೆ ಸುತ್ತಿಕೊಳ್ಳುವುದು. ರಾಮಯ್ಯನ ಹಿಡಿತದಿಂದ ತಪ್ಪಿಸಿಕೊಳ್ಳಲು ಸೀತೆ ಎಷ್ಟೆಲ್ಲಾ ಪ್ರಯತ್ನಿಸಿದರೂ ಸಾಧ್ಯವಾಗುವುದಿಲ್ಲ ಎಂಬುದನ್ನೆ ಸೂಚಿಸುತ್ತದೆ.

ಇಷ್ಟೆ ಅಲ್ಲದೆ ಹೋತ ಬಹಳ ಸಾಂಕೇತಿಕವಾಗಿ ಮಹತ್ವಪೂರ್ಣವಾಗಿ ಮೂಡಿಬಂದಿದೆ. ಹೂವಯ್ಯನಿಗೂ ಹೋತಕ್ಕೂ ಇರುವ ಸಾಂಕೇತಿಕ ಸಂಬಂಧ ಸ್ಪಷ್ಟವಾಗಿರುವುದರಿಂದ ಹೋತದ ಹೋರಾಟ ಬದುಕಿನ ಹೋರಾಟದ ಪ್ರತಿಮೆಯಾಗಿದೆ. ಹೂವಯ್ಯನ ಸಾತ್ವಿಕ ಹೋರಾಟಕ್ಕೆ ಹೋತದ ಸಂಕೇತ ಮುಖ್ಯವಾಗಿದೆ. ನಾಗಮ್ಮನ ಮೌಢ್ಯಕ್ಕೆ, ರಾಮಯ್ಯನ ನಂಬಿಕೆಗೆ ಎಲ್ಲದಕ್ಕೂ ಹೋತವೇ ಸಂಕೇತವಾಗಿ, ಅಭಿವ್ಯಕ್ತಿಯಲ್ಲಿ. ಪ್ರಾಣಿಪ್ರತಿಮೆಗಳನ್ನು ಬಹಳ ಸೊಗಸಾಗಿ ತಂದಿದ್ದಾರೆ. ಕಾದಂಬರಿಯ ಬೆಳವಣಿಗೆಯಲ್ಲಂತೂ ಈ ಹೋತದ ಪ್ರತಿಮೆಯು ಪ್ರಮುಖ ಪಾತ್ರ ವಹಿಸಿದೆ.

ಕಾದಂಬರಿಯ ಇಪ್ಪತ್ತೈದನೆಯ ಅಧ್ಯಾಯವಾದ ಸೀತೆಯ ಮನಸ್ಸಿನ ಮೊದಲನೆಯ ಸಿಡಿಲು, ಲಕ್ಷ್ಮಿಯ ಬೊಂಬೆಯಾಟ ಹೆಚ್ಚು ಅರ್ಥಪೂರ್ಣವಾಗಿದೆ. ಮಕ್ಕಳಾಟಿಕೆಗೂ ಭಾರತೀಯ ಜೀವನದಲ್ಲಿ ಕೌಟುಂಬಿಕ ಜೀವನದ ಅತಿ ಮಹತ್ವದ ಧಟ್ಟವಾದ ಮದುವೆಯ ವೇಳೆಯಲ್ಲಿ ಮುಖ್ಯವಾಗಿ ಹೆಣ್ಣಿಗೆ ಸಂಬಂಧಿಸಿದಂತೆ- ಹಿರಿಯರು ನಡೆಸುತ್ತಿದ್ದ ವ್ಯವಹಾರಕ್ಕೂ ಇರುವ ಸಾದೃಶ್ಯ. ಈ ಸಂದರ್ಭದಲ್ಲಿ ನೆನಪಾಗುತ್ತದೆ. ಲಕ್ಷ್ಮಿ ಎಣ್ಣೆ ಸುರಿಯುವುದು. ಗೊಂಬೆಯ ಸೀರೆ ಬಿಚ್ಚಿ ಹೋಗುವುದು ಎಲ್ಲವು ಸಾಂಕೇತಿಕವಾಗಿಯೇ ಮೂಡಿಬಂದಿದೆ.

ಸುಬ್ಬಮ್ಮ ಗಂಗೆಯ ಸಂಭಾಷಣೆಯಲ್ಲಂತೂ ಗಂಗೆ ಹೇಳುವ ಆತ್ಮಕತೆಯ ಹಿನ್ನೆಲೆಗೆ ನಿಲ್ಲುವ ಕುಕ್ಕುಟ ಮಾತೆಯ ಪ್ರಸಂಗ ವಂತೂ ಸಾಂಕೇತಿಕ ಪ್ರತಿಮೆಯಾಗಿ ಗಮನ ಸೆಳೆಯುತ್ತದೆ. ಇವರು ಮಾತಾಡುತ್ತ ಕುಳಿತಿದ್ದಾಗ ಗರುಡನೊಂದು ಮೇಲೆ ಆಕಾಶದಲ್ಲಿ ಹಾರಾಡಿ ಅಂಗಳದ ಕೆಸರಿನಲ್ಲಿ ಹೇಂಟೆಯೊಡನೆ ಮೇಯುತ್ತಿದ್ದ ಹೂಮರಿಗಳಗಾಗಿ ಹೊಂಚು ಹಾಕುತ್ತಿತ್ತು. ರುಚಿ-ರುಚಿಯಾದ ಕ್ರಿಮಿ ಬೋಜನದಲ್ಲಿ ಆಸಕ್ತವಾಗಿದ್ದ ಕುಕ್ಕುಟ ಸಂಸಾರವು ಅದನ್ನು ಕಾಣಲಿಲ್ಲ. ಗರುಡನು ಹಠಾತ್ತಾಗಿ ಮಿಂಚಿನ ವೇಗದಿಂದ ಸಿಡಿಲಿನಂತೆ ಎರಗಿತು. ಈ ಘಟನೆಯು ಕಾನೂರು ಮನೆತನದ ಮುಗ್ಧವೂ ಸುಸಂಸ್ಕೃತವೂ ಪ್ರಾಚೀನವೂ ಆದ ವಾತಾವರಣದಲ್ಲಿ ಗಂಗೆ ಆ ಮನೆಯ ಜವಾಬ್ಧಾರಿಯನ್ನು ಹೊರಲು ಶಕ್ತರಾದ ಯಾರು ಇಲ್ಲದ ಸಮಯವನ್ನು ಹುಡುಕಿ ತೆಗೆದು ವಿಸ್ತರಿಸುತ್ತಿರುವ ತನ್ನ ಬಾಳಂತೆ ಸುಬ್ಬಮ್ಮನ ಬದುಕಿಗೆ ಮುಳುವಾಗುವುದನ್ನೆ ಅತ್ಯಂತ ಮಾರ್ಮಿಕವಾಗಿ ಸಂಕೇತಿಸುತ್ತದೆ. ಹೀಗೆ ಕಾದಂಬರಿಯುದ್ದಕ್ಕೂ ಪ್ರತಿಮೆ, ಸಾಂಕೇತಿಕತೆಗಳು ಮೂಡಿ ಅಭಿವ್ಯಕ್ತಿಸಿವೆ.

ಕಾದಂಬರಿಯ ಅಭಿವ್ಯಕ್ತಿಯಲ್ಲಿ, ಮತ್ತೊಂದು ಗಮನಿಸಬೇಕಾದ ಅಂಶವೆಂದರೆ ಕನಸು, ಮನುಷ್ಯನ ಜಾಗ್ರದವಸ್ಥೆಯ ಜೀವನ ಅದ್ಭುತವಾದುದು ಪ್ರತಿದಿನ ರಾತ್ರಿಯೂ ನಿದ್ರಮಾಡುವಾಗಲೆಲ್ಲ ಕನಸು ಕಾಣುತ್ತಾರೆ. ಅಂತಹ ಕನಸು ಇಲ್ಲಿ ಹೇಗೆ ಮೂಡಿಸಿಯೆಂದರೆ, ಸೀತೆಯ ಕನಸಿನ ಸಂದರ್ಭ ಉಲ್ಲೇಖನೀಯವಾದುದಾಗಿದೆ.

"ಆ ಕನಸಿನಲ್ಲಿ ಭೂತ ಭವಿಷ್ಯ-ವರ್ತಮಾನಗಳೆಲ್ಲವೂ ಏಕಕಾಲದಲ್ಲಿ ಚಿತ್ರಿತವಾಗಿದ್ದವು. ಆ ದರ್ಶನದ ಕೇಂದ್ರದಲ್ಲಿ ಒಂದು ಅಲೌಕಿಕ ದೇವಮೂರ್ತಿ ಪ್ರತಿಷ್ಟಿತವಾಗಿತ್ತು. ಇತರ ಚಿತ್ರಗಳೆಲ್ಲ ಆ ಮೂರ್ತಿಯ ಸುತ್ತಲೂ ಹರಡಿದ್ದವು. ಸೀತೆ ತಾನು ಹೂವಯ್ಯ ಭಾವನಿಗೆ, ದಮಯಂತಿಯಾಗುತ್ತೇನೆ. ಚಂದ್ರಮತಿಯಾಗುತ್ತೇನೆ. ಸಾವಿತ್ರಿಯಾಗುತ್ತೇನೆ. ನಿಜವಾಗಿಯೂ ಸೀತೆಯಾಗುತ್ತೇನೆ. ಇದು ಸೀತೆಯ ಭವಿಷ್ಯವೆಲ್ಲವನ್ನು ಸೂಚ್ಯವಾಗಿ ತಿಳಿಸುತ್ತದೆ.

ಮತ್ತೊಂದು ಸಂದರ್ಭದಲ್ಲಿ ಇದಾವ ಪ್ರದೇಶ? ಇದಾವ ಬೆಟ್ಟ? ಇದಾವ ಕಾಡು? ನಾನೆಲ್ಲಿದ್ದೇನೆ? ಎಲ್ಲರಿಗಾಗಿ ಹೊರಟಿದ್ದೇನೆ? ಏಕೆ? ಇದೇನಿದು ನನ್ನ ಸಂಗಡ ಯಾರೂ ಇಲ್ಲವಲ್ಲ!........... ಅಯ್ಯೋ ನಾನೇಕೆ ಇಲ್ಲಿಗೆ ಬಂದೆ........... ಭೀಷಣವಾದ ಭೀಮಾಕಾರದ ಹೆಬ್ಬುಲಿಯೊಂದು ಮನುಷ್ಯನೊಬ್ಬನನ್ನು ಅರೆಯಟ್ಟಿ ಬರುತ್ತಿದೆ. ಮನುಷ್ಯ ನಿಸ್ಸಹಾಯಕನಾಗಿ ಕೂಗುತ್ತ ಓಡುತ್ತಿದ್ದಾನೆ......... ಓಡುತ್ತಿರುವವನು ಸಿಂಗಪ್ಪಗೌಡರ ಮಗ ಕೃಷ್ಣಪ್ಪನಲ್ಲವೆ?.......... ಹುಲಿ ರಾಮಯ್ಯನ ಮೇಲೆ ಹಾರಿತು. ಹೀಗೆ ಸೀತೆಯ ಕನಸುಗಳು ಮುಂದೆ ಆಗುವ ಅನಾಹುತವನ್ನೆ ಮೊದಲೇ ಸೂಚಿಸುತ್ತವೆ. ಸೀತೆಯ ರೋಗದಿಂದ ಅವಳಿಗಾದ ಅನುಭವಗಳಿಗೂ ಕೃಷ್ಣಪ್ಪನನ್ನೆ ಹುಲಿ ಹಿಡಿಯುವುದನ್ನು ಬಹಳ ಸುಂದರವಾಗಿ ಚಿತ್ರಿಸಿದ್ದಾರೆ ಲೇಖಕರು.

ಕಾದಂಬರಿಯ ಆರಂಭದಲ್ಲಿ ಬರುವ ಹೂವಯ್ಯನ ಕನಸು ಈ ಕನಸಿನ ಕಲ್ಪನೆಯು ಕಾದಂಬರಿಯ ಅಂತ್ಯದಲ್ಲಿ ಕಾನೂರು ಮನೆಯಲ್ಲಿ ಆಗುವ ದುರಂತವನ್ನೆ ಸೂಚಿಸುತ್ತದೆ.

ಈ ಕೃತಿಯ ಕೊನೆ ಕೊನೆಯಲ್ಲಿ ಬರುವ ಸುಬ್ಬಮ್ಮನ ದುಸ್ವಪ್ನ "ತಾನು ಒಂದು ಆಳವಾದ ಕಂದಕದ ಅಂಚಿನಲ್ಲಿ ನಿಂತಿದಾಳೆ. ಅದನ್ನು ದಾಟಬೇಕೆಂದು ಆಕೆಯ ಪ್ರಯತ್ನ. ಆದರೆ ಆ ಕಂದಕವೂ ಎರಡು ಮೂರು ಅಡಕೆ ಮರಗಳ ಎತ್ತರದ ಪ್ರಮಾಣವಿದೆ. ಅದರ ಪಾತಾಳದಲ್ಲಿ ಹೊಳೆಯೊಂದು ನೊರೆಗೆರೆದು ಭೋರೆಂದು ಕೊಚ್ಚಿ ಹರಿಯುತ್ತಿದೆ. ಸುಬ್ಬಮ್ಮನ ಎದೆ ಹೆದರಿ ಹೋಗಿದೆ. ಆಚೆಯ ದಡದಲ್ಲಿ ಚಂದ್ರಯ್ಯಗೌಡರು ನಿಂತು ಗೌರದ ಮೇಲೆ ದಾಟಿ ಬರುವಂತೆ ಕರೆಯುತ್ತಿದ್ದಾರೆ. ಚಂದ್ರಯ್ಯಗೌಡರು ಕೈಹಿಡಿಯುತ್ತಾರೆ............ ಸುಬ್ಬಮ್ಮ ನೋಡುತ್ತಾಳೆ ತನ್ನನ್ನು ಕೈಹಿಡಿದವರು ಚಂದ್ರಯ್ಯಗೌಡರಲ್ಲ ಸೇರೆಗಾರರು! ಸುಬ್ಬಮ್ಮ ಬಿಡಿಸಿಕೊಳ್ಳಲು ಯತ್ನಿಸುತ್ತಿದ್ದಾಳೆ. ಸೇರೆಗಾರರು ಬಿಗಿಯಾಗಿ ಅಪ್ಪಿ ಹಿಡಿಯುತ್ತಿದ್ದಾರೆ........... ಸುಬ್ಬಮ್ಮ ಪಾತಾಳದಲ್ಲಿ ಕೊಚ್ಚಿ ಹೋಗುತ್ತಿದ್ದಾಗ ಸುಬ್ಬಮ್ಮ ಹೆದರಿ ಸೇರೆಗಾರರನ್ನು ಮತ್ತೂ ಬಿಗಿಯಾಗಿ ಅಪ್ಪಿ ಹಿಡಿಯುತ್ತಾಳೆ. ಆದರೆ ಸೇರೆಗಾರರು ಸುಬ್ಬಮ್ಮನನ್ನು ರಭಸದಿಂದ ತಳ್ಳಿ ತೆಕ್ಕೆಯಿಂದ ಬಿಡಿಸಿಕೊಂಡು ಈಜಿ ದಡ ಸೇರುತ್ತಾರೆ. ಇದು ಸುಬ್ಬಮ್ಮನಿಗೆ ಮುಂದೆ ಸೇರೆಗಾರರಿಂದಾಗುವ ಅನ್ಯಾಯವನ್ನು ಮತ್ತು ಸೇರೆಗಾರರು ಪರಾರಿಯಾಗುವುದನ್ನೂ ಸೂಚಿಸುತ್ತದೆ.

ಪ್ರಕೃತಿಯು ಅಭಿವ್ಯಕ್ತಿಯಲ್ಲಿ ಪ್ರಮುಖ ಪಾತ್ರವಹಿಸಿದೆ. ಬೇಟೆಗೆ ಹೋಗುವ ಸಂದರ್ಭ ಅಲ್ಲಿನ ಪ್ರಕೃತಿ ಸೌಂದರ್ಯ, ಬಾಲದಿನಮಣಿಯ ಕೋಮಲ ಕಿರಣಗಳು ಕೋಟ್ಯಂತರ ಮೈಲಿಗಳಿಂದ ನಡೆದು ಬಂದು, ಮುತ್ತಳ್ಳಿ ಮನೆಯ ಹೆಬ್ಬಾಗಿಲಿನ ಹೊಸ್ತಿಲ ಮೇಲೆ ಕುಳಿತಿದ್ದ ಲಕ್ಷ್ಮಿಯ ಚೆಂಗೆನ್ನೆಗಳಿಗೆ ಬಿಸಿ ಮುತ್ತನಿಟ್ಟು ನಲಿಯುತ್ತಿದ್ದವು. ಸಂಧ್ಯಾಕಾಂತಿ ಕಾಡುಬೆಟ್ಟಗಳ ಮೇಲೆ ಕೆಂಗಾವಿಯರೆಚಿತು, ವೈಶಾಖ ಮಾಸದ ಒಂದು ಪೂರ್ಣಿಮಾ ರಾತ್ರಿ ಕೊನೆಗೊಂಡು ರಮಣೀಯವಾಗಿ ಪ್ರಾತಃಕಾಲವಾಗುತ್ತಿತ್ತು. ಇದು ಕಾನೂರು ಜನ ಹಳೆಯದರಿಂದ ನವ ಜೀವನಕ್ಕೆ ಕಾಲಿರಿಸುವುದನ್ನು ತಿಳಿಸುತ್ತದೆ. ಹೀಗೆ ಹೆಗ್ಗಡತಿಯಲ್ಲಿನ ಭಾಷೆ ಅಭಿವ್ಯಕ್ತಿಯನ್ನು ನೋಡಬಹುದು.

ಮಲೆಗಳಲ್ಲಿ ಮದುಮಗಳು ಹೆಗ್ಗಡತಿಗಿಂತ ವಿಶಿಷ್ಟವಾಗಿ, ವೈವಿಧ್ಯಮಯವಾಗಿಯೂ ಇರುವುದರಿಂದ, ಇಲ್ಲಿನ ಭಾಷೆಯು ಜೀವಂತವಾಗಿಯೇ ಇದೆ. ಇಲ್ಲಿ ಎಲ್ಲ ವರ್ಗದ ಜನರಿದ್ದು, ದಲಿತ ವರ್ಗದ ಪಾತ್ರಗಳೇ ಬಹಳ ಮುಖ್ಯವಾಗಿ ಕಾಣಿಸಿಕೊಂಡು ಅವರಷ್ಟೆ ಸಹಜತೆಯಿಂದ ಭಾಷೆ ಹರಳುಗಟ್ಟಿದೆ. ಅದು ಹೇಗೆ ಅನುಭವಕ್ಕೆ ಬರುತ್ತದೆಂದರೆ, ಹಕ್ಕಿಗಳ ಇಂಚರ, ಪ್ರಕೃತಿಯ ಸೊಬಗು, ನದಿದಡ, ಬೀಸುವ ತಂಗಾಳಿ– ಹೀಗೆ ನಿಸರ್ಗ ಪ್ರಿಯರಾದ ಲೇಖಕರಲ್ಲಿ ನಿಸರ್ಗವನ್ನೆ ವರ್ಣಿಸುವಲ್ಲಿ ಅತ್ಯಂತ ಸರಳವಾಗಿ, ಸುಲಭವಾಗಿ ಸೊಬಗಿನಿಂದ ಕಂಗೊಳಿಸಿಬ. ಪಾತ್ರದ ಮೆರುಗಿಗೆ ವರ್ಣನೆಗಳ ಚೆಲುವಿಗೆ, ಸಂವಾದಗಳ ಪರಿಣಾಮ ರಮಣೀಯತೆಗೆ ಕ್ರಿಯೆಯ ಹದವರಿತ ಗತಿ ನಿಯಂತ್ರಣಕ್ಕೆ ಮಾತಿನ ಮೋಡಿಯೇ ಮೂಲ. ಶಬ್ದ ಸಂಪತ್ತಿಲ್ಲದೆ, ಇದ್ದರೂ ಅವನ್ನು ಬಳಸುವ ನೈಪುಣ್ಯವಿಲ್ಲದ ಕಾದಂಬರಿಕಾರನ ಪಾತ್ರಗಳು ರೋಗಿಯಂತಾಗುತ್ತವೆ. ಭಾಷಾದ್ರವ್ಯವು ಪಾತ್ರಗಳಷ್ಟೆ ಕೃತಿಗೆ ಜೀವ ತುಂಬುತ್ತದೆ.

ಕಾದಂಬರಿಯ ಮುಖ್ಯಪಾತ್ರವಾದ ಪೀಂಚಲುವಿನಲ್ಲಿ ಗಂಡನ ಜೊತೆ ಮಾತನಾಡುತ್ತಾ. ಬೆಳಗಿನ ಜಾವದಲ್ಲಿ ಐತನಿಗೆ ತನ್ನ ಆಲಿಂಗನದಲ್ಲಿದ್ದು ತನ್ನನ್ನು ಆಲಂಗಿಸಿದ್ದ ಪೀಂಚಲು ಅಳುತ್ತಿರುವಂತೆ ಭಾಸವಾದಾಗ, ಯಾಕೆ ಪೀಂಚಲು ಅಳುತ್ತೀಯಾ? ಎಂದನು ಮೆಲುದನಿಯಲ್ಲಿ ಮುದ್ದಾಗಿ ಕರೆದು, ಚಿನ್ನಕ್ಕ ಅಳುತ್ತಿದ್ದರು! ನನಗೂ ಅಳು ಹಂಗಾಯ್ತು!

ಕನಸು ಕಂಡೆಯಾ ಏನು

ಅಲ್ಲ ಎಚ್ಚರಾಗಿತ್ತು. ಆ ವಾಟೆ ಹಿಂಡಿಲ ಹತ್ತಿರ ಅವರು ಅಳುತ್ತಿದ್ದರು.

ಅಳುವುದು ಯಾಕೆ ಸುಮ್ಮನೆ? ಮುಕುಂದಯ್ಯ ಹೇಳಿದ ಹಾಗೆ ಮಾಡಿದರಾಯ್ತು.

ಚಿನ್ನಕ್ಕನ ಮದುವೆ ಹೇಂಗೆ ಆಗುತ್ತದೆ ನೋಡುವಾ!"

ಮತ್ತೊಂದು ಸಂದರ್ಭದಲ್ಲಿ ಐತ "ಅಂವ ಸತ್ತ! ಅಂವ ಹೇಳುತ್ತಾನೇನು? ಅವನ ಹೆಣಾ! ನನ್ನಿಂದ ತಪ್ಪಾಯ್ತು ಪೀಂಚಲು. ನನಗೆ ಗೊತ್ತಾಯ್ತು ಆದರೆ ಏನು ಮಾಡಲಿ ..... ಮುಕುಂದಯ್ಯ ನನನ್ನು ನಂಬಿ ಹೇಳಿದ್ದರಲ್ಲ ಐತನಿಗೆ ಹೇಳಬೇಡ ಅವನದು ಹರಕುಬಾಯಿ, ಯಾರುಯಾರಿಗೆಲ್ಲ ಹೇಳಿಬಿಡುತ್ತಾನೆಂದು .... ಅದಕ್ಕೆ ನಾನು ಬಾಯಿ ಕಟ್ಟಿಕೊಂಡಿದ್ದೆ. ಅಲ್ಲಿನ ಪರಿಸರದ ಜೀವಿಗಳಾದ ಇವರಲ್ಲಿ ಈ ರೀತಿಯ ಭಾಷೆ ಹೊರಹೊಮ್ಮುತ್ತದೆ.

ಬದಲಾವಣೆಯತ್ತ ಹೋಗುತ್ತಿರುವ ದೇವಯ್ಯನ ಹೆಂಡತಿಯಾದ ದೇವಮ್ಮನಲ್ಲಿ ಇಸ್ಸಿ! ಥೂ! ಹೊಲೇರಿಗಿಂತಾ ಅತ್ತತ್ತ ಆ ಕಿಲಸ್ತರು! ನಮ್ಮ ಮುಕುಂದ ಹೇಳ್ತಿದ್ದ ಚಿಟ್ಟಳ್ಳಿ ಬಾವ ಆ ಪಾದ್ರೀನೆ ದೊಡ್ಡ ಪಂಡಿತ ಅಂತ ತಿಳುಕೊಂಡಾನೆ. ಕಲ್ಲೂರು ಗಣಪತಿ ದೇವಸ್ಥಾನದ ಹತ್ರ ಹೊಳೇದಂಡೆ ಮಂಟಪದಾಗೆ ಒಬ್ಬ ಗಡ್ಡದಯ್ಯ ಬಂದಿದಾನಂತೆ, ಈ ಪರ್ಪಂಚದಾಗೆ ಇರೋದೆಲ್ಲ ಅವನಿಗೆ ಗೊತ್ತಂತೆ. ಅವನ ಮುಂದೆ ಈ ಪಾದ್ರಿ ಸಿಂಹದ ಮುಂದೆ ಸಿಂಗಳೀಕ! .... ಅಂದ್ರೆ? ನಿಮ್ಮ ಪಾದ್ರಿ ಹೇಳೋದು ಮಾತ್ರ ಸತ್ಯ, ಬಾಕಿದ್ದೋರು ಹೇಳೋದೆಲ್ಲ ಸುಳ್ಳೋ? ಅದಕ್ಕೆ ಅಂತಕಾಣ್ತದೆ ಯಾರ್ಯಾರೊ ಏನೇನೊ ಆಡಿಕೊಳ್ಳೋದು ನಿಮ್ಮ ಸುದ್ದಿ!" – ಇದು ಮೇಲುಜಾತಿಗೆ ಸೇರಿದ ದೇವಮ್ಮನ ಭಾಷೆ ಆಕೆ ಅಶಿಕ್ಷಿತಳಾದ ಕಾರಣ ಅಲ್ಲಿನ ದೇಸಿಯ ಭಾಷೆಯನ್ನೆ ಕಾಣಬಹುದು.

ಚಿನ್ನಮ್ಮ ಮತ್ತು ಪೀಂಚಲು ನಡುವಿನ ಸಂಭಾಷಣೆಯಲ್ಲಿ

ಮಾರಮ್ಮನ ಗುಡಿ ಹತ್ರ ಅಂದಿ, ಇಲ್ಲಿಗ್ಯಾಕೆ ಬಂದ್ಯೇ?

"ನಂಗೆ ದಾರಿ ತಪ್ಪು ಕಣ್ರೋ, ದಾರಿನೇ ಗೊತ್ತಾಗದಿಲ್ಲ.

ಹಿಂದಕ್ಕೆ ಹೋಗಾನೆ, ಮತ್ತೆ ....

ಎಲ್ಲಿಗ್ರೋ? ಮನಿಗೇನ್ರೋ?

ನೀ ಹೋಗು ಮನೀಗೆ, ಬೇಕಾದ್ರೆ

ನೀವು?....

ನಾನಿಲ್ಲೆ ಕೆರೆಗೆ ಹಾರ್ತೀನಿ!"....

ನಿಮ್ಮ ದಮ್ಮಯ್ಯ, ಚಿನ್ನಕ್ಕಾ, ಹಂಗೆಲ್ಲಾ ಹೇಳಬ್ಯಾಡಿ?......

ಮತ್ತೆ? .... ಮನೀಗೆ ಹೋಗಾನೆ ಅಂತೀಯಲ್ಲಾ?....

ನೀವೇ ಹಿಂದಕ್ಕೆ ಹೋಗಾನ ಅಂದ್ರೆಲ್ಲಾ ಅದ್ಕೇ ಕೇಳ್ದೆ....?

ಇವರಿಬ್ಬರ ಮಾತಿನಲ್ಲಿ ಚಿನ್ನಮ್ಮ ಒಡತಿಯ ಧಾಟಿಯಲ್ಲಿಯೂ ಪೀಂಚಲು ಆಳಿನ ರೀತಿಯಲ್ಲಿಯೂ ಮಾತನಾಡುವುದು ಕಂಡು ಬರುತ್ತದೆ. ಪೀಂಚಲು ಚಿನ್ನಮ್ಮನಿಗೆ ಚಿಕ್ಕಂದಿನಿಂದಲೂ ಗೆಳತಿಯಾಗಿದ್ದರೂ ಅವಳು ತನ್ನ ಎಲ್ಲೆಯನ್ನು ಮಾತ್ರ ದಾಟಿಲ್ಲ.

ಹಾಗೆಯೇ ತಿಮ್ಮಿಯು ಬಳಸುವ ಭಾಷೆ ಅವಳ ಮುಗ್ಧತೆಯನ್ನು ತಿಳಿಸುತ್ತದೆ. ಗುತ್ತಿ ತಿಮ್ಮಿಯನ್ನು ಸನಿಮುಂಡೆ ನಿನ್ನ ದೆಸಿಂದ ನನ್ನ ನಾಯಿನೂ ಹೋಯ್ತಲ್ಲೆ ಎಂದಾಗ ತಿಮ್ಮಿ. "ನಾನ್ಯಾಕೆ ಅದೇನು ಸನಿಮುಂಡೆ? ಬೇಕಾದರೆ ನೀನೆ ಆಗು ಸನಿಮುಂಡೆ ಗಂಡ!" ಮುಂದೆ ಇವರ ಜಗಳ ಮುಂದುವರೆದು ಗುತ್ತಿಯು ಅವಳನ್ನು ನೋಡಿ ಅಳುವುದನ್ನು ಕಂಡು

ಯಾಕೆ ಅಳ್ತಿಯಾ? ಯಾರು ಸತ್ರೂ ಅಂತಾನೆ?

ಮತ್ತೆ? ಒಬ್ಬಳ್ನೇ ಕಾಡಿಗೆ ಕರಕೊಂಡು ಬಂದು ಕತ್ತರ್ಸಿ ಹಾಕ್ತೀನಿ ಅಂತೀಯಲ್ಲಾ? .... ನೀನು ಹೇಳ್ಳಿಲ್ಲಾ? ಕಡಿದುಹಾಕಿಬಿಡ್ತೀನಿ ಅಂತ? ಊಙ. ಊಙ. ಊಙ. ನಾ ಹೇಳ್ತನಿ ಅತ್ತಮ್ಮನ ಹತ್ರ ..... ಊಙ. ಊಙ. ಊಙ.

ಅಡಗಿಕೊಂಡಿರಾಕೆ ನಾ ಏನೂ ಕದ್ದುಕೊಂದು ಬಂದಿಲ್ಲ! ನಾನು ಬತ್ತೀನಿ. ನಿನ್ನ ಸೇಸನಾಯ್ಕರು, ಸೇಸನಾಯ್ಕರ ಮನೆ ನಾ ಕಾಣದಿದ್ದಲ್ಲ! ನಂಟರ ಮನೆಗೆ ಕರೆಕೊಂಡು ಹೋಗ್ತಿದ್ದೀನಿ ಅಂತ ಹೇಳು, ಕೇಳಿದ್ರೆ, ನಿನ್ನ ಸ್ವಾದರತ್ತೆ ಮಗಳಾಲ್ಲೇನು ನಾನು? .... ನಾ ಒಬ್ಬಳೆ ಇಲ್ಲಿರಾಕೆ ಹೆದರಿಕೆ – ತಿಮ್ಮಿಯ ಈ ಭಾಷೆಯು ಸರಳವಾಗಿಯೂ ಮುಗ್ಧವಾಗಿಯೂ ಇದ್ದು ನಿಸರ್ಗದಷ್ಟೆ ಸಹಜವಾಗಿದೆ.

ಬೈಗುಳವನ್ನು ಎಷ್ಟು ಸಹಜವಾಗಿ ಅವರ ಪ್ರಕೃತಿಯನ್ನು ತೋರಿಸುವಂತೆ ಬಳಸುತ್ತಾರೆಂದರೆ, ಕೆಳವರ್ಗದ ಸಣ್ಣಬೀರನ ಹೆಂಡತಿ ಲಕ್ಕಿಯು ಗಂಡನಿಗೆ ಹೊಡೆದವರನ್ನ ಬಯ್ಯುತ್ತಾ, "ಪಾಪಿ ಮುಂಡೇಗಂಡ! ಅವನ ಯದಿಗೆ ರಣ ಹೊಡಿಯಾ! ಅವನಿಗೆ ದೊಡ್ಡರೋಗ ಬರಾ! ಅವನ ಬಾಯಿಗೆ ಹುಳಾ ಬೀಳಾ! ಅವನ ರಟ್ಟಾ ಸೇದಿಹೋಗಾ! ಅವನ ಹೆಂಡ್ತಿ! ಹೀಗೆ ಸಹಸ್ರನಾಮಾರ್ಚನೆ ಮಾಡಿದಳು.

ಸೇಸಿಯು "ಸ್ವಾಮಿ, ನನ್ನ ಬೇಕಾದರೆ ಹೊಡೆದು ಹಾಕಿಸಿ! ನನ್ನ ಗಂಡ ಮಕ್ಕಳನ್ನು ಕೊನ್ನಬ್ಯಾಡಿ, ದಮ್ಮಯ್ಯ ನನ್ನ ತಂದೇ! ..... ತಿಮ್ಮಿ ಮತ್ತೆಲ್ಲಿಗೂ ಹೋಗಿಲ್ಲ. ಅವಳ ಮಾವನ ಮನೆಗೆ, ಸಿಂಬಾವಿ ಕೇರಿಗೇ ಹೋಗಿರಬೈದು. ನಿನ್ನೆ ಅವಳಾ ಬಾವ ಬಂದಿದ್ದ..... ಎನ್ನುವ ದಾಟಿ ತುಂಬಾ ವಿನಯದಿಂದ ಕೂಡಿದ್ದು, ಹೇಗಾದರೂ ತನ್ನ ಮಗನನ್ನು ರಕ್ಷಿಸಬೇಕು ಎಂದು ಹೇಳುವ ಗ್ರಾಮ್ಯ ಭಾಷೆ ಸಹಜವಾಗಿದೆ. ಹೀಗೆ ಬೈಗುಳಗಳಲ್ಲಿ ಆಡುಮಾತಿನಲ್ಲಿ, ಶಿಷ್ಟ ಭಾಷೆಯಲ್ಲಿ, ಉಪಮೆ, ರೂಪಕ ಅಲಂಕಾರಗಳಲ್ಲಿ ಲೇಖಕರು ತಮ್ಮದೇ ಆದ ಸ್ವಂತಿಕೆ ಮೆರೆದಿದ್ದಾರೆ.

ಭಾಷೆಯಲ್ಲಿ ಕಲಾತ್ಮಕತೆಯನ್ನು ತಂದಿರುವ ಲೇಖಕರು ದೇವಮ್ಮ ಮಗುವಿಗೆ ಹಾಲೂಡಿಸುವ ಸಂದರ್ಭದಲ್ಲಿ .... ತನ್ನ ಜೀವನದ ಸಾರ ಸರ್ವಸ್ವವೇ ಬಹಿರ್ಭೂತವಾಗಿ ಮುದ್ದಿನ ಮುದ್ದೆಯಂತಿದ್ದ ತನ್ನ ಕಂದನ ವಿದು ತುಟಿ ತನ್ನೆದೆಯ ಪೀಯೂಷ ಕಲಶದ ತೊಟ್ಟಿಗೆ ಸೋಂಕಿ ಅದನ್ನು ಚೀಪುತ್ತಿರುವಾಗ ಸಂಸಾರದ ಯಾವ ಕೋಟಲೆಯೂ ಅವಳ ರಸನಿದ್ರಾ ಸಮಾಧಿಗೆ ಭಂಗ ತರಲು ಸಮರ್ಥವಾಗಿರಲಿಲ್ಲ– ಹೀಗೆ ಉತ್ಕಟ ಭಾವನೆಗಳು ಮತ್ತು ಅನುಭಾವಗಳನ್ನು ವರ್ಣಿಸುವಾಗಲೆಲ್ಲ ಇಂತಹ ಭಾಷೆ ಕಾದಂಬರಿಯಲ್ಲಿ ಉಪಯೋಗವಾಗಿದೆ. ಐತ, ಪೀಂಚಲು, ತಿಮ್ಮಿ–ಗುತ್ತಿ, ಮುಕುಂದಯ್ಯ–ಚಿನ್ನಮ್ಮ, ಇವರುಗಳ ಲೈಂಗಿಕ ಸನ್ನಿವೇಶಗಳಲ್ಲಿಯೂ, ಸಂಸ್ಕೃತ ಪದಗಳ ಮತ್ತು ಪದಪುಂಜಗಳ ಉಪಯೋಗ, ಶೃಂಗಾರವನ್ನು ವರ್ಣಿಸುವಾಗ ಬರುವಂತಹ ಭಾಷೆ ಬೇರೆ ಸಂದರ್ಭದಲ್ಲಿ ಔಚಿತ್ಯವನ್ನರಿತು ಪ್ರಯೋಗವಾಗುತ್ತದೆ. ಉದಾ: ರತಿ–ಮನ್ಮಥರು, ಪ್ರಜ್ಞೆ ಜೇನುತುಪ್ಪದ ಕೆರೆಯಲ್ಲಿ ನಾಲಗೆಯಾಗಿ ಮುಳುಗಿ ಲಯವಾಗಿ ಬಿಟ್ಟಿತು, ಮುಕುಂದಯ್ಯನ ಗಾತ್ರವನ್ನು ತನ್ನೆರಡು ತೋಳುಗಳಿಂದಲೂ ತಬ್ಬಿ ಸೋತಳು – ಇಲ್ಲಿ ಪಾತ್ರ ವರ್ಣಿಸಲಾರದ ಅನುಭವವನ್ನು ಭಾಷೆ ವರ್ಣಿಸುತ್ತದೆ.

ಉಪಮ ರೂಪಕಗಳು ಭಾಷೆಯ ಸೌಂದರ್ಯದ ತೋರುಗನ್ನಡಿಗಳು, ಹಾಗೆಯೇ ಇಂತಹ ಉಪಮಾ ರೂಪಕಗಳು ಗದ್ಯಕ್ಕೆ ಕಾವ್ಯ ಸೌಂದರ್ಯವನ್ನೊದರಿಸುತ್ತವೆಂಬುದು ಸತ್ಯ.

ಮಿಂಚಿನ ಬೆಳಕಿನಲ್ಲಿ ಮಿಂಚುಗಳು ಕತ್ತಲೆ ನಾಯಿಯಾಯಿತೆಂಬಂತೆ,

ಮಹಾಕವಿ ಮಹಾಛಂದಸ್ಸಿನ ವಿನ್ಯಾಸವನ್ನು ಸವಿಯುವಂತೆ,

ಕಬ್ಬಿಣದ ಪೆಟ್ಟಿಗೆಯ ಖಜಾನೆಯನ್ನು ತೆರೆಯುವುದಕ್ಕೆ ಸಣ್ಣ ಬೀಗದ ಕೈ ಸಾಕಾಗುವಂತೆ

ಆ ಸದ್ದು ಶಾಂತಿಗೆ ಚಕ್ಕಳಗುಳಿಯಿಡುವಂತೆ ಕೇಳಿಸುತ್ತಿತ್ತು.

ಕತ್ತಲೆಗೆ ಸೋತು ಕಿರಿಚಿಕೊಂಡಿದ್ದ ಬೆಳಕು.

ಹೀಗೆ ಗದ್ಯದಲ್ಲಿಯೂ ಉಪಮೆಗಳನ್ನು ಅತ್ಯಂತ ಉಚಿತವಾಗಿ ಬಳಸಿಕೊಂಡಿದ್ದಾರೆ. ಎಂತಹ ಉಪಮೆಗಳನ್ನಾದರೂ ಸಂಸ್ಕೃತದ ಸ್ಪರ್ಶವಿಲ್ಲದೆ ದೇಸಿ ಕನ್ನಡದಲ್ಲೇ ತರಬಹುದು ಎಂಬುದಕ್ಕೆ ಮೇಲಿನ ಉಪಮೆಗಳೇ ಸಾಕ್ಷಿಯಾಗಿವೆ.

ಕಾದಂಬರಿಯಲ್ಲಿ ವರ್ಣನೆಯು ಪ್ರಮುಖವಾದ ಪಾತ್ರ ವಹಿಸುತ್ತದೆ. ಆದರೆ ವರ್ಣನೆಯೇ ಕಥೆಗಿಂತಲೂ ಪ್ರಧಾನವಗಬಾರದು. ಸನ್ನಿವೇಶ ವಾತಾವರಣ ನಿರ್ಮಾಣಕ್ಕೆ, ಮಾನವನ ಚಟುವಟಿಕೆಗಳಿಗೆ ವೇದಿಕೆಯಾಗಿ, ವರ್ಣನೆಗಳು ಕಾರ್ಯ ನಿರ್ವಹಿಸುತ್ತವೆ. ವರ್ಣನೆಯ ಭಾಷೆ ಕಥನ ಮತ್ತು ಸಂವಾದಗಳ ಭಾಷೆಗಿಂತ ಭಿನ್ನವಾಗಿರುತ್ತದೆ. ಈ

ಕಾದಂಬರಿಯಲ್ಲಿ ಬಹುಪಾಲು ಪ್ರಕೃತಿ ವರ್ಣನೆ ಕಂಡು ಬರುತ್ತದೆ. ಬಹುಶಃ ಕುವೆಂಪು ಅವರಷ್ಟು ಪ್ರಕೃತಿಯನ್ನು ಸಂಪೂರ್ಣವಗಿ ಬಳಸಿಕೊಂಡ ಕವಿ ಮತ್ತೊಬ್ಬನಿಲ್ಲ. ಗದ್ಯವಾಗಲಿ ಪದ್ಯವಾಗಲಿ ಪ್ರಕೃತಿಗೊಂದು ಪ್ರಮುಖ ಸ್ಥಾನ ಅವರಲ್ಲಿರುತ್ತದೆ. ಈ ಕೃತಿಗಳು ಗ್ರಾಮೀಣ ಜೀವನವನ್ನು ಚಿತ್ರಿಸುವ ಕಾದಂಬರಿಗಳಾದ್ದರಿಂದ ಮನೆ, ಕೊಟ್ಟಿಗೆ, ಅಡುಗೆಮನೆ, ಕಾಡು, ಬೇಟೆ, ಬೇಸಾಯ, ಕಳ್ಳಂಗಡಿ, ಕೋಳಿಯಂಕ, ಹಬ್ಬಹುಣ್ಣಿಮೆ, ಮುಂತಾದವುಗಳ ವರ್ಣನೆ ಚಿತ್ರಮಯವಾಗಿ ಮೂಡಿಬಂದಿದೆ.

ಈ ಕಾದಂಬರಿಗಳಲ್ಲಿ ಪಡೆನುಡಿಗಳು, ಜಾಣ್ಣುಡಿಗಳು, ಸುಭಾಷಿತಗಳು ಮತ್ತು ನುಡಿಗಟ್ಟುಗಳನ್ನು ವಿಶಿಷ್ಟವಾಗಿ ಬಳಸಿದ್ದಾರೆ. ಉದಾ: ಸುಬ್ಬಣ್ಣ ಹೆಗ್ಗಡೆಯವರ ಸಿಟ್ಟು ಜುಟ್ಟಿಗೂ ಏರಿತು, ಮುಂಗಾರು ಮಳೆ ಕಾಡೆಲ್ಲ ಕಂಗಾಲಾಗುವಂತೆ ದನಗೋಳಾಗಿ ಸುರಿಯತೊಡಗಿತು. ಕುದಿನೀರು ಎರಚಿದಂತಾಯ್ತು, ಗರ್ವ ಗುಟುರು ಹಾಕುತ್ತದೆ. ಸುವಾಸನೆಗಿಂತಲೂ ದುರ್ವಾಸನೆ ಬೇಗ ಹಬ್ಬುತ್ತದೆ. ಮುಪ್ಪಿಗೆ ಇರುಳೆಂದರೆ ಅನಿವಾರ್ಯವಾದ ಈತಿ ಭಾದೆ, ಅಪಾಯವು ಲಘುವಾಗಿದ್ದರೆ ವಿನೋದವಾಗುತ್ತದೆ. ಕುವೆಂಪು ಅವರ ಶೈಲಿಗೊಂದು ನಿದರ್ಶನ. ಗಾದೆಗಳ ಬಳಕೆಯಲ್ಲಿ ಬೇಲಿಗೆ ಓತಿಕ್ಯಾತ ಸಾಕ್ಷಿ, ಹಸಿಗಾಯದ ಮೇಲೆ ಬಿಸಿನೀರು ಹೊಯ್ಯು, ಇತ್ಯಾದಿ.

ಸಂಸ್ಕೃತವನ್ನು ಔಚಿತ್ಯವರಿತು ಹಿತಮಿತವಾಗಿ ಬಳಸುತ್ತಾರೆ. ವಿಭೂತಿ, ಭೂಷಿತ, ಕುಂಕುಮಾಂಕಿತ, ಜಪಾಸುಶೋಭಿತ ರುದ್ರವೇಷದ ನರಿಕೇಳವನಾಂತ ಕೈಯಲ್ಲಿ ನಿಂಗ ಹೊರವಂಟ, ವ್ಯಂಗ್ಯ ವಕ್ರತೆಯನ್ನು ಇಲ್ಲಿ ಗಮನಿಸಬಹುದು. ಮಲೆನಾಡಿನ ಪದಗಳ ಬಳಕೆಯಿದೆ. ದರೋಬಸ್ತು, ದಹಗೋಳು ಹಡಬೆ, ಬ್ಯಾಣ, ಗುಂಡಾಲ, ಬೂದಿಬುಕ್ಕ, ಸೀರುಡಿಕೆ, ವಡಾಸು ಚಟ್ಟಂಗಿ, ಮುರುಗಂಡು, ಉಗ್ಗ, ಜಾಜು ಇತ್ಯಾದಿ. ಭಾಷೆಯಲ್ಲಿ ಬೈಗುಳವನ್ನು ಕಲಾತ್ಮಕವಾಗಿ ತರುವ ಪ್ರಯತ್ನ ಮಾಡಿ ಭರಮೈ ಹೆಗಡೆಯವರ ಹೆಂಡತಿ ಜಟ್ಟಮ್ಮ ಮತ್ತು ಲಕ್ಕಮ್ಮರ ಜಗಳದಲ್ಲಿ

ಜಟ್ಟಮ್ಮ : ನಿನ್ನ ಕೊಡ್ತಾರಲ್ಲಾ ಹಂದೀ ಒಡ್ಡಿಗೆ!

ಲಕ್ಕಮ್ಮ : ಬರ್ತಾಳಲ್ಲಾ ನಿನ್ನ ಸವ್ತಿ ಹಂದಿ ಒಡ್ಡಿಯಿಂದ್ಲೆ!

ಜಟ್ಟಮ್ಮ : ನನ್ನ ಹೆಣ ಬೀಳ್ಬೇಕು ಆ ತಾಟಗಿತ್ತಿ ಈ ಮನೆಗೆ ಕಾಲಿಡಬೇಕಾದ್ರೆ ನಾನು
ಮಾಡದ್ದೆಲ್ಲ ಮಾಡೀನಲ್ಲ. ಇನ್ನೇಲ್ಲಿ ಬರ್ತಾಳೆ ಅವ್ಳು

ಲಕ್ಕಮ್ಮ : ಬರದಿದ್ರೇ..... ಈ ಬಂಜೆ ಮುಂಡೇನ ಕಟ್ಟಿಕೊಂಡು....
ಗುಂಡಿ ಹಾರ್ತಾನೇನು ಅಣ್ಣಯ್ಯ.

ಜಟ್ಟಮ್ಮ : ನಿನ್ನ ಮಿಂಡನ ತಂಗಿ ಅಲ್ಲದಿದ್ರೆ ಇನ್ಯಾರು ಇಲ್ಲೇನು ಹೆಣ್ಣು?
ನಿನ್ನ ಮಂಜಿ ಏನು ರತಿ ಅಂತಾ ಮಾಡೀಯ? ನಿನ್ನ ಗಂಡ ಆಗಾಂವ್ಳ

ಕರೀ ಹಂದಿ ಮುಸುಡೀಗೂ ಅವನ ತಂಗಿ ಅವನ ಮುಸುಡೀಗೂ
ಏನು ಇಲ್ಲಯತ್ಯಾಸ, ಆ ಹೂವಳ್ಳಿ ಹೆಣ್ಣು ಚಿನ್ನದಂಥಾ ಹೆಣ್ಣು
ಚಿನ್ನಮ್ಮನ್ನೇ ತರ್ತೀನಿ

ಲಕ್ಕಮ್ಮ : ತಂದ್ಕಾ ಆ ದದ್ದು ಹಿಡುಕ ಕುನ್ನೀನೆ! ಯಾರು ಬ್ಯಾಡ ಅಂತಾರೆ.

ಹಳ್ಳಿಯ ಮಾತುಗಳಲ್ಲಾಗಲಿ, ಬಯ್ಗುಳಗಳಲ್ಲಾಗಲಿ, ಸಂಸ್ಕೃತ ಪದಗಳ ಹಾರಾಟವಿಲ್ಲ. ಇಲ್ಲಿ ಮೇಲು ವರ್ಗದ ಮಹಿಳೆಯರಾದರೂ ಇವರು ಆಡುವ ಮಾತು ಇವರ ಸಂಸ್ಕೃತಿಯನ್ನೆ ಸಾರುತ್ತವೆ.

ದಕ್ಷಿಣ ಕನ್ನಡ ಜಿಲ್ಲೆಯ ಸೇರೆಗಾರ ರಂಗಪ್ಪನಲ್ಲಿ ತುಳು ಉಚ್ಚಾರಣೆ ಕಂಡುಬರುತ್ತದೆ. ಹಾಂಗೆ ಮಾಡೋರಾಗ ಕಾಣಿ! ಈವತ್ತೇ ಕಳಸಬೇಕಂಬ್ರೂ! ಕಳಿಸಿನಿ ಬಿಡೆನಿ! ನಾ ಹೋತೆ! ನಮ್ಮ ಗೌಡರಿಗೆ ತಲೆ ಕೆಟ್ಟಿತ್ತಂಬ್ರು!

ಹಾಗೆಯೇ ಮಲೆಯಾಳ ಕಣ್ಣಾಪಂಡಿತನ ಭಾಷೆ ಅದು ಅಗೆಯಿಸಿತ್ತಲ್ಲ ಪಾತ್ರಿಗಳೆ, ರಾತ್ರಿ ಕತ್ತಲಲ್ಲಿ ಹರಕೆ ಎತ್ತಿತ್ತಲ್ದಾ? ಇಲ್ಲ. ಹೇಳಿ ಹೇಳಿ ಸಾಕಾಯಿತು. ಈ ಸೂಲೆ ಮಕ್ಕಳಗೆ!" ಹೀಗೆ ಮಲೆಯಾಳ ಪಂಡಿತ ಸಂಸ್ಕಾರವನ್ನು ಹೇಳುತ್ತದೆ ಅವನ ಭಾಷೆ.

ಮಲೆಗಳಲ್ಲಿ ಮದುಮಗಳು ಕೃತಿಯ ಅಭಿವ್ಯಕ್ತಿಯು ಕನಸುಗಳು, ಜನ್ಮಾಂತರದ ವಿಚಾರಗಳು, ಮಳೆ, ಪ್ರತಿಮೆ ಮುಂತಾದವುಗಳ ಮೂಲಕ ಹೊರಹೊಮ್ಮಿದೆ.

ಮದುಮಗಳಾದ ಕೆಳಜಾತಿಯ ತಿಮ್ಮಿಯು ಗುತ್ತಿಯೊಡನೆ ಓಡಿ ಹೋಗಿ ಹುಲಿಕಲ್ಲು ನೆತ್ತಿಯ ಗುಡ್ಡದ ಮೇಲೆ ಮಲಗಿರುವಾಗ, ಅವಳ ಅತೀಂದ್ರಿಯವಾದ ಅನುಭವ ಮದುವೆಯ ಅಲಂಕಾರಗಳಿಂದ ಅಲಂಕಾರಗೊಂಡಿರುವ ಹೆಣ್ಣೊಬ್ಬಳನ್ನು ಪುರುಷ ಕುದುರೆಯನ್ನೇರಿ ಕಾಯುತ್ತ ನಿಲ್ಲುವುದು. ಸರ್ವಾಲಂಕಾರ ಭೂಷಿತೆಯಾದ ಮದುಮಗಳು ಅಲ್ಲಿಗೆ ಬಂದಾಗ ಅವಳನ್ನು ಕುದುರೆಯಲ್ಲಿ ಕೂರಿಸಿಕೊಂಡು ಹೋಗುತ್ತಾನೆ. ಈ ಘಟನೆ ಮುಕುಂದಯ್ಯ-ಚಿನ್ನಮ್ಮರ ನಡುವೆ ನಡೆಯುವ ಮದುವೆಯ ಭವಿಷ್ಯತ್ ದರ್ಶನವನ್ನು ಅತ್ಯಂತ ಸೂಕ್ಷ್ಮವಾಗಿ ಸೆರೆಹಿಡಿಯುವಲ್ಲಿ ಯಶಸ್ವಿಯಾಗಿ ಕಾದಂಬರಿಯ ಬೆಳವಣಿಗೆಗೆ ಪೂರಕವಾಗಿಯೂ, ಪೋಷಕವಾಗಿಯೂ ಅಭಿವ್ಯಕ್ತಿ ಪಡೆದಿದೆ.

ಚಿನ್ನಮ್ಮನ ಬಾಲ್ಯದಲ್ಲಾಗುವ ಸಣ್ಣ ಘಟನೆಗಳು ಮುಂದೆ ಅವಳ ಭವಿಷ್ಯವನ್ನು ಸೂಚ್ಯವಾಗಿ ತೋರಿಸುತ್ತವೆ. ಮುಂದೆ ಮುಕುಂದಯ್ಯನಿಗೆ ಗಡ್ಡದಯ್ಯನ ಮೂಲ ಆಗುವ ಅನುಭವ, ಹುಚ್ಚು ಹೆಗ್ಗಡತಿ ಎನಿಸಿಕೊಂಡಿದ್ದ ಮುಕುಂದಯ್ಯನ ಅಕ್ಕ ರಂಗಮ್ಮ ಮುಂದಿನ ಜನ್ಮದಲ್ಲಿ ಚಿನ್ನಮ್ಮ ಮುಕುಂದಯ್ಯರಿಗೆ ಮಗಳಾಗಿ ಹುಟ್ಟಿ ದೇವಮ್ಮನ ಮಗನಾದ

ಚೆಲುವಯ್ಯನನ್ನು ಮದುವೆಯಾಗುತ್ತಾಳೆ ಎಂದು ಗಡ್ಡದಯ್ಯ ನುಡಿಯುವ ಭವಿಷ್ಯ ಅದಕ್ಕೆ ಪೂರಕವಾಗಿ ರಂಗಮ್ಮ ಮಗುವಾದ ಚೆಲುವಯ್ಯನೊಂದಿಗೆ ವರ್ತಿಸುವ ರೀತಿ ವಿಶಿಷ್ಟವಾಗಿದೆ. ಅಲ್ಲದೆ ಗಡ್ಡದಯ್ಯನ ಭವಿಷತ್‌ದರ್ಶನ ಇಷ್ಟು ಬೇಗ ಅನಿರೀಕ್ಷಿತವಾಗಿ ಅದ್ಭುತವೆಂಬಂತೆ ಘಟಿಸುವುದಕ್ಕೆ ಪೋಷಕವಾಗಿ ರಂಗಮ್ಮ ಸತ್ತು ಪುಷ್ಟಿಕೊಡುವುದು. ಇವೆಲ್ಲವೂ ಕೂಡ ಅದ್ಭುತವಾಗಿ ಅಭಿವ್ಯಕ್ತಿ ಪಡೆದಿವೆ.

ಹುಲಿಕಲ್ಲು ನೆತ್ತಿಯ ಮೇಲೆ ಮದುವೆಯ ದಿನ ಮನೆಬಿಟ್ಟು ಹೋಗುವ ಚಿನ್ನಮ್ಮ, ಮಾರಮ್ಮನ ದೇವಸ್ಥಾನದಲ್ಲಿ ನಮಸ್ಕರಿಸುವಾಗ ಮೈಮೇಲೆ ಪ್ರಜ್ಞೆಯಿಲ್ಲದಂತೆ, ಯಾವುದೋ ಶಕ್ತಿ ಆವಿರ್ಭವಿಸುವಂತೆ ವರ್ತಿಸುವ ರೀತಿ, ಅದಕ್ಕೆ ಪೂರಕವಾಗಿ ಕಲ್ಕತ್ತನಗರದಲ್ಲಿ ಸನ್ಯಾಸಿಗೆ ಕಾಣಿಸಿಕೊಳ್ಳುವ ಹಣತೆಯ ಸೊಡರು, ಬೆಳಕಲ್ಲದ ಬೆಳಕು ಬೀರಿ, ಗಾಳಿಗೆ ನಡುಗುತ್ತಿವೆ/ಹುಡುಗಿಯ ಆಕಾರವೊಂದು ವಿಗ್ರಹದ ಕಲ್ಲಿಗೆ ಅಡ್ಡಬಿದ್ದಿದೆ! ಪಕ್ಕದಲ್ಲಿ ಇನ್ನೊಂದು ಹುಡುಗಿಯ ಆಕಾರ ನಿಂತಂತಿದೆ. ಸಂನ್ಯಾಸಿ ಮತ್ತು ಚಿನ್ನಮ್ಮ ಇಬ್ಬರಿಗೂ ಆಗುವ ಅನುಭವದಲ್ಲಿ ಸಾದೃಶ್ಯವಿದೆ. ಆ ಸನ್ಯಾಸಿ ತಾನು ಮಹಾ ಸಂಘದ ಮಹಾಧ್ಯಕ್ಷ ಆ ಹೆಣ್ಣುಮಗಳ ಸಂಕಟ ಏನಿದ್ದರೂ ಪರಿಹಾರವಾಗಲಿ ಎಂದು ಆತ ಅಲ್ಲಿಂದಲೇ ಹೇಳುವುದು. ಈ ಎಲ್ಲವೂ ಮನೋಜ್ಞವಾಗಿದೆ.

ಕಾದಂಬರಿಯ ಆರಂಭ ಮುಕ್ತಾಯಗಳೆರಡೂ ಮಳೆಗಾಲದಲ್ಲಿಯೇ ಇವೆ. ಗುತ್ತಿ ಮಳೆಗಾಲದ ಒಂದು ದಿನ ಪ್ರಯಾಣಕ್ಕೆ ಹೊರಟು ನಿಂತಾಗ ಮೋಡಗಳು ಕಟ್ಟಿದ್ದು ಆತ ಸ್ವಲ್ಪ ದೂರ ಹೋಗುವಾಗ ಜೋರಾಗಿ ಮಳೆ ಸುರಿಯುತ್ತದೆ. ಚಿನ್ನಮ್ಮ ಪೀಂಚಲುವಿನೊಂದಿಗೆ ಮನೆಬಿಟ್ಟು ಓಡಿ ಹೋಗುವುದು ಮಳೆ ಜೋರಾಗಿ ಸುರಿಯುವಾಗಲೆ, ಮಳೆ ಇವಳಿಗೆ ಅನುಕೂಲಕರವಾಗಿದ್ದರೆ, ಅದೇ ಭರಮೈ ಹೆಗಡೆಗೆ ಮಳೆಯಿಂದ ಹಳ್ಳವೆಲ್ಲ ತುಂಬಿಹೋಗಿ ಸೊಂಟ ಉಳುಕಿ ಬರಲು ತಡವಾಗುತ್ತದೆ. ಕಾದಂಬರಿಯಲ್ಲಿ ಮುಕ್ಕಾಲು ಪಾಲು ಸ್ಥಾನ ಪಡೆದಿದೆ ಮಳೆ. ಕಾದಂಬರಿಯ ಕೊನೆಯಲ್ಲಿಯೂ ಮಳೆಗಾಲದ ಒಂದು ದಿನ ಸ್ತ್ರೀ ಪ್ರಕೃತಿಯಂತೆ ಹೊರಗೆ ಕೂರುವುದರೊಂದಿಗೆ ಬದುಕಿನ ಒಂದು ಪ್ರವಾಹವೇ ನಿಂತುಬಿಡುತ್ತದೆ. ಕಾದಂಬರಿಯಲ್ಲಿ ಗುತ್ತಿಯ ಸಂಗಾತಿ ನಾಯಿಹುಲಿಯನ ಪಾತ್ರ ಸಾಂಕೇತಿಕವಾಗಿದೆ. ನಾಯಿಯನ್ನು ತಿಮ್ಮಿಗಿಂತಲೂ ಹೆಚ್ಚು ಪ್ರೀತಿಸುವ ಗುತ್ತಿ ಅದರಿಂದಲೇ ನಾಯಿಗುತ್ತಿ ಎನಿಸಿಕೊಳ್ಳುತ್ತಾನೆ. ಆದರೆ ಜೋರುಮಳೆಯಿಂದಾಗಿ ತುಂಗಾನದಿ ಪ್ರವಾಹದಲ್ಲಿ ನಾಯಿಯು ಮುಳುಗುತ್ತದೆ. ಹೀಗೆ ಮಳೆ ಎಲ್ಲರ ಜೀವನದಲ್ಲಿಯೂ ಪ್ರವಾಹವಾಗಿ ಹರಿದಿದೆ.

ಅಂತಕ್ಕ ಸೆಟ್ಟಿಯ ಮಗಳು ಕಾವೇರಿಯ ಜೀವನದಲ್ಲಿ ಒಂದು ಉಂಗುರ ನಡೆಸುವ ಕಾರುಬಾರು, ಅನಾಹುತ ಅಷ್ಟಿಷ್ಟಲ್ಲ. ಇದೊಂದು ಸಾಂಕೇತಿಕವಾಗಿ ಮೂಡಿದೆ. ದೇವಯ್ಯ ಕಾವೇರಿಗೆ ಹಾಕಿದ್ದ ಉಂಗುರ, ಅವಳಿಂದ ಕಳೆದು ಹೋಗಿ ಅವಳ ದುರಂತ ಸಾವಿಗೆ ನಾಂದಿ ಹಾಡುತ್ತದೆ. ಕರೀಂ ಸಾಬಿಗೆ ದೊರೆತಿದ್ದ ಈ ಉಂಗುರ ಅವನ ಕುಟುಂಬದ ಕೆಟ್ಟ ಘಟನೆಗೂ ಕಾರಣವಾಗಿ, ಅದು ರಂಗಪ್ಪಸೆಟ್ಟರನ್ನು ಸೇರಿ, ನಂತರ ದೇವಯ್ಯ ಅದಕ್ಕಾಗಿ ಒಂದೇ ಸಮನೆ ಕಾವೇರಿಯನ್ನು ಪೀಡಿಸುವುದು. ಅದನ್ನು ಚೀಂಕ್ರ ಕದ್ದು ಸಾಬಿಗೆ ಕೊಡುವುದು. ಮೋಸದಿಂದ ಕಾವೇರಿಯನ್ನೆ ಉಂಗುರ ಕೊಡಿಸುತ್ತೇನೆಂದು ನಂಬಿಸುವುದು ಅವಳು ಅತ್ಯಾಚಾರಕ್ಕೆ ಬಲಿಯಾಗುವುದು. ಈ ಉಂಗುರ ವಯಕ್ತಿಕ ಮಟ್ಟದಲ್ಲಿ ಅತ್ಯಂತ ದುರಂತಮಯವೂ, ಸಾಮಾಜಿಕ ಸ್ತರದಲ್ಲಿ ಮಹಾ ಪಾಪಮಯವೂ ಆಗಿ, ಭಯಂಕರ ಸಾಮರ್ಥ್ಯವನ್ನೆ ಪ್ರಕಟಿಸುತ್ತದೆ. ಧರ್ಮಸ್ಥಳದ ಅಸ್ತಿತ್ವಕ್ಕೆ ಧಕ್ಕೆ ತರುವಂಥ ದೊಡ್ಡ ಸಾಮಾಜಿಕ ವಿಡಂಬನೆಯಾಗಿದೆ ಈ ಉಂಗುರ.

ಹೀಗೆ ಕಾನೂರು ಹೆಗ್ಗಡತಿ ಮತ್ತು ಮಲೆಗಳಲ್ಲಿ ಮದುಮಗಳು ಕೃತಿಗಳಲ್ಲಿ ಭಾಷೆ ಮತ್ತು ಅಭಿವ್ಯಕ್ತಿಯನ್ನು ಒಟ್ಟಾರೆಯಾಗಿ ನೋಡಿದಾಗ, ಇಲ್ಲಿನ ಭಾಷೆಯನ್ನು ವ್ಯಕ್ತಿ ಭಾಷೆ, ವರ್ಗ ಭಾಷೆ, ಪ್ರಾದೇಶಿಕ ಭಾಷೆ, ಲಿಂಗಾಧಾರಿತ ಭಾಷೆ ಎಂದು ವಿಭಾಗಿಸಬಹುದು. ಇಲ್ಲಿ ಎಲ್ಲ ಜಾತಿಯ ಜನರು ಬ್ರಾಹ್ಮಣ, ಒಕ್ಕಲಿಗ, ಸೆಟ್ಟರು, ಹೊಲೆಯರು, ಮುಸ್ಲಿಂರು, ಕ್ರಿಶ್ಚಿಯನ್ನರು ಇರುವುದರಿಂದ ಅಯಾಯ ಜಾತಿ ದೃಷ್ಟಿಯಿಂದಲೂ ಭಾಷೆ ಬಳಕೆಯಾಗಿದೆ.

ಅಧ್ಯಾಯ – ೮

ಉಪಸಂಹಾರ

ಕನ್ನಡ ನವೋದಯ ಪಂಥದ ಅಗ್ರಮಾನ್ಯ ಸಾಹಿತಿಗಳಲ್ಲಿ ಕುವೆಂಪು ಒಬ್ಬರು. ಅವರ ಸಾಹಿತ್ಯ ಸೃಷ್ಟಿ ಅಪೂರ್ವವಾದದ್ದು. ಅನನ್ಯವಾದದ್ದು , ಅಷ್ಟೇ ಮೌಲಿಕವಾದದ್ದಾಗಿದೆ. ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಕೃಷಿ ನಡೆಸಿರುವ ಇವರು ಕವಿಯಾಗಿ, ವಿಮರ್ಶಕರಾಗಿ, ಮೀಮಾಂಸಕರಾಗಿ, ನಾಟಕಕಾರರಾಗಿ, ಕಾದಂಬರಿಕಾರರಾಗಿ ತಮ್ಮದೇ ಆದ ಸ್ವೋಪಜ್ಞತೆಯ ಛಾಪನ್ನೊತ್ತಿದ್ದಾರೆ. ಕುವೆಂಪು ಎಂದರೆ 'ವ್ಯಕ್ತಿಯಲ್ಲ ಶಕ್ತಿ' ಎಂಬಂತಹ ಶ್ರೇಷ್ಟ ಕವಿ. ಕವಿಯಾಗಿ ಸಾಹಿತ್ಯ ಜಗತ್ತನ್ನು ಬೆಳಗಿ ಯಶಸ್ವಿಯಾಗಿರುವಂತೆಯೇ, ಕಾದಂಬರಿಕಾರರಾಗಿಯೂ ಪ್ರಸಿದ್ಧರಾದವರು. ಈ ಪ್ರಸಿದ್ಧಿಗೆ ಕಾರಣೀಭೂತವಾಗಿರುವ ಕೃತಿರತ್ನಗಳೇ – 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಇವು ಶ್ರೇಷ್ಠಮಟ್ಟದ ಸಾಹಿತ್ಯದ ಸಾಲಿನಲ್ಲಿ ನಿಲ್ಲುವಂತಹ ಮಹಾನ್ ಕೃತಿಗಳಾಗಿವೆ.

ಕನ್ನಡ ಸಾಹಿತ್ಯದ ಗದ್ಯ ಪ್ರಕಾರಗಳಲ್ಲಿ ಕಾದಂಬರಿಗೆ ತನ್ನದೆ ಆದ ವೈಶಿಷ್ಟ್ಯವಿದೆ. ಇದೊಂದು ವಸ್ತುನಿಷ್ಠ ಸಾಹಿತ್ಯ ಪ್ರಕಾರವಾಗಿದ್ದು, ಅಂಗೈಯಲ್ಲಿನ ರಂಗಭೂಮಿ ಎನಿಸಿ, ನಿತ್ಯ ಬದುಕಿನ ಅನುಭವದ ಕಕ್ಷೆಯಲ್ಲಿ ಬಂದು ಹೋಗುವ ಜನರನ್ನು, ಸನ್ನಿವೇಶಗಳನ್ನು ಚಿತ್ರಿಸುವ ಜವಾಬ್ದಾರಿಯುತ ಕಾರ್ಯನಿರ್ವಹಿಸುತ್ತದೆ. ಅಷ್ಟೇ ಅಲ್ಲದೆ ಕಾದಂಬರಿ ಒಂದು ಪ್ರಭಾವಿ ಮಾಧ್ಯಮವಾಗಿದೆ. ೨೦ನೆಯ ಶತಮಾನದಲ್ಲಿ ಹಲವಾರು ಶ್ರೇಷ್ಠ ಕಾದಂಬರಿಗಳು ಕಾಣಿಸಿಕೊಂಡಿವೆ ಅಂತಹ ಶ್ರೇಷ್ಠತೆಯ ಸಾಲಿನಲ್ಲಿ ಸ್ಥಾನ ಪಡೆದಿರುವ ಕಾದಂಬರಿಗಳೇ ಮಲೆಗಳಲ್ಲಿ ಮದುಮಗಳು ಮತ್ತು ಕಾನೂರು ಹೆಗ್ಗಡತಿ. ಬೃಹತ್ತಿನಿಂದಷ್ಟೇ ಅಲ್ಲದೆ ಮಹತ್ತಿನಿಂದಲೂ ಮುಖ್ಯವಾದವು, ಮಲೆನಾಡಿನ ಜನ ಜೀವನವನ್ನು ಅತ್ಯಂತ ನೈಜವಾಗಿ, ಸಹಜವಾಗಿ ಚಿತ್ರಿಸಿರುವ ಮಲೆನಾಡಿನ ಮಹಾಕಾವ್ಯಗಳು.

ಇಲ್ಲಿ ಚರ್ಚಿಸಲ್ಪಟ್ಟಿರುವ ಅಂಶಗಳೆಂದರೆ ಎರಡೂ ಕಾದಂಬರಿಗಳ ಸ್ತ್ರೀ ಪಾತ್ರಗಳು ಅವು ಅಂದಿನ ಸಮಾಜದಲ್ಲಿ ನಿರ್ವಹಿಸಿದ ಪಾತ್ರವನ್ನು ವಿಸ್ತಾರವಾಗಿ ನಿರೂಪಿಸಲಾಗಿದೆ. ಕೃತಿಕಾರರ ಪರಿಚಯ ಅವರ ಸಾಧನೆ ಸಿದ್ಧಿಯನ್ನೆ ವಿಮರ್ಶಾತ್ಮಕವಾಗಿ ವಿವರಿಸಲಾಗಿದೆ. ಈ ವಿಷಯದ ಆಯ್ಕೆಗೆ ಕಾರಣ ಮತ್ತು ಉದ್ದೇಶವನ್ನು ಚರ್ಚಿಸಲಾಗಿದ್ದು, ಮೂರನೆಯ ಅಧ್ಯಾಯದಲ್ಲಿ 'ಹೆಗ್ಗಡತಿ'ಯಲ್ಲಿನ ಸ್ತ್ರೀ ಪಾತ್ರಗಳನ್ನು ಕುರಿತು, ಅವುಗಳ ವಯಕ್ತಿಕ ಬದುಕು, ಸಮಾಜ ವ್ಯವಸ್ಥೆ ಮತ್ತು ಅಂದಿನ ಸಮಾಜದ ಅವರ ನಡವಳಿಕೆಗಳ ಮೇಲೆ ಬೆಳಕು ಚೆಲ್ಲಿರುವ ಬಗೆಯನ್ನು ವಿವರವಾಗಿ ಹಿಡಿದಿಟ್ಟಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಮಲೆಗಳಲ್ಲಿ ಮದುಮಗಳು ಕೃತಿಯ ಸ್ತ್ರೀ ಪಾತ್ರಗಳ ಪರಿಚಯವನ್ನು ಮಾಡುವುದರ ಜೊತೆಗೆ, ಮಲೆನಾಡಿನ ಬದುಕು ಆ ಪಾತ್ರಗಳಲ್ಲಿ ಹೇಗೆ ಅನಾವರಣಗೊಂಡಿದೆ ಎಂಬುದರ ಬಗ್ಗೆ ಮೇಲುವರ್ಗದ ಸ್ತ್ರೀಯರು ಮತ್ತು ಕೆಳವರ್ಗದ ಸ್ತ್ರೀಯರ ವಯಕ್ತಿಕ, ಸಾಮಾಜಿಕ ಸ್ಥರದ ಬದುಕನ್ನು ಚರ್ಚಿಸಲಾಗಿದೆ. ೫ನೆಯ ಅಧ್ಯಾಯದಲ್ಲಿ ಎರಡೂ ಕಾದಂಬರಿಗಳಲ್ಲಿ ಅಂದಿನ ಕಾಲಘಟ್ಟ, ಸಂಸ್ಕೃತಿಗಳಿಗನುಗುಣವಾಗಿ ಪಾತ್ರಗಳು ಬೆಳೆಯುವ ವಿಧಾನ, ಅವುಗಳಿಗೆ ಲೇಖಕ ನೀಡಿರುವ ಮಹತ್ವ ಮತ್ತು ಎರಡರ ಪರಿಸರವೂ ಒಂದೇ ಆಗಿರುವುದರಿಂದ, ಎರಡೂ ಕೃತಿಗಳ ಸ್ತ್ರೀ ಪಾತ್ರಗಳನ್ನು ತೌಲನಿಕ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದರಲ್ಲಿನ ಸ್ತ್ರೀ ಪಾತ್ರಗಳಿಗಿರುವ ವೈಶಿಷ್ಟ್ಯ, ಸ್ವಭಾವ, ಪರಿಸ್ಥಿತಿಗಳಿಗನುಗುಣವಾಗಿ ಅವು ಬದಲಾಗುವ ರೀತಿಯನ್ನೇ ಚರ್ಚಿಸಲಾಗಿದ್ದು, ಹೆಗ್ಗಡತಿಯಲ್ಲಿನ ಮೇಲುವರ್ಗದ ಸ್ತ್ರೀಯರ ಪಾತ್ರ ಚಿತ್ರಣ, ಮದುಮಗಳಿನಲ್ಲಿ ಮೇಲುವರ್ಗ್ದ ಸ್ತ್ರೀಯ ಪಾತ್ರಗಳಷ್ಟೆ ಕೆಳವರ್ಗದ ಮಹಿಳೆಯ ಬದುಕನ್ನು ಸೆರೆಹಿಡಿದಿರ ' ವಿಧಾನವನ್ನೇ ಚರ್ಚಿಸಲಾಗಿದೆ.

೬ನೆಯ ಅಧ್ಯಾಯದಲ್ಲಿ ಸ್ತ್ರೀ ಪಾತ್ರ ಚಿತ್ರಣದಲ್ಲಿ, ಕೃತಿಕಾರನ ಮನೋಧರ್ಮ ಹೇಗೆ ವ್ಯಕ್ತವಾಗಿದೆ. ಪಾತ್ರ ಚಿತ್ರಣದಲ್ಲಿ ಎಂತಹ ವಿಶಿಷ್ಟತೆಯನ್ನು ಮೆರೆದಿದ್ದಾರೆ ಎಂಬ ಚರ್ಚೆಯಿದ್ದು, ಕೊನೆಯ ಅಧ್ಯಾಯದಲ್ಲಿ ಮಲೆನಾಡಿನ ಸ್ತ್ರೀಯರ ಭಾಷೆ ಮತ್ತು ಅಭಿವ್ಯಕ್ತಿ ವಿಧಾನವನ್ನು ನಿರೂಪಿಸಲಾಗಿದ್ದು, ವ್ಯಕ್ತಿಯಿಂದ ವ್ಯಕ್ತಿಗೆ ಭಾಷೆ ಹೇಗೆ ಬದಲಾವಣೆ ಹೊಂದಿದೆ ಎಂಬುದನ್ನು ವಿವರಿಸಲಾಗಿದೆ. ಹೀಗೆ ಈ ಮೇಲಿನ ಎಲ್ಲಾ ಅಂಶಗಳನ್ನು ಒಳಗೊಂಡ ಎರಡೂ ಕಾದಂಬರಿಗಳು ಒಂದಕ್ಕಿಂತ ಒಂದು ಭಿನ್ನವಾಗಿಯೂ, ಅದ್ಭುತವಾಗಿಯೂ ಅಲ್ಲಿನ ಸಾಮಾಜಿಕ, ಸಾಂಸ್ಕೃತಿಕ, ಬದುಕನ್ನು ಸೆರೆಹಿಡಿಯುತ್ತವೆ. ಕೆಳವರ್ಗದ ಸ್ತ್ರೀ ಪಾತ್ರಗಳು ಹೆಗ್ಗಡತಿಗಿಂತಲೂ ಮಲೆಗಳಲ್ಲಿ ಮದುಮಗಳು ಕೃತಿಯಲ್ಲಿ ಅತ್ಯಂತ ಸಹಜವಾಗಿ ಜೀವಂತವಾಗಿ ಮೂಡಿವೆ. ಹೆಗ್ಗಡತಿಯಲ್ಲಿ ಸೀತೆಯಂತಹ ಆದರ್ಶ ಪಾತ್ರವನ್ನು ತಂದ ಲೇಖಕರು ಮದುಮಗಳಿನಲ್ಲಿ, ಚಿನ್ನಮ್ಮನಂತಹ ಮುಗ್ಧ ಪಾತ್ರವನ್ನೇ ಚಿತ್ರಿಸಿದ್ದಾರೆ.

ಈ ನಿಬಂಧಧ ಉದ್ದೇಶವೇ ಸ್ತ್ರೀ ಪಾತ್ರಗಳ ಚಿತ್ರಣವಾಗಿರುವುದರಿಂದ ಇಲ್ಲಿ ಪುರುಷ ಪಾತ್ರಗಳ ಕಡೆಗೆ ಹೆಚ್ಚಿನ ಗಮನ ಹರಿಸದೆ ಕೇವಲ ಸ್ತ್ರೀಯರ ಪಾತ್ರಗಳಿಗಷ್ಟೇ ಮಹತ್ವ ನೀಡಲಾಗಿದ್ದು, ಪೂರಕವಾಗಿ ಕೆಲವು ಕಡೆಗಳಲ್ಲಿ ಪುರುಷ ಪಾತ್ರಗಳನ್ನು ಬಳಸಿಕೊಳ್ಳಲಾಗಿದೆ. ಇಲ್ಲಿನ ಸ್ತ್ರೀಯರು ತಾಯಿಯಾಗಿ, ಅಕ್ಕನಾಗಿ, ತಂಗಿಯಾಗಿ, ಎಂತಹ ಬಾಳನ್ನು ಬಾಳಿದ್ದರು ಎಂಬುದನ್ನೂ ಸ್ಪಷ್ಟಪಡಿಸಲಾಗಿದೆ. ಸಂಸ್ಕೃತಿ–ಸುಸಂಸ್ಕೃತಿ–ಕುಸಂಸ್ಕೃತಿಗಳ ಸಂಘರ್ಷದ ಚಿತ್ರಣವನ್ನು ಸ್ತ್ರೀ ಪಾತ್ರಗಳ ಮೂಲಕ ವಿಶ್ಲೇಷಣೆಮಾಡಲಾಗಿದೆ. ಉದಾ : ಹೆಗ್ಗಡತಿಯ ಸುಬ್ಬಮ್ಮನಂತಹ ಪಾತ್ರಗಳು.

ದಲಿತ ಪಾತ್ರಗಳನ್ನು ಅವು ಬೆಳೆದು ಬಂದಿರುವ ಪರಿಸರ, ಬದುಕನ್ನು ಅವರು ಕಂಡುಕೊಳ್ಳುವ ಬಗೆ, ಅವುಗಳ ಮುಗ್ಧತೆ, ಮುಂತಾದ ಸಾಮಾನ್ಯ ಮತ್ತು ಅಸಾಮಾನ್ಯ ವಿಷಯಗಳ ಮೇಲೆಯೂ ಬೆಳಕು ಚೆಲ್ಲಲಾಗಿದೆ. ಈ ಕಾದಂಬರಿಗಳ ಸ್ತ್ರೀ ಪಾತ್ರಗಳಾದ ಸೀತೆ, ಸುಬ್ಬಮ್ಮ, ನಾಗಮ್ಮ, ಗೌರಮ್ಮ, ಚಿನ್ನಮ್ಮ, ಪೀಂಚಲು, ತಿಮ್ಮಿ, ನಾಗಕ್ಕ, ನಾಗತ್ತೆ, ಲಕ್ಷ್ಮಿ, ಗಂಗೆ – ಹೀಗೆ ಅನೇಕ ಸ್ತ್ರೀಯರು ತಮ್ಮ ಬದುಕಿನಲ್ಲಿ ಏಳು–ಬೀಳುಗಳನ್ನು ಹೇಗೆ ಕಾಣುತ್ತಾರೆ. ಅಂದಿನ ಸಮಾಜ ಇವರನ್ನು ನಡೆಸಿಕೊಳ್ಳುತ್ತಿದ್ದ ರೀತಿಯನ್ನು ಚರ್ಚಿಸಲಾಗಿದೆ.

ದಲಿತ ವರ್ಗದ ಸ್ತ್ರೀಯರಾದ ಪೀಂಚಲು, ತಿಮ್ಮಿಯರ ಸರಳ ಸುಂದರ ದಾಂಪತ್ಯವನ್ನು ಅವರದೇ ಪರಿಭಾಷೆಯಲ್ಲೇ ಅಷ್ಟೇ ನೈಜವಾಗಿ ವಿವರಿಸಿರುವುದನ್ನು ಗಮನಿಸಿದರೆ ಶ್ರೀ ರಾಮಾಯಣ ದರ್ಶನಂ ನಂತಹ ಮಹಾಕಾವ್ಯ ಬರೆದ ಕವಿಗೆ ಪೀಂಚಲು, ತಿಮ್ಮಿಯಂತಹ ನೈಜ ಪಾತ್ರಗಳ ಸೃಷ್ಟಿ ಸಾಧ್ಯವೇ? ಎಂದು ಅಚ್ಚರಿ ಪಡುವಷ್ಟರ ಮಟ್ಟಿಗೆ ಇವು ಮೂಡಿವೆ. ನವ್ಯದವರಂತೆ ಸಹಜತೆ ಮರೆದಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ, ಈ ನಿಬಂಧದಲ್ಲಿ ಮಲೆನಾಡಿನ ಸ್ತ್ರೀಯರ ಪಾತ್ರಚಿತ್ರಣದ ಜೊತೆಗೆ ಅಲ್ಲಿನ ಜನರ ಜೀವನ ಭಾಷೆ, ಪರಿಸರ, ಪ್ರಕೃತಿ, ಪರಿಸರಕ್ಕನುಗುಣವಾಗಿ ಜೀವಂತವಾಗಿ ಬಿಂಬಿಸಲ್ಪತ್ತಿರುವುದನ್ನು ವಿಮರ್ಶಾತ್ಮಕವಾಗಿ ಚರ್ಚಿಸಲಾಗಿದೆ. ಕಣ್ತಪ್ಪಿನಿಂದ ಕೆಲವೊಂದು ಸ್ತ್ರೀ ಪಾತ್ರಗಳನ್ನು ಗುರುತಿಸಲು ಸಾಧ್ಯವಾಗಿಲ್ಲ ಮತ್ತು ಅಮುಖ್ಯವಾದ ಸ್ತ್ರೀ ಪಾತ್ರಗಳಾದ ಕಾಡಿ, ಹೂವಿ, ದೇಯಿ, ಸೀತಮ್ಮ, ಮುಂತಾದ ಪಾತ್ರಗಳನ್ನು ಕೈಬಿಡಲಾಗಿದೆ. ಕಾರಣ ಇವು ಸುಮ್ಮನೆ ಬಂದು ಹೋಗುವಷ್ಟು ಸರಳ ಪಾತ್ರಗಳು. ಯಾವುದೇ ಮಹತ್ವವನ್ನು ಈ ಪಾತ್ರಗಳು ಪಡೆದಿಲ್ಲ. ಇದೊಂದನ್ನು ಹೊರತು ಪಡಿಸಿದರೆ ಉಳಿದಂತೆ ಎಲ್ಲಾ ವರ್ಗದ, ಎಲ್ಲಾ ಸ್ತರದ ಗೌಡರು, ದಲಿತರೆನ್ನದೆ ಕಾಣಿಸಿಕೊಂಡಿರುವ ಸ್ತ್ರೀ ಪಾತ್ರಗಳು ಬದುಕನ್ನು ಎದುರಿಸುವ ವಿಧಾನ ಪುರುಷನ ದಬ್ಬಾಳಿಕೆ, ಶೋಷಣೆಯ, ನಡುವೆ ಅರಳಿರುವ ಬದುಕಿನ ಮೇಲೆ ಕನ್ನಡಿಹಿಡಿಯುವ ಪ್ರಯತ್ನವನ್ನು ಮಾಡಲಾಗಿದೆ.

ಕೊನೆಯವರೆಗೂ ಮದುಮಗಳಾಗಿಯೇ ಉಳಿಸಿ ಚಿನ್ನಮ್ಮನ ಮುಗ್ಧತೆಯ ಚಿತ್ರಗಳನ್ನು ಎಳೆಎಳೆಯಾಗಿ ಬಿಡಿಸಿರುವ ಕಾದಂಬರಿ ಮಲೆಗಳಲ್ಲಿ ಮದುಮಗಳು ಶೀರ್ಷಿಕೆಯನ್ನು ಸಾರ್ಥಕಪಡಿಸಿಕೊಂಡಿರುವುದಲ್ಲದೆ. ಸುಬ್ಬಮ್ಮನಂತಹ ಅಸಂಸ್ಕೃತ ಹೆಣ್ಣಿನ ಉನ್ನತಿ, ಅವನತಿಯ ಚಿತ್ರಣವನ್ನು ವಿಶದವಾಗಿ ನಿರೂಪಿಸಿರುವ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಒಂದು ಆದರ್ಶ ಕೃತಿಯಾಗಿದೆ. ಹೀಗೆ ಸ್ತ್ರೀ ನೆಲೆಯಿಂದಲೇ ಗುರುತಿಸಿಕೊಂಡಿರುವ ಈ ಕೃತಿಗಳು ಆಧುನಿಕ ಸಾಹಿತ್ಯದಲ್ಲಿ ಬೃಹತ್ತು ಮತ್ತು ಮಹತ್ತಿನಿಂದ ಅಮೂಲ್ಯವೆನಿಸಿದೆ.

* <> * <> *

~: ಗ್ರಂಥ ಋಣ :~

೧. ಕಾನೂರು ಹೆಗ್ಗಡತಿ	–	ಕುವೆಂಪು ಉದಯ ರವಿ ಪ್ರಕಾಶನ
೨. ಮಲೆಗಳಲ್ಲಿ ಮದುಮಗಳು	–	ಕುವೆಂಪು ಉದಯ ರವಿ ಪ್ರಕಾಶನ
೩. ಕೃತಿ ವಿಮರ್ಶೆ	–	ಸಂಪಾದಕರು, ಪ್ರೊ॥ ಅರವಿಂದ ಮಾಲಗತ್ತಿ ಕುವೆಂಪು ಅಧ್ಯಯನ ಸಂಸ್ಥೆ, ಪ್ರಕಟಣೆ
೪. ಕುವೆಂಪು ಕಾದಂಬರಿಗಳು	–	ಸಂಪಾದಕರು, ಗುರುಪಾದ ಮರಿಗುದ್ದಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
೫. ಕುವೆಂಪು ಸಾಹಿತ್ಯಾಲೋಕ	–	ಸಿ.ಪಿ.ಕೆ
೬. ಕುವೆಂಪು	–	ಸಂಪಾದಕರು, ಪ್ರಧಾನಗುರುದತ್ ನವ ಕರ್ನಾಟಕ ಪ್ರಕಾಶನ
೭. ಗಂಗೋತ್ರಿ	–	ಕುವೆಂಪು ಅವರ ಅಭಿನಂದನ. ಗ್ರಂಥ ಡಾ. ಹೆಚ್.ತಿಪ್ಪೇರುದ್ರಸ್ವಾಮಿ

~ * ~ * ~ * ~